ಫಲಜ್ಯೋತಿಷ್ಯ — ಜ್ಯೋತಿರ್ಮಾಲಾ

ನಕ್ಷತ್ರ ೪

ಪಂಚಾಂಗ ಪ್ರದೀಪ

ಲೇಖಕರು :

ಎನ್. ಕೆ. ಜೋಗಳೇಕರ

ತೇಜಸ್ವಿನಗರ, ಧಾರವಾಡ-೨

ಪ್ರಕಾಶಕರು :

ಎಸ್. ಕೆ. ಜೋಗಳೇಕರ
ತೇಜಸ್ವಿ ನಗರ
ಧಾರವಾಡ — ೫೮೦ ೦೦೨

ಬೆಲೆ : ರೂ. ೧೦-೦೦
(ಹತ್ತು ರೂಪಾಯಿಗಳು)

ಮೊದಲ ನುಡಿ

ಸಿರಿಗನ್ನಡದ ವಾಚಕರಿಗೆ ಫಲಜ್ಯೋತಿಷ್ಯ ಜ್ಯೋತಿರ್ಮಾಲೆಯ ನಾಲ್ಕನೆಯ ನಕ್ಷತ್ರವಾದ "ಪಂಚಾಂಗ ಪ್ರದೀಪ"ವೆಂಬ ಚಿಕ್ಕ ಹೊತ್ತಿಗೆಯನ್ನು ಒಪ್ಪಿಸಲು ಬಹಳ ಆನಂದವೆನಿಸುತ್ತದೆ.

ನನ್ನ ಹಿಂದಿನ ಕೃತಿಗಳನ್ನು ಆದರದಿಂದ ಓದಿದ ವಾಚಕರು ಜ್ಯೋತಿಶ್ಶಾಸ್ತ್ರದ ಶ್ರೀಕಾರವಾದ ಪಂಚಾಂಗವನ್ನು ಹೇಗೆ ನೋಡಬೇಕು ಎಂಬುದರ ಮೇಲೆ ಒಂದು ಚಿಕ್ಕ ಪುಸ್ತಕ ಬರೆಯಬೇಕೆಂದು ಅಪೇಕ್ಷಿಸಿದ್ದರಿಂದ ನಾನು ಇದನ್ನು ಬರೆಯಬೇಕಾಯಿತು.

ಈ ಪುಸ್ತಕದ ಸಲುವಾಗಿ ನಾನು ಹೆಚ್ಚೇನೂ ಹೇಳಬೇಕಾಗಿಲ್ಲ. ಇದರಲ್ಲಿ ಪಂಚಾಂಗವನ್ನು ಹೇಗೆ ನೋಡಬೇಕು ಎಂಬುದನ್ನು ಮಾತ್ರ ವಿವರಿಸಿದ್ದೇನೆ. ಇದರಿಂದ ನನ್ನ ವಾಚಕವೃಂದಕ್ಕೆ ಏನಾದರೂ ಉಪಯೋಗವಾದರೆ, ಈ ಲೇಖಕನ ಪ್ರಯತ್ನವು ಸಫಲವಾದಂತೆ.

ಈ ಲೇಖಕನಿಗೆ ಹೆಚ್ಚಿನ ಸ್ಫೂರ್ತಿಯನ್ನೂ, ಉತ್ಸಾಹವನ್ನೂ ತುಂಬಿದ ದಿ. ಪಂಡಿತ ಕೇಶವಶರ್ಮಾ ಗಲಗಲಿ ಅವರಿಗೆ ನನ್ನ ಅಭಿವಂದನೆಗಳನ್ನು ಸಲ್ಲಿಸುವದು ನನ್ನ ಕರ್ತವ್ಯ.

ಧಾರವಾಡ

ವಿಜಯಾ ದಶಮಿ

೧೦–೧೦–೧೯೫೬

ತಮ್ಮವನಾದ

ಎನ್. ಕೆ. ಜೋಗಳೇಕರ

ದ್ವಿತೀಯಾವೃತ್ತಿಯನ್ನು ಕುರಿತು

ಪಂಚಾಂಗ ಪ್ರದೀಪ ಪುಸ್ತಕದ ಮೊದಲನೆಯ ಮುದ್ರಣದ ಪ್ರತಿಗಳು ಮುಗಿದಿದ್ದು ಮೂರು ವರ್ಷಗಳು ಆಗಿದ್ದು ಅನೇಕ ಜನರಿಂದ ಹೆಚ್ಚಿನ ಪ್ರತಿಗಳಿಗೆ ಬೇಡಿಕೆ ಬಂದಿದ್ದರು ಸಹ ಈವರೆಗೆ ದ್ವಿತೀಯ ಮುದ್ರಣ ಕೈಕೊಳ್ಳಲು

ಸಾಧ್ಯವಾಗಿರಲಿಲ್ಲ. ಆದರೆ ಶ್ರೀ ಎಮ್. ಎ. ಕಾಮತ, ಹಿಂದ ಮಾತಾ ಪ್ರಿಂಟಿಂಗ ಹೌಸ ಇವರ ಸಹಕಾರದಿಂದ ಈಗ ಪ್ರಕಟಿಸಲು ಸಾಧ್ಯವಾಯಿತು. ಶ್ರೀ ಕಾಮಾತರಿಗೆ ಕೃತಜ್ಞತೆ ಸಲ್ಲುತ್ತದೆ.

ಧಾರವಾಡ — ಎನ್. ಕೆ. ಜೋಗಳೇಕರ

[illegible]

ತೃತಿಯಾವೃತ್ತಿಯನ್ನು ಕುರಿತು

"ಪಂಚಾಂಗ ಪ್ರದೀಪ" ಪುಸ್ತಕದ ಎರಡನೆಯ ಮುದ್ರಣದ ಪ್ರತಿಗಳು ಮುಗಿದು ಐದು ವರ್ಷಗಳಾಗಿದ್ದು, ಅನೇಕ ಜನರಿಂದ ಹೆಚ್ಚಿನ ಪ್ರತಿಗಳಿಗೆ ಬೇಡಿಕೆ ಬಂದಿದ್ದರೂ ಸಹ. ಈ ವರೆಗೆ ಪುನರ್ ಮುದ್ರಣ ಕೈಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ ಶ್ರೀ ಫಾಟಕರರ ಸಹಕಾರದಿಂದ ಇದೀಗ ಪ್ರಕಟಿಸಲು ಸಾಧ್ಯವಾಯಿತು. ಅದಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲುತ್ತದೆ.

ಎನ್. ಕೆ. ಜೋಗಳೇಕರ

[illegible] — ತೇಜಸ್ವಿನಗರ, ಧಾರವಾಡ—[illegible]

ಚತುರ್ಥ ಆವೃತ್ತಿಯನ್ನು ಕುರಿತು

ಪಂಚಾಂಗ ಪ್ರದೀಪ ಪುಸ್ತಕದ ತೃತಿಯ ಮುದ್ರಣದ ಪ್ರತಿಗಳು ಮುಗಿದು ಎಳು ವರ್ಷಗಳು ಆಗಿದ್ದು ಅನೇಕ ಜನರಿಂದ ಹೆಚ್ಚಿನ ಪ್ರತಿಗಳಿಗೆ ಬೇಡಿಕೆ ಬಂದಿದ್ದರೂ ಸಹ ಈ ವರೆಗೆ ಚತುರ್ಥ ಮುದ್ರಣ ಕೈಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ ಶ್ರೀ ಎನ್. ಕೆ ಪೋತ್ನೀಸ, ಕೃಪಾ ಮುದ್ರಣ ಇವರ ಸಹಕಾರದಿಂದ ಈಗ ಪ್ರಕಟಿಸಲು ಸಾಧ್ಯವಾಯಿತು. ಶ್ರೀ ಎನ್. ಕೆ. ಪೋತ್ನೀಸರಿಗೆ ಕೃತಜ್ಞತೆ ಸಲ್ಲುತ್ತದೆ.

ಧಾರವಾಡ — ಎನ್. ಕೆ. ಜೋಗಳೇಕರ

[illegible]

ಅರ್ಪಣೆ

ಸಹೃದಯತೆಯ ನೀರೆರೆದು

ಗೆಳೆತನದ ಸಸಿ ಬೆಳೆಸಿ ಏಕಜೀವವಾಗಿರುವ

ಶ್ರೀ ಮಹಾವೀರ ಭೀಮಪ್ರಸಾದ ಪಾಂಡೆ

ಅವರಿಗೆ

—ಲೇಖಕ

ಪರಿವಿಡಿ

॥ ಶ್ರೀ ॥

ಪಂಚಾಂಗ ಪ್ರದೀಪ

೧

ಪಂಚಾಂಗವೆಂದರೇನು ?

ವೇದದ ಮುಖ್ಯ ಅಂಗವಾದ ಜ್ಯೋತಿಷ್ಯಶಾಸ್ತ್ರವು ರವಿ, ಚಂದ್ರ, ಕುಜ (ಮಂಗಳ), ಬುಧ, ಗುರು, ಶುಕ್ರ, ಶನಿ, ರಾಹು, ಕೇತುಗಳೆಂಬ ನವ ಗ್ರಹಗಳಿಂದ ವಿಸ್ತರಿಸಲ್ಪಟ್ಟಿರುತ್ತದೆ. ರವಿ-ಚಂದ್ರರಿಂದ ತಿಥಿ, ನಕ್ಷತ್ರ, ಯೋಗ ಮತ್ತು ಕರಣಗಳು ಉತ್ಪನ್ನವಾಗುತ್ತವೆ. ಉದಯ ಹೋರಾ ನಾಯಕರಿಂದ ವಾರವು ನಿರ್ಣಯಿಸಲ್ಪಡುತ್ತದೆ. ಹೀಗೆ ತಿಥಿ, ವಾರ, ನಕ್ಷತ್ರ, ಯೋಗ, ಕರಣ ಈ ಪಂಚ (ಐದು) ವಿಷಯ (ಅಂಗ)ಗಳೊಳಗೊಂಡಿರುವ ಪುಸ್ತಕಕ್ಕೆ ಪಂಚಾಂಗವೆಂತಲೂ, ಈ ವಿಷಯಗಳನ್ನು ದೃಢಪಡಿಸುವ ಗಣಿತಕ್ಕೆ "ಸಿದ್ಧಾಂತ"ವೆಂತಲೂ ಹೆಸರು.

ಪಾರಿಭಾಷಿಕ ಶಬ್ದಗಳು

೧. ಸಂವತ್ಸರಗಳು

೧. ಪ್ರಭವ ೨. ವಿಭವ ೩, ಶುಕ್ಲ ೪. ಪ್ರಮೋದ ೫, ಪ್ರಜಾಪತಿ ೬. ಅಂಗಿರಸ ೭. ಶ್ರೀಮುಖ ೮, ಭಾವ ೯. ಯುವ ೧೦. ಧಾತು ೧೧. ಈಶ್ವರ ೧೨. ಬಹುಧಾನ್ಯ ೧೩. ಪ್ರಮಾಥಿ ೧೪. ವಿಕ್ರಮ ೧೫. ವೃಷ ೧೬. ಚಿತ್ರಭಾನು ೧೭. ಸುಭಾನು ೧೮. ತಾರಣ ೧೯. ಪಾರ್ಥಿವ ೨೦, ವ್ಯಯ ೨೧ ಸರ್ವಜಿತ ೨೨. ಸರ್ವಧಾರಿ ೨೩. ವಿರೋಧಿ ೨೪. ವಿಕೃತಿ ೨೫. ಖರ ೨೬. ನಂದನ ೨೭. ವಿಜಯ ೨೮. ಜಯ ೨೯. ಮನ್ಮಥ ೩೦, ದುರ್ಮುಖಿ ೩೧. ಹೇಮಲಂಬಿ

೩೨. ಏಲಂಬಿ ೩೩. ವಿಕಾರಿ ೩೪. ಶಾರ್ವರಿ ೩೫. ಪ್ಲವ ೩೬. ಶುಭಕೃತ
೩೭. ಶೋಭನ ೩೮. ಕ್ರೋಧಿ ೩೯. ವಿಶ್ವಾವಸು ೪೦. ಪರಾಭವ
೪೧. ಪ್ಲವಂಗ ೪೨. ಕೀಲಕ ೪೩. ಸೌಮ್ಯ ೪೪. ಸಾಧಾರಣ
೪೫. ವಿರೋಧಿಕೃತ ೪೬. ಪರಿಧಾವಿ ೪೭. ಪ್ರಮಾದಿ ೪೮. ಆನಂದ
೪೯. ರಾಕ್ಷಸ ೫೦. ನಲ ೫೧. ಪಿಂಗಲ ೫೨. ಕಾಲಯುಕ್ತ
೫೩. ಸಿದ್ಧಾರ್ಥಿ ೫೪. ರೌದ್ರ ೫೫. ದುರ್ಮತಿ ೫೬. ದುಂದುಭಿ
೫೭. ರುಧಿರೋದ್ಗಾರಿ ೫೮. ರಕ್ತಾಕ್ಷಿ ೫೯. ಕ್ರೋಧನ ೬೦. ಕ್ಷಯ.

೨. ತಿಥಿಗಳು

೧ ಪ್ರತಿಪದಾ ೨ ದ್ವಿತೀಯಾ ೩ ತೃತೀಯಾ ೪ ಚತುರ್ಥಿ ೫ ಪಂಚಮಿ ೬ ಷಷ್ಠೀ ೭ ಸಪ್ತಮೀ ೮ ಅಷ್ಟಮೀ ನವಮೀ ೧೦ ದಶಮೀ ೧೧ ಏಕಾದಶೀ ೧೨ ದ್ವಾದಶೀ ೧೩ ತ್ರಯೋದಶೀ ೧೪ ಚತುರ್ದಶೀ ೧೫ ಪೌರ್ಣಿಮಾ (ಶುಕ್ಲಪಕ್ಷದಲ್ಲಿ) ಅಮಾವಾಸ್ಯೆ (ಕೃಷ್ಣಪಕ್ಷದಲ್ಲಿ)

೩. ವಾರಗಳು

೧ ರವಿವಾರ ೨ ಸೋಮವಾರ ೩ ಮಂಗಳವಾರ ೪ ಬುಧವಾರ ೫ ಗುರುವಾರ ೬ ಶುಕ್ರವಾರ ೭ ಶನಿವಾರ

೪. ನಕ್ಷತ್ರಗಳು

೧ ಅಶ್ವಿನಿ ೨ ಭರಣಿ ೩ ಕೃತ್ತಿಕಾ ೪ ರೋಹಿಣಿ ೫ ಮೃಗಶಿರಾ ೬ ಆರಿದ್ರಾ ೭ ಪುನರ್ವಸು ೮ ಪುಷ್ಯ ೯ ಆಶ್ಲೇಷಾ ೧೦ ಮಘಾ ೧೧ ಪೂರ್ವಾ ೧೨ ಉತ್ತರಾ ೧೩ ಹಸ್ತ ೧೪ ಚಿತ್ರಾ ೧೫ ಸ್ವಾತಿ ೧೬ ವಿಶಾಖಾ ೧೭ ಅನುರಾಧಾ ೧೮ ಜ್ಯೇಷ್ಠಾ ೧೯ ಮೂಲಾ ೨೦ ಪೂರ್ವಾಷಾಢಾ ೨೧ ಉತ್ತರಾಷಾಢಾ ೨೨ ಶ್ರವಣಾ ೨೩ ಧನಿಷ್ಠಾ ೨೪ ಶತತಾರಕಾ ೨೫ ಪೂರ್ವಾಭಾದ್ರಪದ ೨೬ ಉತ್ತರಾಭಾದ್ರಪದ ೨೭ ರೇವತಿ

೫. ಯೋಗಗಳು

೧ ವಿಷ್ಕಂಭ ೨ ಪ್ರೀತಿ ೩ ಆಯುಷ್ಯಮಾನ್ ೪ ಸೌಭಾಗ್ಯ ೫ ಶೋಭನ ೬ ಅತಿಗಂಡ ೭ ಸುಕರ್ಮಾ ೮ ಧೃತಿ ೯ ಶೂಲ ೧೦ ಗಂಡ ೧೧ ವೃದ್ಧಿ ೧೨ ಧೃವ ೧೩ ವ್ಯಾಘಾತ ೧೪ ಹರ್ಷಣ ೧೫ ವಜ್ರ ೧೬ ಸಿದ್ಧ ೧೭ ವ್ಯತೀಪಾತ ೧೮ ವರಿಯಾನ ೧೯ ಪರಿಘ ೨೦ ಶಿವ ೨೧ ಸಿದ್ಧಿ ೨೨ ಸಾಧ್ಯ ೨೩ ಶುಭ ೨೪ ಶುಕ್ಲ ೨೫ ಐಂದ್ರ ೨೬ ವೈಧೃತಿ.

೬. ಕರಣಗಳು

೧ ಬವ ೨ ಬಾಲವ ೩ ಕೌಲವ ೪ ತೈತಿಲ ೫ ಗರ ೬ ವಣಿಜ ೭ ವಿಷ್ಟಿ (ಭದ್ರಾ) ೮ ಶಕುನಿ ೯ ಚತುಷ್ಪಾದ ೧೦ ನಾಗ ೧೧ ಕಿಂಸ್ತುಘ್ನ

೭. ಅಯನಗಳು

೧ ಉತ್ತರಾಯಣ ೨ ದಕ್ಷಿಣಾಯನ

೮. ಋತುಗಳು

೧ ವಸಂತ ೨ ಗ್ರೀಷ್ಮ ೩ ವರ್ಷ ೪ ಶರದ ೫ ಹೇಮಂತ ೬ ಶಿಶಿರ

೯. ರಾಶಿಗಳು ಹಾಗೂ ರಾಶ್ಯಾಧಿಪರು

ರಾಶಿ	ಅಧಿಪತಿ	ರಾಶಿ	ಅಧಿಪತಿ
ಮೇಷ	ಮಂಗಳ	ತುಲಾ	ಶುಕ್ರ
ವೃಷಭ	ಶುಕ್ರ	ವೃಶ್ಚಿಕ	ಮಂಗಳ
ಮಿಥುನ	ಬುಧ	ಧನು	ಗುರು
ಕರ್ಕ	ಚಂದ್ರ	ಮಕರ	ಶನಿ
ಸಿಂಹ	ರವಿ	ಕುಂಭ	ಶನಿ
ಕನ್ಯಾ	ಬುಧ	ಮೀನ	ಗುರು

೧೦. ಹಿಂದೂ ತಿಂಗಳುಗಳು

೧ ಚೈತ್ರ ೨ ವೈಶಾಖ ೩ ಜ್ಯೇಷ್ಠ

೪ ಆಷಾಢ ೫ ಶ್ರಾವಣ ೬ ಭಾದ್ರಪದ

೭ ಆಶ್ವೀನ ೮ ಕಾರ್ತಿಕ ೯ ಮಾರ್ಗಶೀರ್ಷ

೧೦ ಪೌಷ್ಯ ೧೧ ಮಾಘ ೧೨ ಫಾಲ್ಗುಣ

೧೧ ಮುಸಲ್ಮಾನೀ ತಿಂಗಳುಗಳು

೧ ಮೊಹರಮ್ ೨ ಸಫರ್ ೩ ರಬಿಲಾವಲ್

೪ ರಬಿಲಾಖಿರ ೫ ಜಮಾದಿಲಾವಲ್ ೬ ಜಮಾದಿಲಾಖಿರ್

೭ ರಜ್ಜಬ್ ೮ ಶಾಬಾನ್ ೯ ರಮಜಾನ್

೧೦ ಸವಾಲ್ ೧೧ ಜಿಲ್ಕಾದ್ ೧೨ ಜಿಲ್ಹೇಜ

೧೨ ಫಾರಸಿ ತಿಂಗಳುಗಳು

೧ ಫರವರ್ದಿ ೨ ಅರ್ದಿಬೇಹಸ್ತ ೩ ಖುರ್ದಾದ

೪ ತೀರ ೫ ಅಮರದಾದ ೬ ಶೇಹರೆವಾರ

೭ ಮೇಹೇರ ೮ ಅಬಾನ್ ೯ ಅಜೂರ್

೧೦ ದಯ ೧೧ ಬಹಮನ್ ೧೨ ಇಸ್ಫಿದರ್

೧೩ ಫಸಲೀ ತಿಂಗಳುಗಳು

೧ ಅಜೂರ (೩೦ ದಿನ) ೨ ದಯ (೨೯ ದಿನ)

ಬಹಮನ್ (೩೦ ದಿನ) ೪ ಇಸ್ಫಿದಾರ್ (೩೦ ದಿನ)

೫ ಫರವರ್ದಿ (೩೧ ದಿನ) ೬ ಅರ್ದಿಬೇಹಸ್ತ (೩೦ ದಿನ)

೭ ಖುರ್ದಾದ (೩೧ ದಿನ) ೮ ತೀರ (೩೧ ದಿನ)

೯ ಅಮರದಾದ (೩೧ ದಿನ) ೧೦ ಶೆಹರೇವಾರ (೩೧ ದಿನ)

೧೧ ಮೆಹೇರ (೩೦ ದಿನ) ೧೨ ಅಬಾನ (೩೦ ದಿನ)

೧೪. ಇಂಗ್ಲೀಷ ತಿಂಗಳುಗಳು

೧ ಜನೇವರಿ (೩೧ ದಿನ) ೨ ಫೆಬ್ರುವರಿ (೨೮, ೨೯ ದಿನ)

೩ ಮಾರ್ಚ (೩೧ ದಿನ) ೪ ಎಪ್ರಿಲ್ (೩೦ ದಿನ)

೫ ಮೇ (೩೧ ದಿನ) ೬ ಜೂನ (೩೦ ದಿನ)
೭ ಜುಲೈ (೩೧ ದಿನ) ೮ ಅಗಸ್ಟ (೩೧ ದಿನ)
೯ ಸಪ್ಟೆಂಬರ (೩೦ ದಿನ) ೧೦ ಅಕ್ಟೋಬರ (೩೧ ದಿನ)
೧೧ ನವ್ಹೆಂಬರ (೩೦ ದಿನ) ೧೨ ಡಿಸೆಂಬರ (೩೧ ದಿನ)

೧೫. ಕಾಲಮಾನ

೬೦ ವಿಪಳ = ೧ ಪಳ
೬೦ ಪಳ = ೧ ಘಟಿಕಾ
೬೦ ಘಟಿಕಾ = ೧ ದಿವಸ
೨ ಘಟಿಕಾ = ೧ ಮುಹೂರ್ತ
೩೦ ಮುಹೂರ್ತ } = ೧ ದಿವಸ
೬೦ ಘಟಿಕಾ } = ೧ ಅಹೋರಾತ್ರಿ
೧೫ ಅಹೋರಾತ್ರಿ = ೧ ಪಕ್ಷ
೨ ಪಕ್ಷ = ೧ ಮಾಸ
೨ ಮಾಸ = ೧ ಋತು
೨ ಅಯನ } = ೧ ವರ್ಷ
೧೨ ತಿಂಗಳು } = ೧ ವರ್ಷ

೬೦ ಪ್ರತಿ ವಿಕಲ = ೧ ವಿಕಲ
೬೦ ವಿಕಲ = ೧ ಕಲಾ
೬೦ ಕಲಾ = ೧ ಅಂಶ
೩೦ ಅಂಶ = ೧ ರಾಶಿ
೧೨ ರಾಶಿ = ೧ ಭಗಣ

ಆಂಗ್ಲ ಪದ್ಧತಿಯಂತೆ

೨೪ ಸೆಕೆಂಡು = ೧ ಪಳ
೧ ಮಿನಿಟು = ೨॥ ಪಳ
೨೪ ಮಿನಿಟು = ೧ ಘಟಿಕಾ
೧ ತಾಸು = ೨॥ ಘಟಿಕಾ
೩ ತಾಸು = { ೧ ಪ್ರಹರ / ೭॥ ಘಟಿಕಾ
೧ ದಿವಸ = ೮ ಪ್ರಹರ

೧ ಸೆಕೆಂಡು = ೧ ವಿಕಲ
೪ ಸೆಕೆಂಡು = ೧ ಕಲಾ
೬೦ ಸೆಕೆಂಡು = ೧೫ ಕಲಾ
೪ ಮಿನಿಟು = ೧ ಅಂಶ
೨ ತಾಸು = ೧ ರಾಶಿ

೬೦ ಪ್ರತಿ ಸೆಕೆಂಡು = ೧ ಸೆಕೆಂಡು
೬೦ ಸೆಕೆಂಡು = ೧ ಮಿನಿಟು
೬೦ ಮಿನಿಟು = ೧ ತಾಸು

೩೦ ದಿವಸ = ೧ ತಿಂಗಳು

೧೨ ತಿಂಗಳು = ೧ ವರ್ಷ

೩೬೫ ದಿ. ೬ ತಾ. ೯ ಮಿ. = ೧ ಸೌರ ವರ್ಷ

ಶಕೆಗಳು

ಯಾವುದೇ ಪಂಚಾಂಗ ತೆಗೆದುಕೊಂಡು ಅದರ ಹೊದಿಕೆ (ಕವರ್) ಯನ್ನು ನಿರೀಕ್ಷಿಸಿರಿ. ನಿಮಗೆ ಕಾಣುವುದೇನು? ಆ ಪಂಚಾಂಗದ ಹೆಸರು, ಆ ಸಂವತ್ಸರದ ಹೆಸರು, ಶಾಲಿವಾಹನ ಶಕೆಯ ವರ್ಷಗಳು, ವಿಕ್ರಮ ಶಕೆಯ ವರ್ಷಗಳು, ಹಿಜರೀ ಸನ್, ಇಸವೀ ಸನ್, ಫಸಲೀ ಸನ್— ಹೀಗೆ ಅನೇಕ ಸನ್‌ಗಳನ್ನು ಪಂಚಾಂಗಕರ್ತರು ಬರೆದಿರುತ್ತಾರೆ. ಈ ಶಕೆಗಳ ವಿವರಣೆಯನ್ನು ಇಲ್ಲಿ ಕೊಡಲಾಗಿದೆ.

ಶಾಲಿವಾಹನ ಶಕೆ

ಪ್ರಾಚೀನ ಕಾಲದಲ್ಲಿ ಗೋದಾವರೀ ತೀರದಲ್ಲಿ ಇರುವ ಪೈಠಣ ಎಂಬ ಕ್ಷೇತ್ರದಲ್ಲಿ ಶಾಲಿವಾಹನ ಎಂಬ ಹೆಸರಿನ ಅರಸನು ರಾಜ್ಯವಾಳುತ್ತಿದ್ದನು. ಅವನು ವಿಕ್ರಮ ಸಂವತ್ಸರದ ೧೩೫ನೇ ವರ್ಷದಿಂದ ತನ್ನ ಹೆಸರಿನ ಶಕವನ್ನು ಆರಂಭಿಸಿದನು. ಈ ಶಕೆಯ ವರ್ಷಾರಂಭವು ಚೈತ್ರ ಶುದ್ಧ ಪ್ರತಿಪದೆ ಇರುತ್ತದೆ.

ಹಿಜರಿ ಸನ್

ಮುಸ್ಲಿಮರು ತಮ್ಮ ಶಕೆಗೆ ಹಿಜರೀ ಸನ್ ಎನ್ನುತ್ತಾರೆ. ಹಿಜರೀ ಎಂದರೆ ಓಡಿಹೋಗು ಎಂದು ಅರ್ಥವಾಗುತ್ತದೆ. ಮಹಮ್ಮದ ಪೈಗಂಬರರು ಇಸ್ವಿಸನ್ ೬೨೨ನೇ ಜುಲೈ ೧೬ನೆಯ ತಾರೀಖಿನಂದು ಮಕ್ಕಾದಿಂದ ಮದೀನಾಕ್ಕೆ ಓಡಿಹೋದರು. ಅಂದಿನಿಂದ ಹಿಜರೀ ಶಕೆಯು ಪ್ರಾರಂಭವಾಯಿತು. ಈ ಶಕೆಯ ವರ್ಷಾರಂಭವು ಮೋಹರಮ್ ತಿಂಗಳ ಮೊದಲನೇ ತಾರೀಖು ಆಗುತ್ತದೆ. ಅಮಾವಾಸ್ಯೆಯ ನಂತರ ಯಾವ ದಿನ ಮೊದಲು ಚಂದ್ರದರ್ಶನವಾಗುವದೋ ಅದೇ ಅವರ ತಿಂಗಳ ಮೊದಲನೇ ದಿನ.

ನಮ್ಮ ಪಂಚಾಂಗದಂತೆ ಶುದ್ಧ ದ್ವಿತೀಯಾ ಅಥವಾ ತೃತೀಯಾಕ್ಕೆ ಮುಸಲ್ಮಾನೀ ತಿಂಗಳು ಪ್ರಾರಂಭವಾಗುತ್ತದೆ.

ಇಸ್ವಿ ಸನ್

ಕ್ರಿಸ್ತ ಜನರ ಶಕೆಗೆ ಇಸ್ವಿಸನ್ ಎನ್ನುತ್ತಾರೆ. ಯೇಸುಕ್ರಿಸ್ತನ ಜನ್ಮ ದಿನದಿಂದ ಈ ಶಕೆಯು ಬಳಕೆಯಲ್ಲಿ ಬಂದಿದೆ. ಈ ಶಕೆಯ ವರ್ಷಾರಂಭವು ಜನೆವರಿ ತಿಂಗಳ ಮೊದಲನೇ ತಾರೀಖಿಗೆ ಆಗುತ್ತದೆ.

ಶಾಲಿವಾಹನ ಶಕೆಯಲ್ಲಿ ೭೮ ವರ್ಷ ಕೂಡಿಸಿದರೆ ಇಸ್ವಿಸನ್ ಬರುತ್ತದೆ. ಅಥವಾ ವಿಕ್ರಮ ಸಂವತ್ಸರದಲ್ಲಿ ೫೬ ವರ್ಷ ಕಳೆದರೂ ಇಸ್ವಿಸನ್ ಬರುತ್ತದೆ.

ಫಸಲೀ ಸನ್

ಈ ಫಸಲೀ ಶಕೆಯು ಇಸ್ವಿಸನ್ನದ ೫೯೦ ವರ್ಷದ ನಂತರ ಬಳಕೆಯಲ್ಲಿ ಬಂದಿತು. ನಿಜಾಮರಾಜ್ಯದಲ್ಲಿ ಈ ಶಕೆ ಬಳಕೆಯಲ್ಲಿತ್ತು.

ಸಂವತ್ಸರ ಫಲ ಅಥವಾ ನವನಾಯಕರನ್ನು ಗುರುತಿಸುವದು

ಪ್ರತಿಯೊಂದು ಪಂಚಾಂಗದ ಪ್ರಾರಂಭದಲ್ಲಿ ಆ ಸಂವತ್ಸರದ ಫಲವನ್ನು ಕೊಟ್ಟಿರುತ್ತಾರೆ. ಮತ್ತು ಆ ಸಂವತ್ಸರದ ರಾಜ, ಮಂತ್ರಿ, ಸೇನಾಧಿಪತಿ, ಸಸ್ಯಾಧಿಪತಿ, ಧಾನ್ಯಾಧಿಪತಿಗಳು ಯಾರು ಯಾರು ? ಅವರವರ ಫಲಾಫಲಗಳಾವವು ? ಇವೆಲ್ಲವನ್ನು ವರ್ಷಾರಂಭದ ದಿನ (ಯುಗಾದಿ ದಿನ) ಓದುತ್ತೇವೆ.

ಪ್ರತಿ ವರ್ಷದ (ಪ್ರತಿ ಸಂವತ್ಸರದ) ನವನಾಯಕರನ್ನು ಹೇಗೆ ಕಂಡುಹಿಡಿಯಬೇಕೆಂಬುದನ್ನು ಇಲ್ಲಿ ವಿವೇಚಿಸಲಾಗಿದೆ.

ರಾಜ :— ಚೈತ್ರ ಶುದ್ಧ ಪ್ರತಿಪದೆಯು ಯಾವ ವಾರ ಇರುವದೋ ಆ ವಾರಾಧಿಪತಿಯೇ ಆ ಸಂವತ್ಸರದ ರಾಜನು. ಉದಾ : ಚೈತ್ರ ಶುದ್ಧ

ಪ್ರತಿಪದೆ (ಪಾಡ್ಯ) ಗುರುವಾರ ಇದೆ ಎಂದು ತಿಳಿಯುವಾ. ಗುರುವು ಆ ಸಂವತ್ಸರದ ರಾಜನು.

ಮಂತ್ರಿ :— ಮೇಷ ಸಂಕ್ರಾಂತಿಯು ಯಾವ ವಾರದಲ್ಲಿ ಪ್ರವೇಶ ವಾಗುವದೋ ಆ ವಾರಾಧಿಪತಿಯೇ ಆ ಸಂವತ್ಸರದ ಮಂತ್ರಿಯು. ಉದಾ : ಮೇಷ ಸಂಕ್ರಾಂತಿ ರವಿವಾರವಾಗಿದ್ದರೆ ರವಿಯೂ, ಸೋಮವಾರವಾಗಿದ್ದರೆ ಚುದ್ರನೂ— ಹೀಗೆ ಆ ಸುವತ್ಸರದ ಮಂತ್ರಿ ಎಂದು ತಿಳಿಯಬೇಕು.

ಅರ್ಘಾಧಿಪತಿ :— ಮಿಥುನ ಸಂಕ್ರಾಂತಿಯು ಯಾವ ವಾರದಲ್ಲಿ ಪ್ರವೇಶವಾಗುವದೋ ಆ ವಾರಾಧಿಪತಿಯೇ ಆ ಸಂವತ್ಸರದ ಅರ್ಘಾಧಿ ಪತಿಯು.

ಸಸ್ಯಾಧಿಪತಿ :— ಕರ್ಕ ಸಂಕ್ರಾಂತಿಯು ಯಾವ ವಾರದಲ್ಲಿ ಪ್ರವೇಶವಾಗುವದೋ ಆ ವಾರಾಧಿಪತಿಯೇ ಆ ಸಂವತ್ಸರದ ಸಸ್ಯಾಧಿ ಪತಿಯು.

ಸೇನಾಧಿಪತಿ :— ಸಿಂಹ ಸಂಕ್ರಾಂತಿಯು ಯಾವ ವಾರದಲ್ಲಿ ಪ್ರವೇಶವಾಗುವದೋ ಆ ವಾರಾಧಿಪತಿಯೇ ಆ ವರ್ಷದ ಸೇನಾಧಿ ಪತಿಯು.

ರಸಾಧಿಪತಿ :— ತುಲಾ ಸಂಕ್ರಾಂತಿಯು ಯಾವ ವಾರದಲ್ಲಿ ಪ್ರವೇಶವಾಗುವದೋ ಆ ವಾರಾಧಿಪತಿಯೇ ಆ ಸಂವತ್ಸರದ ರಸಾಧಿ ಪತಿಯು.

ಧಾನ್ಯಾಧಿಪತಿ :— ಧನು ಸಂಕ್ರಾಂತಿಯು ಯಾವ ವಾರದಲ್ಲಿ ಪ್ರವೇಶವಾಗುವದೋ ಆ ವಾರಾಧಿಪತಿಯೇ ಆ ಸಂವತ್ಸರದ ಧಾನ್ಯಾಧಿ ಪತಿಯು.

ನಿರಸಾಧಿಪತಿ :— ಮಕರ ಸಂಕ್ರಾಂತಿಯು ಯಾವ ವಾರದಲ್ಲಿ ಪ್ರವೇಶವಾಗುವದೋ ಆ ವಾರಾಧಿಪತಿಯೇ ಆ ಸಂವತ್ಸರದ ನಿರಸಾಧಿ ಪತಿಯು.

ಮೇಘಾಧಿಪತಿ :— ಆರಿದ್ರಾ ನಕ್ಷತ್ರವನ್ನು ಯಾವ ವಾರದಲ್ಲಿ ಸೂರ್ಯನು ಪ್ರವೇಶಿಸುವನೋ ಆ ವಾರಾಧಿಪತಿಯೇ ಆ ಸಂವತ್ಸರದ ಮೇಘಾಧಿಪತಿಯು.

ರವಿಯು ರಾಜನಾದರೆ ಯಾವ ಫಲಗಳು, ಚಂದ್ರನು ರಾಜನಾದರೆ ಯಾವ ಫಲಗಳು ಎಂಬುದು ನಿರ್ದಿಷ್ಟವಾಗಿರುತ್ತದೆ. ಅವನ್ನು ಆಯಾ ವರ್ಷದ ಪಂಚಾಂಗದಲ್ಲಿ ಕೊಡಲಾಗಿರುತ್ತದೆ.

ಪಶುನಾಯಕರನ್ನು ತೆಗೆಯುವದು

ಚೈತ್ರ ಶುದ್ಧ ಪ್ರತಿಪದೆಯು ರವಿವಾರ ಇಲ್ಲವೆ ಮಂಗಳವಾರ ಬಂದರೆ ಯಮನು ಆ ಸಂವತ್ಸರದ ಪಶುನಾಯಕನು ಆಗುತ್ತಾನೆ.

ಚೈತ್ರ ಶುದ್ಧ ಪ್ರತಿಪದೆಯು ಬುಧವಾರ ಇಲ್ಲವೇ ಶನಿವಾರ ಬಂದರೆ ಬಲರಾಮನು ಆ ಸಂವತ್ಸರದ ಪಶುನಾಯಕನಾಗುತ್ತಾನೆ.

ಚೈತ್ರ ಶುದ್ಧ ಪ್ರತಿಪದೆಯು ಗುರುವಾರ, ಶುಕ್ರವಾರ, ಸೋಮವಾರ ಬಂದರೆ ಗೋಪಾಲಕನು ಆ ಸಂವತ್ಸರದ ಪಶುನಾಯಕನಾಗುತ್ತಾನೆ.

ಈ ರೀತಿಯಾಗಿ ಆಯಾ ಸಂವತ್ಸರದ ಪಶುನಾಯಕರಾಗುತ್ತಾರೆ.

ಗೋಪಾಲಕನು ಪಶುನಾಯಕನಾದರೆ, ಪಶುಗಳು ಸಮೃದ್ಧಿಯಾಗಿ ಮೇವಿಗೆ ಕೊರತೆಯಿಲ್ಲದಂತೆ, ಹುಲ್ಲು ಮತ್ತು ಇತರ ಪೈರುಗಳು ಬೆಳೆದು ಪಶುಗಳು ಸುಖದಿಂದ ಇರುತ್ತವೆ. (ಸುಭಿಕ್ಷೆ)

ಬಲರಾಮನು ಪಶುನಾಯಕನಾದರೆ, ಪ್ರಪಂಚಕ್ಕೆಲ್ಲ ಮಳೆ ಚೆನ್ನಾಗಿ ಆಗಿ, ಸಕಲ ಪೈರುಗಳು ಬೆಳೆದು, ಪಶುಗಳೂ, ಜನರೂ ಸುಖದಿಂದ ಇರುವರು (ಮಧ್ಯಮ ಫಲ).

ಯಮನು ಪಶುನಾಯಕನಾದರೆ, ಅಲ್ಪ ಮಳೆಯಾಗಿ, ಪೈರುಗಳು ಕಡಿಮೆ ಬೆಳೆದು ಮೇವು ದುರ್ಲಭವಾಗುವದು, ಪಶುಗಳು ರೋಗಪೀಡಿತವಾಗುವವು ಹಾಗೂ ಅವುಗಳ ಸಂತತಿ ಸಹ ಬದುಕಲಾರವು, ಪಶುಗಳು ನಾಶಹೊಂದುತ್ತವೆ.

೧೦೫ ವಿಂಶೋಪಕಾಃ

ಯಾವುದೇ ಪಂಚಾಂಗವನ್ನು ನೋಡಿರಿ. ಮೊದಲು ನಮಗೆ ಕಾಣುವ ವಿಷಯವೆಂದರೆ, ಆಯಾ ವರ್ಷದ ಸಂವತ್ಸರ ಫಲ, ಸಂವತ್ಸರ ಫಲವಾದ

ಕೊಡಲೇ ನಾವು ನೋಡುವ ವಿಷಯವೆಂದರೆ, ೧೦೫ ವಿಂಶೋಪಕಾಃ ಎಂಬುದನ್ನು. ಅದರಲ್ಲಿ ಅನೇಕ ವಿಷಯಗಳನ್ನು (ಸಂಗತಿಗಳನ್ನು) ಬರೆದು ಅದರ ಮುಂದೆ ಅಂಕಿಗಳನ್ನು ಬರೆದಿರುತ್ತಾರೆ.

ಪ್ರತಿ ಸಂವತ್ಸರದಲ್ಲಿ ಅನೇಕ ಸಂಗತಿಗಳು ಜರುಗುತ್ತವೆ. ಆಯಾ ಸಂವತ್ಸರದಲ್ಲಿ ಉದ್ಯೋಗವೆಷ್ಟು? ಧಾನ್ಯವೆಷ್ಟು? ಮರಣವೆಷ್ಟು? ಕಳ್ಳರ ಹಾವಳಿ ಎಷ್ಟು–ಹೀಗೆ ವೃಷ್ಟಿಯಿಂದ ಸರ್ವನಿಷ್ಪತ್ತೀ ವರೆಗೆ ೧೦೫ ಸಂಗತಿಗಳನ್ನು ಕಲ್ಪಿಸಿ, ಆಯಾ ವರ್ಷದಲ್ಲಿ ಆಯಾ ಸಂಗತಿಗಳು ಎಷ್ಟೆಷ್ಟು ಜರುಗುವವು ಎಂಬುದನ್ನು ಈ ವಿಂಶೋಪಕಾಗಳಲ್ಲಿ ಕೊಡಲಾಗಿದೆ.

ಪ್ರಸ್ತುತ ಈ ಗ್ರಂಥದಲ್ಲಿ ಈ ವಿಂಶೋಪಕ ಅಂದರೇನು ಹಾಗೂ ಅದನ್ನು ಹೇಗೆ ನೋಡಬೇಕು ಎಂಬುದನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಅದನ್ನು ಹೇಗೆ ತೆಗೆಯುವರು ಎಂಬುದನ್ನು ಕೊಡಲಾಗಿಲ್ಲ.

ಯಾವುದೇ ಸಂಗತಿಯು ಆಯಾ ವರುಷದಲ್ಲಿ ಬಹಳ ಕಡಿಮೆ ಜರುಗುತ್ತದೆ ಅಂದರೆ ೫. ಬಹಳ ಹೆಚ್ಚು ಜರುಗುತ್ತದೆ ಅಂದರೆ ೨೦— ಹೀಗೆ ಗುಣಗಳನ್ನು ಕಲ್ಪಿಸಲಾಗಿದೆ. ಐದು ಅಥವಾ ಐದರಕ್ಕಿಂತ ಕಡಿಮೆ ಅಂದರೆ ಬಹಳೇ ಕಡಿಮೆ ಪ್ರಮಾಣ, ೫ ರಿಂದ ೧೦ ಅಂದರೆ ಕನಿಷ್ಟ ಪ್ರಮಾಣ, ೧೦ ರಿಂದ ೧೫ ಅಂದರೆ ಮಧ್ಯಮ ಪ್ರಮಾಣ, ೧೫ ರಿಂದ ೨೦ ರ ವರೆಗೆ ಬಹಳ ಪ್ರಮಾಣ ಅಂತಾ ತಿಳಿಯಬೇಕು. ಉದಾ : ಈ ವರ್ಷದ ಪಂಚಾಂಗದಲ್ಲಿ (೧೯೮೧ ಶಕೆ.) ರೌಪ್ಯ ಅಂತಾ ಬರೆದು, ಅದರ ಮುಂದೆ ೧೭ ಅಂಕಿ ಹಾಕಿದ್ದಾರೆ. ಇದರ ಅರ್ಥವಿಷ್ಟೆ — ಈ ವರ್ಷದಲ್ಲಿ ಬೆಳ್ಳಿಯು ಉತ್ಪಾದನೆ ಹೆಚ್ಚಾಗುವದು, ಅಂದರೆ ಬೆಳ್ಳಿಯ ದರ ಮಂದಿ ಆಗುವದು. ಇದರಂತೆ ತಾಮ್ರದ ಮುಂದೆ ೩ ಅಂಕಿಯನ್ನು, ಕಬ್ಬಿಣ (ಲೋಹ)ದ ಮುಂದೆ ೧೧ ಅಂಕಿಯನ್ನು ಹಾಕಿದ್ದಾರೆ. ಅಂದರೆ ಈ ವರುಷದಲ್ಲಿ ತಾಮ್ರವು ಬಹಳ ಕಡಿಮೆ ಪ್ರಮಾಣದಲ್ಲಿ ಉಪಲಬ್ಧವಾಗುವದು ಹಾಗೂ ತಾಮ್ರದ ದರವು ತೇಜಿ ಆಗುವದು ಅಂತಾ ಆಗುತ್ತದೆ. ಇದರಂತೆ ಲೋಹವು ಕೂಡ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತದೆ. ಧಾರಣೆಯಲ್ಲಿ ತೇಜಿ ಆಗುವುದು ಅಂತಾ ಆಗುತ್ತದೆ. ಇದರಂತೆ ಚೋರನಾಶ, ಅಗ್ನಿಭಯ, ಪಾಪ-ಪುಣ್ಯ,

ಮರಣ ಮೊದಲಾದ ಸಂಗತಿಗಳು ಯಾವ ಯಾವ ಪ್ರಮಾಣದಲ್ಲಿ ಆಗುತ್ತವೆ ಎಂಬುದನ್ನು ವಿಶೇಷಕದಲ್ಲಿ ಕೊಡಲಾಗಿದೆ.

ಆಯ–ವ್ಯಯ

ವಿಶೇಷಕ ಆದ ಕೂಡಲೇ ನಮಗೆ ಪಂಚಾಂಗದಲ್ಲಿ ಕಾಣುವ ವಿಷಯವೆಂದರೆ ಮೇಷಾದಿ ೧೨ ರಾಶಿಗಳ ಆಯಾವರ್ಷಗಳ ಆಯವ್ಯಯ ವಿವರಣೆಯು.

ಯಾರಿಗೆ ಜನ್ಮರಾಶಿ ಗೊತ್ತಿದೆಯೋ ಅವರಿಗೆ ಆಯಾವರ್ಷದ ತಮ್ಮ ಆರ್ಥಿಕ ಪರಿಸ್ಥಿತಿಯ ವಿಚಾರ ಮಾಡಲಿಕ್ಕೆ ಬರುತ್ತದೆ. ಯಾವ ಸಂವತ್ಸರದಲ್ಲಿ ಆಯ ಜಾಸ್ತಿ ಇರುತ್ತದೆಯೋ ಆ ವರ್ಷ, ಆರ್ಥಿಕ ಲಾಭ ಹಾಗೂ ಸೌಖ್ಯ ಇರುತ್ತದೆ (ಖರ್ಚು ಕಡಿಮೆ). ವ್ಯಯ ಜಾಸ್ತಿ ಇದ್ದರೆ ಕ್ಲೇಶ, ದುಃಖ, ಹಾನಿ, ಖರ್ಚು ಜಾಸ್ತಿ ಮೊದಲಾದ ದುಷ್ಟ ಫಲಗಳು ದೊರೆಯುತ್ತವೆ. ಆಯವ್ಯಯ ಸಮವಿದ್ದರೆ ಸಮ ಫಲಗಳೆಂದು ತಿಳಿಯಬೇಕು.

ಆಯ ವ್ಯಯಾದಿಗಳನ್ನು ತೆಗೆಯುವ ರೀತಿ

ಆಯಾ ರಾಶಿಯವರಿಗೆ ಆಯಾ ವರ್ಷಗಳ ಆಯವ್ಯಯಾದಿಗಳನ್ನು ತಿಳಿಯಬೇಕಾದರೆ ೨ ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕು.

೧) ವರ್ಷಾಧಿಪ. ಅಂದರೆ ಆಯಾ ಸಂವತ್ಸರದ ರಾಜ.

೨) ರಾಶ್ಯಾಧಿಪ.

೧) ಪಂಚಾಂಗದಲ್ಲಿ ಆಯಾ ಸಂವತ್ಸರದ ರಾಜನನ್ನು ಹೇಗೆ ತೆಗೆಯುತ್ತಾರೆ ಎಂಬುದನ್ನು ಹಿಂದೆ ಹೇಳಲಾಗಿದೆ.

೨) ಅವಕಹಡ ಚಕ್ರದಿಂದ ಪ್ರತಿಯೊಬ್ಬರ ರಾಶಿ ಹಾಗೂ ರಾಶ್ಯಾಧಿಪರನ್ನು ಕಂಡುಹಿಡಿಯಲು ಬರುತ್ತದೆ. ಈ ಎರಡು ಸಂಗತಿಗಳಿಂದ ಆಯಾರಾಶಿಗಳ ಆಯ–ವ್ಯಯಾದಿಗಳನ್ನು ಕಂಡುಹಿಡಿಯಲು ಬರುತ್ತದೆ.

ರವಿಯು ರಾಜನಾದರೆ ೬, ಚಂದ್ರನಾದರೆ ೨೭, ಮಂಗಳನಾದರೆ ೮, ಬುಧನಾದರೆ ೧೭, ಗುರು ಆದರೆ ೧೯, ಶುಕ್ರನಾದರೆ ೨೧, ಶನಿ ಆದರೆ ೧೦ ಹೀಗೆ ಆಯಾ ಗ್ರಹಗಳ ಧ್ರುವಿಕೆಗಳಿವೆ.

ಇನ್ನು ಜನ್ಮರಾಶ್ಯಾಧಿಪನ ಸಂಖ್ಯೆಗೆ ವರ್ಷಾಧಿಪನ ಸಂಖ್ಯೆ (ಆಯಾ

ಸಂವತ್ಸರದ ರಾಜ) ಯನ್ನು ಕೂಡಿಸಬೇಕು. ಬಂದ ಸಂಖ್ಯೆಗೆ ೩ ರಿಂದ ಗುಣಿಸಿ ಪುನಃ ೫ ಕೂಡಿಸಬೇಕು. ಈ ಸಂಖ್ಯೆಗೆ ೧೫ ರಿಂದ ಭಾಗಿಸಬೇಕು. ಬಂದ ಶೇಷವೇ ಆಯಾ ಸಂವತ್ಸರ ಆಯಾ ರಾಶಿಗಳ ಆದಾಯ; ಬಂದ ಭಾಗಾಕಾರಕ್ಕೆ ೩ ರಿಂದ ಗುಣಿಸಿ, ಈ ಸಂಖ್ಯೆಗೆ ೫ ಕೂಡಿಸಿ, ೧೫ ರಿಂದ ಭಾಗಿಸಬೇಕು; ಬರುವ ಶೇಷವೇ ಆಯಾ ಸಂವತ್ಸರದ ಆಯಾ ರಾಶಿಗಳ ವ್ಯಯವು ಆಗುತ್ತದೆ.

ಉದಾ : ಯಾವದೇ ಸಂವತ್ಸರದ ರವಿ ರಾಜನಿರುವ ಮೇಷ ರಾಶಿಯವರಿಗೆ ಆ ಸಂವತ್ಸರದಲ್ಲಿ ಆಯ-ವ್ಯಯಗಳನ್ನು ಹೇಗೆ ಕಂಡುಹಿಡಿಯಬೇಕು ?

ರವಿ ರಾಜನಾದರೆ ಆ ಸಂವತ್ಸರದ ವರ್ಷಾಧಿಪ ಮೇಷ. ಆ ರಾಶಿಯು ರಾಜ್ಯಾಧಿಪನೆಂದರೆ ಮಂಗಳ ಆದುದರಿಂದ :

೬ ವರ್ಷಾಧಿಪ
+೮ ರಾಜ್ಯಾಧಿಪ
೧೪ ಸಂಖ್ಯೆ ಬಂದಿತು.

ಇದಕ್ಕೆ ×೩
೪೨

ಇದಕ್ಕೆ ೫ ಕೂಡಿಸಬೇಕು +೫
೪೭ ಸಂಖ್ಯೆ ಬಂದಿತು.

೪೭ನ್ನು ೧೫ ರಿಂದ ಭಾಗಿಸಲು ೩ ಭಾಗಾಕಾರ ೨ ಶೇಷ. ಆದ್ದರಿಂದ ೨ ಇದು ಮೇಷ ರಾಶಿಯ ಆ ಸಂವತ್ಸರದ ಆಯವಿರುತ್ತದೆ.

ಇದರಂತೆ ೩ ಈ ಭಾಗಾಕಾರ ಸಂಖ್ಯೆಗೆ ೩ ರಿಂದ ಗುಣಿಸಲು ೩
×೩
೯

ಈ ಸಂಖ್ಯೆ ಬಂದಿತು. ಈ ಸಂಖ್ಯೆಗೆ ೫ನ್ನು ಕೂಡಿಸಬೇಕು. ೯ + ೫ = ೧೪ ಸಂಖ್ಯೆ ಬಂದಿತು. ೧೪ ಈ ಸಂಖ್ಯೆಗೆ ೧೫ ರಿಂದ ಭಾಗಿಸಲು ೦ ಭಾಗಾಕಾರ, ೧೪ ಶೇಷ ಉಳಿಯುತ್ತದೆ. ಆದ್ದರಿಂದ ೧೪ ಇದು ಆ ರಾಶಿಯ ಆ ಸಂವತ್ಸರದ ವ್ಯಯವು. ಹೀಗೆ ಆಯಾ ರಾಶಿಗಳ ಆಯಾ ಸಂವತ್ಸರದ ಆಯವ್ಯಯಾದಿಗಳನ್ನು ತೆಗೆಯಬೇಕು.

ಭಿನ್ನ ಭಿನ್ನ ಗ್ರಹಗಳು ಆಯಾ ಸಂವತ್ಸರದ ರಾಜರಾದರೆ ಆಯಾ ರಾಶಿಗಳ ಆಯವ್ಯಯಾದಿಗಳನ್ನು ಕೂಡಲೇ ಕಂಡು ಹಿಡಿಯುವುದಕ್ಕೋಸ್ಕರ ಕೆಳಗೆ ಒಂದು ಕೋಷ್ಟಕವನ್ನು ಕೊಡಲಾಗಿದೆ.

ರಾಜನ ಹೆಸರು	ಮೇಷ ವೃಶ್ಚಿಕಗಳಿಗೆ		ವೃಷಭ ತುಲಾ ರಾಶಿಗಳಿಗೆ		ಮಿಥುನ ಕನ್ಯಾ ರಾಶಿಗಳಿಗೆ		ಕರ್ಕ ರಾಶಿಯವರಿಗೆ		ಸಿಂಹ ರಾಶಿಯವರಿಗೆ		ಧನು ಮೀನಗಳಿಗೆ		ಮಕರ ಕುಂಭಗಳಿಗೆ	
ರವಿ	ಆ ೨	ವ್ಯ ೧೪	ಆ ೧೧	ವ್ಯ ೫	ಆ ೧೪	ವ್ಯ ೨	ಆ ೧೪	ವ್ಯ ೮	ಆ ೧೧	ವ್ಯ ೧೧	ಆ ೫	ವ್ಯ ೫	ಆ ೮	ವ್ಯ ೧೪
ಚಂದ್ರ	೫	೧೧	೧೪	೨	೨	೨	೨	೮	೧೪	೮	೮	೨	೧೧	೧೧
ಮಂಗಳ	೮	೧೪	೨	೮	೫	೫	೫	೧೪	೨	೧೪	೧೧	೫	೧೪	೧೪
ಬುಧ	೫	೫	೧೪	೧೧	೨	೧೧	೨	೨	೧೪	೨	೮	೧೧	೧೧	೫
ಗುರು	೧೧	೫	೫	೧೪	೮	೧೧	೮	೨	೫	೫	೧೪	೧೧	೨	೮
ಶುಕ್ರ	೨	೮	೧೧	೧೪	೧೪	೧೧	೧೪	೨	೧೧	೫	೫	೧೪	೮	೮
ಶನಿ	೧೪	೧೪	೮	೮	೧೧	೧೫	೧೧	೧೧	೮	೧೪	೨	೮	೫	೨

ಅವಕಹಡಾ ಚಕ್ರವು

ವಿಶೇಷತಾ: ವಿಷಯವನ್ನು ನೋಡಿದ ಕೂಡಲೇ ನಮಗೆ ಕಾಣುವ ವಿಷಯವೆಂದರೆ ಅವಕಹಡಾ ಚಕ್ರವು. ಕೆಲವು ಪಂಚಾಂಗಗಳಲ್ಲಿ ಪ್ರಾರಂಭದಲ್ಲಿಯೇ ಎರಡು ಬಂಡೀಗಾಲಿಯಂತಿರುವ ೨ ಚಕ್ರಗಳನ್ನು ಕೊಟ್ಟಿರುತ್ತಾರೆ. ಅವುಗಳಲ್ಲಿ ಒಂದು ಅವಕಹಡಾ ಚಕ್ರವೂ, ಇನ್ನೊಂದು ರಾಶಿಯ ಘಾತ ಚಕ್ರವೂ ಇರುತ್ತದೆ. ಈ ಅವಕಹಡಾ ಚಕ್ರ ನೋಡುವ ಉದ್ದೇಶ ಎರಡು ಇರುತ್ತವೆ. (೧) ವಧೂವರರ ಸಾಲಾವಳಿಯನ್ನು ನೋಡುವದಕ್ಕೆ. (೨) ನಮ್ಮ ರಾಶಿ-ನಕ್ಷತ್ರಗಳನ್ನು ಗುರುತಿಸಲು ಈ ರಾಶಿ ನಕ್ಷತ್ರಗಳಿಂದ ವಧೂವರರ ಸಾಲಾವಳಿಯನ್ನು ನೋಡುವದಕ್ಕೆ ಘಟಿಸವನ್ನುತ್ತಾರೆ

ಈ ವಧೂವರರ ಸಾಲಾವಳಿಯನ್ನು ಯಾಕೆ ನೋಡಬೇಕು ? ಹೇಗೆ ನೋಡಬೇಕು ? ನಾಡಿ, ಗಣ, ಯೋನಿ, ಕೂಟಗಳೆಂದರೇನು ? ಅವುಗಳನ್ನು ಯಾಕೆ ಹಾಗೂ ಹೇಗೆ ನೋಡಬೇಕು ? ಈ ಮೊದಲಾದ ಸಂಗತಿಗಳನ್ನು ನಮ್ಮ "ವಧೂವರರ ಜ್ಯೋತಿಷ್ಯ" ಎಂಬ ಗ್ರಂಥದಲ್ಲಿ ಪೂರ್ಣವಾಗಿ ವಿವೇಚಿಸಲಾಗಿದೆ. ಪ್ರಸ್ತುತ ಈ ಗ್ರಂಥದಲ್ಲಿ ಹಾಗೂ ಈ ಪ್ರಕರಣದಲ್ಲಿ ಅವಕಹಡಾ ಚಕ್ರವನ್ನು ಹೇಗೆ ನೋಡಬೇಕೆಂಬುದನ್ನು ಮಾತ್ರ ಕೊಡಲಾಗಿದೆ.

ಈ ಅವಕಹಡಾ ಚಕ್ರದಲ್ಲಿ ೧೧ ಭಾಗಗಳನ್ನು ಮಾಡಲಾಗಿದೆ. (೧೫ನೆಯ ಪುಟ ನೋಡಿರಿ.)

ಅವಕಹಡಾ ಚಕ್ರ

೧	ನಕ್ಷತ್ರ	ಅಶ್ವಿನೀ				ಭರಣೀ				ಕೃತ್ತಿಕಾ			
೨	ನಾಡಿ	ಆದ್ಯನಾಡಿ				ಮಧ್ಯನಾಡಿ				ಅಂತ್ಯನಾಡಿ			
೩	ಯೋನಿ	ಅಶ್ವಯೋನಿ				ಗಜಯೋನಿ				ಮೇಷಯೋನಿ			
೪	ಗಣ	ದೇವಗಣ				ಮನುಷ್ಯಗಣ				ರಾಕ್ಷಸ			
೫	ಚಾ, ಪ ವೇ ದ	೯	೧೦	೩	೭	೧೮	೦	೯	೨೧	೯	೧೦	೭	೨೧
೬	ಚರ ಣಾಂಕ	೧	೨	೩	೪	೧	೨	೩	೪	೧	೨	೩	೪
೭	ಚರಣಾ ಕ್ಷರಗಳು	ಚು	ಚೆ	ಚೊ	ಲಾ	ಲೀ	ಲು	ಲೆ	ಲೋ	ಅ	ಇ	ಉ	ಎ
೮	ರಾಶಿ	ಮೇಷ											
೯	ರಾಶ್ಯಾ ಧಿಪ	ಮಂಗಳ											
೧೦	ವರ್ಣ	ಕ್ಷತ್ರಿಯ											
೧೧	ವೈಶ್ಯ	ಚತುಷ್ಪಾದ											

೧ನೆಯ ಭಾಗದಲ್ಲಿ ಆಯಾ ನಕ್ಷತ್ರದ ಹೆಸರನ್ನು ಕೊಟ್ಟಿದೆ. ಉದಾ : ಅಶ್ವಿನಿ, ಭರಣಿ ಇತ್ಯಾದಿ.

೨ನೆಯ ಭಾಗದಲ್ಲಿ ಆಯಾ ನಕ್ಷತ್ರಗಳ ನಾಡಿಗಳಾವವು ಎಂಬುದನ್ನು ಕೊಟ್ಟಿದೆ. ಉದಾ: ಆದ್ಯನಾಡಿ, ಮಧ್ಯನಾಡಿ ಇತ್ಯಾದಿ.

೩ನೆಯ ಭಾಗದಲ್ಲಿ ಆಯಾ ನಕ್ಷತ್ರಗಳ ಯೋನಿಗಳಾವವು ಎಂಬುದನ್ನು ಕೊಟ್ಟಿದೆ. ಉದಾ : ಅಶ್ವಯೋನಿ ಇತ್ಯಾದಿ

೪ನೆಯ ಭಾಗದಲ್ಲಿ ಆಯಾ ನಕ್ಷತ್ರಗಳ ಗಣಗಳಾವವು ಎಂಬುದನ್ನು ಕೊಟ್ಟಿದೆ. ಉದಾ : ದೇವಗಣ, ಮನುಷ್ಯಗಣ ಹೀಗೆ.

೫ನೆಯ ಭಾಗದಲ್ಲಿ ಆಯಾ ನಕ್ಷತ್ರಗಳ ಬೇರೆ ಬೇರೆ ಚರಣಗಳಲ್ಲಿ ಪೀಡೆ ಇಲ್ಲವೆ ಬಾಧೆಯಾದರೆ, ಅದರ ಅವಧಿ ಎಲ್ಲಿಯವರೆಗೆ ಎಂಬುದನ್ನು ಕೊಡಲಾಗಿದೆ. ಉದಾ : ಅಶ್ವಿನಿ ೧ನೆಯ ಚರಣದಲ್ಲಿ ಬಾಧೆಯಾದರೆ ೯ ದಿವಸ, ೨ನೆಯ ಚರಣದಲ್ಲಿ ಅದರೆ ೧೦ ದಿವಸ, ೩ನೆಯ ಚರಣದಲ್ಲಿ ಅದರೆ ೩ ದಿವಸಗಳು. ಇದರಂತೆ ರೇವತಿ ನಕ್ಷತ್ರದ ೪ನೆಯ ಚರಣದಲ್ಲಿ ಬಾಧೆಯಾದರೆ ೬೦ ದಿವಸಗಳು, ಹೀಗೆ ಆಯಾ ನಕ್ಷತ್ರಗಳ ಚರಣಗಳಲ್ಲಿರುವ ಬಾಧೆಯ ಅವಧಿಯನ್ನು ಕೊಡಲಾಗಿದೆ.

೬ನೆಯ ಭಾಗದಲ್ಲಿ ಆಯಾ ನಕ್ಷತ್ರಗಳ ಚರಣಗಳನ್ನು ಕೊಡಲಾಗಿದೆ. ಒಂದೊಂದು ನಕ್ಷತ್ರದಲ್ಲಿ ನಾಲ್ಕು ನಾಲ್ಕು ಚರಣಗಳಿವೆ. ೯ ಚರಣಗಳು ಕೂಡಿದರೆ ಒಂದು ರಾಶಿ.

೭ನೆಯ ಭಾಗದಲ್ಲಿ ಪ್ರತಿಯೊಂದು ಚರಣದ ಪ್ರಥಮ ಅಕ್ಷರ ಯಾವುದು ಎಂಬುದನ್ನು ಕೊಡಲಾಗಿದೆ. ಉದಾ: ಅಶ್ವಿನಿ ನಕ್ಷತ್ರದ ೧ನೆಯ ಚರಣಕ್ಕೆ ಚು ಎಂತಲೂ, ೨ನೆಯ ಚರಣಕ್ಕೆ ಚೇ ಎಂತಲೂ ಇತ್ಯಾದಿ. ಈ ಚರಣ ಅಕ್ಷರಗಳಿಂದ ರಾಶಿ, ನಕ್ಷತ್ರ, ಚರಣಗಳನ್ನು ಕಂಡುಹಿಡಿಯಲು ಬರುತ್ತದೆ. ಚೇತನ ಎಂಬ ಜನ್ಮನಾಮವಿದ್ದ ವ್ಯಕ್ತಿಯ ರಾಶಿ ನಕ್ಷತ್ರಗಳಾವವು? ಚೇತನ ಅಂದರೆ ಅಶ್ವಿನೀ ನಕ್ಷತ್ರ ೨ನೆಯ ಚರಣ ಮೇಷ ರಾಶಿ ಅಂತಾ ಗೊತ್ತಾಗುವುದು. ಇದರಂತೆ ಆಯಾ ಜನ್ಮಾಕ್ಷರಗಳಿಂದ ರಾಶಿಗಳನ್ನು ತಿಳಿಯಬಹುದು.

೮ನೆಯ ಭಾಗದಲ್ಲಿ ಆಯಾ ರಾಶಿಗಳ ಹೆಸರನ್ನು ಕೊಡಲಾಗಿದೆ. ೨। ನಕ್ಷತ್ರ ಅಥವಾ ೯ ಚರಣಗಳೆಂದರೆ ೧ ರಾಶಿ. ಹೀಗೆ ಮೇಷದಿಂದ ಮೀನದ ವರೆಗೆ ೧೨ ರಾಶಿಗಳಿವೆ.

೯ನೆಯ ಭಾಗದಲ್ಲಿ ಆಯಾ ರಾಶಿಗಳ ರಾಶ್ಯಾಧಿಪರು ಯಾರು ಯಾರು ಎಂಬುದನ್ನು ಕೊಡಲಾಗಿದೆ. ಉದಾ— ಮೇಷ, ವೃಶ್ಚಿಕ ಈ ರಾಶಿಗಳ ರಾಶ್ಯಾಧಿಪ ಮಂಗಳ–ಹೀಗೆ. (ವಧೂವರರ ಸಾಲಾವಳಿ ನೋಡುವುದಕ್ಕೆ).

೧೦) ಭಿನ್ನ ಭಿನ್ನ ರಾಶಿಗಳಿಗೆ ಭಿನ್ನ ಭಿನ್ನ ವರ್ಣಗಳಿವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹೀಗೆ ಆಯಾ ರಾಶಿಗಳ ವರ್ಣಗಳಾವವು ಎಂಬು ದನ್ನು ೧೦ ನೆಯ ಭಾಗದಲ್ಲಿ ಕೊಡಲಾಗಿದೆ. (ವಧೂವರರ ಸಾಲಾವಳಿ ನೋಡುವುದಕ್ಕೆ.)

೧೧) ಭಿನ್ನ ಭಿನ್ನ ರಾಶಿಗಳಿಗೆ ಭಿನ್ನ ಭಿನ್ನ ವಶ್ಯಗಳಿವೆ. ಮಾನವ, ಜಲಚರ, ವನಚರ, ಕೀಟಕ, ಚತುಷ್ಪಾದ ಹೀಗೆ ರಾಶಿಗಳ ವಶ್ಯಗಳಾವವು ಎಂಬುದನ್ನು ೧೧ನೆಯ ಭಾಗದಲ್ಲಿ ಕೊಡಲಾಗಿದೆ.

ಕೆಲವು ಪಂಚಾಂಗಗಳಲ್ಲಿ ಅವಕಹಡಾ ಚಕ್ರದಲ್ಲಿ ೧೪ ಭಾಗಗಳನ್ನು ಅಂದರೆ ಮತ್ತೆ ೩ ಭಾಗಗಳನ್ನು ಹೆಚ್ಚಿಗೆ ಕೊಟ್ಟಿದ್ದಾರೆ.

(೧) ಆರಾಧ್ಯವೃಕ್ಷ (೨) ಪೀಡಾಪರಿಹಾರಾರ್ಥ ದಾನ
(೩) ಚರಣಾಂಕಗಳ ಅಧಿಪತಿ.

೧) ಭಿನ್ನ ಭಿನ್ನ ನಕ್ಷತ್ರಗಳಿಗೆ ಭಿನ್ನ ಭಿನ್ನ ಆರಾಧ್ಯ ವೃಕ್ಷಗಳಿವೆ. ಔದುಂಬರ, ಅಶ್ವತ್ಥ, ಆಮ್ರ ಇತ್ಯಾದಿ. ಇದನ್ನು ಹೇಗೆ ಕಂಡುಹಿಡಿಯ ಬೇಕೆಂಬುದನ್ನು ಈ ಭಾಗದಲ್ಲಿ ಕೊಡಲಾಗಿದೆ. ಉದಾ– ಕೃತ್ತಿಕಾ ನಕ್ಷತ್ರಕ್ಕೆ ಆರಾಧ್ಯ ವೃಕ್ಷವೆಂದರೆ ಔದುಂಬರ.

೨) ಭಿನ್ನ ಭಿನ್ನ ನಕ್ಷತ್ರಗಳಿಗೆ ಭಿನ್ನ ಭಿನ್ನ ಪೀಡಾ ಪರಿಹಾರಾರ್ಥ ದಾನಗಳಿವೆ. ಅನ್ನದಾನ, ವಸ್ತ್ರದಾನ, ಗೋದಾನ ಇತ್ಯಾದಿಗಳು. ಆಯಾ ನಕ್ಷತ್ರಗಳ ದಾನಗಳಾವವು ಎಂಬುದನ್ನು ಈ ಭಾಗದಲ್ಲಿ ಕೊಡಲಾಗಿದೆ. ಉದಾ : ಅಶ್ವಿನೀ ನಕ್ಷತ್ರಕ್ಕೆ ಅನ್ನದಾನ, ರೇವತೀ ನಕ್ಷತ್ರಕ್ಕೆ ಮಹಾದಾನ, ಇತ್ಯಾದಿ ದಾನಗಳು.

ಭಿನ್ನ ಭಿನ್ನ ನಕ್ಷತ್ರಗಳ ಹಾಗೂ ಭಿನ್ನ ಭಿನ್ನ ಚರಣಗಳಿಗೆ ಭಿನ್ನ ಭಿನ್ನ ಅಧಿಪತಿಗಳಿದ್ದಾರೆ. ಉದಾ : ಅಶ್ವಿನೀ ೧ನೆಯ ಚರಣಕ್ಕೆ ಮಂಗಳ, ೨ನೆಯ ಚರಣಕ್ಕೆ ಶುಕ್ರ, ೩ ನೆಯ ಚರಣಕ್ಕೆ ಬುಧ, ೪ ನೆಯ ಚರಣಕ್ಕೆ ಚಂದ್ರ ಇತ್ಯಾದಿ. ಇದನ್ನು ಹೇಗೆ ಕಂಡು ಹಿಡಿಯಬೇಕು ಎಂಬುದನ್ನು ಈ ಭಾಗದಲ್ಲಿ ಕೊಡಲಾಗಿದೆ.

ರಾಶಿಯ ಘಾತ ಚಕ್ರವು

ಅವಕಹಡಾ ಚಕ್ರದ ಹತ್ತಿರವೇ ದೊಡ್ಡ ಗಾಲಿಯ ಒಂದು ಚಕ್ರವಿರುತ್ತದೆ. ಅಥವಾ ಅವಕಹಡಾ ಚಕ್ರದ ಕೆಳಗಾಗಲೀ, ಹತ್ತಿರವೇ ಆಗಲಿ ಇರುತ್ತದೆ. ಇದೇ ರಾಶಿಯ ಘಾತಚಕ್ರವು.

ಅವಕಹಡಾ ಚಕ್ರದಿಂದ ಯಾರೊಬ್ಬರ ರಾಶಿಯನು ಕಂಡುಹಿಡಿದ ಬಳಿಕ, ಆಯಾ ರಾಶಿಗಳ ಮೇಲಿಂದ ಘಾತಚಕ್ರವನ್ನು ನೋಡಲು ಬರುತ್ತವೆ.

ಈ ರಾಶಿಯ ಘಾತಚಕ್ರದಲ್ಲಿ ೯ ಭಾಗಗಳಿವೆ.

೧	ರಾಶಿ	ಮೇಷ
೨	ಘಾತಮಾಸ	ಕಾರ್ತಿಕ
೩	ಘಾತತಿಥಿ	೧-೬-೧೧
೪	ಘಾತವಾರ	ರವಿವಾರ
೫	ಘಾತನಕ್ಷತ್ರ	ಮಘಾ
೬	ಘಾತಯೋಗ	ವಿಷ್ಕಂಭ
೭	ಘಾತಕರಣ	ಬವ
೮	ಘಾತಚಂದ್ರ	೧
೯	ಘಾತಪ್ರಹರ	೧

೧ನೆಯ ಭಾಗದಲ್ಲಿ ಆಯಾ ರಾಶಿಗಳ ಹೆಸರನ್ನು ಕೊಡಲಾಗಿದೆ.
ಉದಾ : ಮೇಷದಿಂದ ಮೀನದ ವರೆಗೆ.

೨ನೆಯ ಭಾಗದಲ್ಲಿ ಆಯಾರಾಶಿಗಳ ಹಿಂದೂ ಮಾಸಾದಿಗಳನ್ನು ಕೊಡಲಾಗಿದೆ. ಉದಾ : ಚೈತ್ರದಿಂದ ಫಾಲ್ಗುಣದ ವರೆಗೆ.

೩ನೆಯ ಭಾಗದಲ್ಲಿ ಒಂದೊಂದು ಅಂಕಿಯನ್ನು ಕೊಟ್ಟಿರುತ್ತಾರೆ ಇವು ಆಯಾ ರಾಶಿಗಳ ಘಾತ ತಿಥಿಗಳ ಸಂಜ್ಞೆ. ಉದಾ : ೧ ಅಂದರೆ ಪ್ರತಿಪದಾ, ೧೧ ಅಂದರೆ ಏಕಾದಶಿ.

೪ನೆಯ ಭಾಗದಲ್ಲಿ ಆಯಾ ರಾಶಿಗಳ ಘಾತ ವಾರಾದಿಗಳನ್ನು ಕೊಟ್ಟಿರುತ್ತಾರೆ.

೫ನೆಯ ಭಾಗದಲ್ಲಿ ಆಯಾ ರಾಶಿಗಳ ಘಾತ ನಕ್ಷತ್ರಗಳನ್ನು ಕೊಟ್ಟಿರುತ್ತಾರೆ.

೬ನೆಯ ಭಾಗದಲ್ಲಿ ಆಯಾ ರಾಶಿಗಳ ಘಾತ ಯೋಗಾದಿಗಳನ್ನು ಕೊಟ್ಟಿರುತ್ತಾರೆ.

೭ನೆಯ ಭಾಗದಲ್ಲಿ ಆಯಾರಾಶಿಗಳ ಘಾತ ಕರಣಾದಿಗಳನ್ನು ಕೊಟ್ಟಿರುತ್ತಾರೆ.

೮ನೆಯ ಭಾಗದಲ್ಲಿ ಒಂದೊಂದು ಅಂಕಿಯನ್ನು ಕೊಟ್ಟಿರುತ್ತಾರೆ. ಇವು ಆಯಾ ರಾಶಿಗಳ ಘಾತ ಚಂದ್ರ.

೯ನೆಯ ಭಾಗದಲ್ಲಿ ಒಂದೊಂದು ಅಂಕಿಯನ್ನು ಕೊಟ್ಟಿರುತ್ತಾರೆ. ಇವು ಆಯಾ ರಾಶಿಗಳ ಘಾತ ಪ್ರಹರಗಳು.

ಉದಾ : ಹಿಂದಿನ ಪುಟದಲ್ಲಿ ಮೇಷರಾಶಿಯ ಘಾತ ಮಾಸಾದಿಗಳನ್ನು ಕೊಡಲಾಗಿದೆ.

ಘಾತ ಮಾಸ : ಕಾರ್ತಿಕ
ಘಾತತಿಥಿ : ೧-೬-೧೧ ಅಂದರೆ ಪ್ರತಿಪದಾ, ಷಷ್ಠೀ, ಏಕಾದಶಿ
ಘಾತವಾರ : ರವಿವಾರ　　ಘಾತನಕ್ಷತ್ರ : ಮಘಾ
ಘಾತಯೋಗ : ವಿಷ್ಕಂಭ　　ಘಾತಕರಣ : ಬವ
ಘಾತ ಚಂದ್ರ : ತಮ್ಮ ತಮ್ಮ ರಾಶಿಯಿಂದ ಎಣಿಸಬೇಕು.
ಇಲ್ಲಿ ೧ ಅಂದರೆ ಮೇಷ ಎಂದು ತಿಳಿಯಬೇಕು.

ಘಾತ ಪ್ರಹರ : ೧ನೆಯ ಪ್ರಹರವು.

ಮೇಲೆ ತೋರಿಸಿದ ಆಯಾ ರಾಶಿಗಳ ಘಾತಮಾಸಾದಿಗಳಲ್ಲಿ ಪ್ರಯಾಣ, ಯಾತ್ರೆ, ವಾಣಿಜ್ಯ, ದೂತ, ರಾಜದರ್ಶನ ಹಾಗೂ ಯಾವುದೇ ಹೊಸ ಉದ್ಯೋಗಗಳನ್ನು ಮಾಡಕೂಡದು.

ನಾಮಾಕ್ಷರಗಳಿಂದ ವೈರಿವರ್ಗ ನೋಡುವ ಕೋಷ್ಟಕ :

ಅ ಇ ಉ ಎ	ಕ ಖ ಗ ಘ ಙ	ಚ ಛ ಜ ಝ ಞ	ಟ ಠ ಡ ಢ ಣ
ಗರುಡ	ಮಾರ್ಜಾರ	ಸಿಂಹ	ಶ್ವಾನ
ತ ಥ ದ ಧ ನ	ಪ ಫ ಬ ಭ ಮ	ಯ ರ ಲ ವ	ಶ ಷ ಸ ಹ ಳ
ಸರ್ಪ	ಮೂಷಕ	ಗಜ	ಹರಿಣ

ಮೇಲೆ ತೋರಿಸಿದ ಕೋಷ್ಟಕವು ಪ್ರತಿಯೊಂದು ಪಂಚಾಂಗದಲ್ಲಿ ಘಾತಮಾಸಾದಿ ಚಕ್ರದ ಕೆಳಗೆ ಇಲ್ಲವೆ ಹತ್ತಿರ ಇರುತ್ತದೆ.

ಯಾರಿಗೆ ಜನ್ಮನಾಮ ಇಲ್ಲವೇ ಜನ್ಮರಾಶಿ ಗೊತ್ತಿರುವದಿಲ್ಲವೋ ಅಂಥವರಿಗೆ ಈ ಕೋಷ್ಟಕವು ಬಹಳ ಸಹಾಯವಾಗುತ್ತದೆ.

ನೋಡುವ ರೀತಿ

ಈ ಕೋಷ್ಟಕದಲ್ಲಿ ೮ ಭಾಗಗಳಿದ್ದು, ಒಂದೊಂದರಲ್ಲಿ ಒಂದೊಂದು ವರ್ಗಗಳಿವೆ. ಅಂದರೆ — ಅ ವರ್ಗ; ಕ ವರ್ಗ; ಚ ವರ್ಗ; ಹೀಗೆ ೮ ವರ್ಗಗಳಿವೆ. ಅ ವರ್ಗಕ್ಕೆ ಗರುಡ, ಕ ವರ್ಗಕ್ಕೆ ಮಾರ್ಜಾರ ಹೀಗೆ ೮ ವರ್ಗಗಳಿವೆ ಒಂದೊಂದು ಸಂಜ್ಞೆಯಿದೆ. ತನ್ನ ವರ್ಗದಿಂದ ೫ನೆಯ ವರ್ಗವು ವೈರಿವರ್ಗ ಎಂದು ತಿಳಿಯಬೇಕು.

ಉಪಯೋಗ

ಈ ಕೋಷ್ಟಕದ ಸಹಾಯದಿಂದ ಯಾರೀರ್ವರ ಪರಸ್ಪರ ಸ್ನೇಹ ಸಂಬಂಧ, ವಧೂವರರ ಸಾಲಾವಳಿ, ಪಾಲಿನಿಂದ ವ್ಯಾಪಾರ ವ್ಯವಹಾರ ಇತ್ಯಾದಿ ನೋಡಲು ಬರುತ್ತದೆ. ಉದಾ :— ಈರಪ್ಪ ಹಾಗೂ ನಾಗಪ್ಪ ರಲ್ಲಿ ಸ್ನೇಹ ಸಂಬಂಧ ಅಥವಾ ವ್ಯವಹಾರ ಹೇಗೆ ?

ಈರಪ್ಪ ಇದು ಅ ವರ್ಗದಲ್ಲಿಯೂ, ನಾಗಪ್ಪ ಇದು ತ ವರ್ಗದಲ್ಲಿಯೂ ಬರುತ್ತದೆ. ಅ ವರ್ಗದಿಂದ ತ ವರ್ಗವು ಐನೆಯದು ಇರುವುದರಿಂದ ವೈರಿ ವರ್ಗವಾದಂತಾಯಿತು. ಮತ್ತು ಅ ವರ್ಗ ಇದು ಗರುಡ ಸಂಜ್ಞವೂ ತ ವರ್ಗ ಇದು ಸರ್ಪ ಸುಜ್ಞವೂ ಹೀಗೆ ವೈರಿ ವರ್ಗಗಳಿದ್ದ ಕಾರಣ, ಇವರೀರ್ವರ ಸ್ನೇಹ ಸಂಬಂಧಕ್ಕೆ ಒಳಿತಿರುವುದಿಲ್ಲ. ಹೀಗೆ ಪರಸ್ಪರರ ಸ್ನೇಹ ಸಂಬಂಧಕ್ಕಾ ಈ ಕೋಷ್ಟಕದಿಂದ ನೋಡಲು ಬರುತ್ತದೆ.

ಅವಕಹಡಾ ಚಕ್ರ ಹಾಗೂ ಘಾತ ಮೊದಲಾದಿ ಚಕ್ರಗಳ ಹತ್ತಿರವೇ ಆಗಲಿ, ಕೆಳಗೆ ಆಗಲಿ ವಧೂವರರ ಸಾಲಾವಳಿ ನೋಡುವ ಕೋಷ್ಟಕ ಇರುತ್ತದೆ.

ಈ ಎಲ್ಲ ಸಂಗತಿಗಳನ್ನು ವಧೂವರರ ಜ್ಯೋತಿಷ್ಯ ಎಂಬ ನಮ್ಮ ಗ್ರಂಥವಲ್ಲಿ ಪೂರ್ಣವಾಗಿ ವಿವೇಚಿಸಿದ್ದೇವೆ. ಪ್ರಸ್ತುತ ಈ ಗ್ರಂಥದಲ್ಲಿ ಪಂಚಾಂಗದಲ್ಲಿದ್ದ ಕೋಷ್ಟಕವನ್ನು ಹೇಗೆ ನೋಡಬೇಕು ಎಂಬುದನ್ನು ಮಾತ್ರ ಕೊಡಲಾಗಿದೆ.

ಈ ಕೋಷ್ಟಕದಲ್ಲಿ ೩೬ ಸಾಲುಗಳು ಮೇಲ್ಭಾಗದಲ್ಲಿಯೂ, ೩೬ ಸಾಲುಗಳು ಎಡಭಾಗದಲ್ಲಿಯೂ ಇವೆ. ಮೇಲ್ಭಾಗದಲ್ಲಿ ವರನದು, ಎಡಭಾಗದಲ್ಲಿ ವಧುವಿನದು ಹೀಗೆ ಬರೆದಿರುತ್ತಾರೆ. ಈ ಎರಡು ಸಾಲುಗಳ ಮಧ್ಯದಲ್ಲಿ ಅಂಕಿಗಳಿರುತ್ತವೆ. ಈ ಅಂಕಿಗಳು ೩ ರಿಂದ ೩೬ರ ವರೆಗೆ ಇರುವವು, ಇವೇ ಗುಣಗಳು. ಈ ಅಂಕಿಗಳು ೧೮ಕ್ಕೆ ಮುಂದೆ ಇದ್ದರೆ ಸಾಲಾವಳಿ ಚೆನ್ನಾಗಿದೆ ಎಂದು ತಿಳಿಯಬೇಕು. (ಏಕನಾಡಿ ಮಾತ್ರ ಆಗಕೂಡದು) ಉದಾ :— ವರನದು ರೋಹಿಣಿ ೪ ಎಂದೂ, ವಧುವಿನದು ಉತ್ತರಾ ೩ ಎಂದೂ ತಿಳಿದು ಕೋಷ್ಟಕ ನೋಡಿರಿ.

ಈ ಕೋಷ್ಟಕದಲ್ಲಿ ೩೩ ಅಂಕಿಗಳಿವೆ. ಈ ಅಂಕಿ ೧೮ ಕ್ಕಿಂತ ಹೆಚ್ಚು ಇರುವದರಿಂದ ಸಾಲಾವಳಿ ಚೆನ್ನಾಗಿದೆ ಎಂದು ತಿಳಿಯಬೇಕು.

ಮಳೆಯ ನಕ್ಷತ್ರಗಳು

ಕೆಲವು ಪಂಚಾಂಗಗಳಲ್ಲಿ ಮಳೆಯ ವಿಚಾರವನು ಪಂಚಾಂಗದ ಕೊನೆಗೂ, ಕೆಲವು ಪಂಚಾಂಗಗಳಲ್ಲಿ ಮೊದಲೂ ಕೊಟ್ಟಿರುತ್ತಾರೆ. ಈ ಮಳೆಯ ವಿಚಾರವನ್ನು ಪಂಚಾಂಗಗಳಲ್ಲಿ ಹೇಗೆ ನೋಡಬೇಕು ಎಂಬುದನ್ನು ಮಾತ್ರ ಈ ಪ್ರಕರಣದಲ್ಲಿ ಕೊಡಲಾಗಿದೆ.

ಅಶ್ವಿನಿಯಿಂದ ರೇವತೀ ನಕ್ಷತ್ರದ ವರೆಗೆ ಪ್ರತಿ ೧೩ ಅಂಶ ೨೦ ಕಲಾ ಅಂತರದಿಂದ ಸೂರ್ಯನು ಒಂದೊಂದು ನಕ್ಷತ್ರವನ್ನು ಕ್ರಮಿಸುತ್ತಾನೆ. ಇವುಗಳಿಗೆ ಸೂರ್ಯನಕ್ಷತ್ರಗಳೆಂದೂ. ಮಳೆಯ ನಕ್ಷತ್ರಗಳೆಂದೂ. ಮಹಾ ನಕ್ಷತ್ರಗಳೆಂದೂ ಕರೆಯುವ ವಾಡಿಕೆ ಉಂಟು.

ಮಳೆಯ ನಕ್ಷತ್ರಗಳಲ್ಲಿ ಎರಡು ಪ್ರಕಾರಗಳಿವೆ. (೧) ಬೇಸಿಗೆಯಲ್ಲಿ ಆಗುವ ಮಳೆಗಳು (೨) ಮಳೆಗಾಲದಲ್ಲಿ ಆಗುವ ಮಳೆಗಳು. ಅಶ್ವಿನೀ, ಭರಣೀ, ಕೃತ್ತಿಕಾ, ರೋಹಿಣೀ ಈ ನಾಲ್ಕು ನಕ್ಷತ್ರಗಳು ಬೇಸಿಗೆಯಲ್ಲಿ ಮಳೆಗೈಯ್ಯುವವು. ಈ ಮಳೆಗಳಿಗೆ ದೊಡ್ಡ ಮಳೆಗಳೆಂದೂ, ಅಡ್ಡ ಮಳೆಗಳೆಂದೂ ಕರೆಯುತ್ತಾರೆ.

ಸೂರ್ಯನು ಮೃಗನಕ್ಷತ್ರ ಪ್ರವೇಶಿಸಿದ ಕೂಡಲೇ ಮಳೆಗಾಲ ಪ್ರಾರಂಭವಾಗುವದು. ಹಾಗೂ ಚಿತ್ರಾ ನಕ್ಷತ್ರವಾದ ಬಳಿಕ ಬಹುತರವಾಗಿ ಎಲ್ಲ ಕಡೆಯಲ್ಲಿಯೂ ಮಳೆಗಾಲ ಮುಗಿಯುತ್ತದೆ. ಕೆಲವು ಕಡೆಗೆ ವಿಶಾಖ ನಕ್ಷತ್ರದ ತನಕ ಮಳೆ ಇರುತ್ತದೆ. ಈ ಮೃಗನಕ್ಷತ್ರದಿಂದ ಹಸ್ತಾ ನಕ್ಷತ್ರದ ವರೆಗಿರುವ ೯ ನಕ್ಷತ್ರಗಳೇ ಮಳೆಗಾಲದ ನಕ್ಷತ್ರಗಳು. ಹಾಗೂ ಮಳೆಬೀಳುವ ನಕ್ಷತ್ರಗಳು. ಈ ನಕ್ಷತ್ರಗಳಲ್ಲಿಯೇ ಹಿಂದುಸ್ಥಾನದಲ್ಲಿ ಮಳೆಯಾಗುವುದುಂಟು.

ಈ ಎಲ್ಲ ನಕ್ಷತ್ರಗಳು ಮಳೆಗೈಯ್ಯುವವು ಎಂದು ಹೇಳಲು ಬರುವದಿಲ್ಲ. ಕೆಲವು ನಕ್ಷತ್ರಗಳು ಉತ್ತಮ ರೀತಿಯಿಂದ, ಕೆಲವು ಮಧ್ಯಮ ರೀತಿಯಿಂದ, ಕೆಲವು ಕನಿಷ್ಠ ರೀತಿಯಿಂದ ಮಳೆ ತರುವವು.

ಈ ಉತ್ತಮ, ಮಧ್ಯಮ, ಕನಿಷ್ಠ ಮಳೆಗಳಾವವು, ಅವನ್ನು ಹೇಗೆ ಕಂಡುಹಿಡಿಯಬೇಕೆಂಬುದಕ್ಕೆ ನಮ್ಮ ಜ್ಯೋತಿಷ್ಯ ಶಾಸ್ತ್ರಜ್ಞರು ಕೆಲವು ನಿಯಮಗಳನ್ನು ಕಂಡು ಹಿಡಿದಿದ್ದಾರೆ. ಅವನ್ನು ಈ ಕೆಳಗೆ ವಿವೇಚಿಸಲಾಗಿದೆ.

(೧) ಸೂರ್ಯನಕ್ಷತ್ರ ಅಥವಾ ಮಳೆಯ ನಕ್ಷತ್ರವು ಯಾವ ವಾಹನದ ಮೇಲೆ ಬಂದಿದೆ.

(೨) ಮಳೆಯ ನಕ್ಷತ್ರವು ಪ್ರವೇಶವಾಗುವಾಗ ಇರುವ ನಿತ್ಯ ನಕ್ಷತ್ರವು (ಚಂದ್ರ ನಕ್ಷತ್ರವು) ಪುರುಷ ಸಂಜ್ಞಕವೋ, ಸ್ತ್ರೀ ಸಂಜ್ಞಕವೋ, ನಪುಂಸಕ ಸಂಜ್ಞಕವೋ ಎಂಬುದನ್ನು ಮೊದಲು ಕಂಡುಹಿಡಿಯಬೇಕು.

(೩) ಮಳೆಯ ನಕ್ಷತ್ರ ಪ್ರವೇಶ ಕಾಲಕ್ಕೆ ನಿತ್ಯನಕ್ಷತ್ರ ಪ್ರವೇಶವಾಗುವ ಕಾಲವಲ್ಲಿ ಆ ನಕ್ಷತ್ರವು ಸೂರ್ಯನದೋ, ಚಂದ್ರನದೋ ಎಂಬುದನ್ನು ಕಂಡುಹಿಡಿಯಬೇಕು

ಮೇಲೆ ವಿವರಿಸಿದ ಈ ಮೂರು ಸಂಗತಿಗಳಿಂದ ಮಳೆ ಹೇಗೆ ಆಗುತ್ತದೆ ಎಂಬುದನ್ನು ಕಂಡುಹಿಡಿಯಲು ಬರುತ್ತದೆ.

ವಾಹನಗಳೆಂದರೇನು ?

ಸೂರ್ಯ ನಕ್ಷತ್ರದಿಂದ (ಮಳೆಯ ನಕ್ಷತ್ರದಿಂದ) ನಿತ್ಯನಕ್ಷತ್ರದ (ಚಂದ್ರ ನಕ್ಷತ್ರದ) ವರೆಗೆ ಎಣಿಸಿ, ಬಂದ ಸಂಖ್ಯೆಗೆ ೯ ರಿಂದ ಭಾಗಿಸಲು ಬರುವ ಶೇಷವೇ ವಾಹನಸಂಜ್ಞಾ ಸಂಖ್ಯೆಯು.

(೧) ಮೂಷಕ, (೨) ಮಂಡೂಕ, (೩) ಜಂಬೂಕ (೪) ಮೇಷ (೫) ಮಯೂರ (೬) ಮಹಿಷ (೭) ಖರ (ಕತ್ತೆ) (೮) ಗಜ (೯) ಅಶ್ವ ಹೀಗೆ ೯ ಪ್ರಕಾರದ ವಾಹನಗಳಿವೆ.

(೧) ಗಜವಾಹನವು ಉತ್ತಮ ವೃಷ್ಟಿ ಸೂಚಕವು.
(೨) ಮಂಡೂಕ ವಾಹನವು ಅತಿವೃಷ್ಟಿ ಸೂಚಕವು.
(೩) ಮಹಿಷ ವಾಹನವು ಮಹಾವೃಷ್ಟಿ ಸೂಚಕವು
ಈ ಮೂರು ವಾಹನಗಳಿಗೆ ಸುವೃಷ್ಟಿ ಸೂಚಕವೆನ್ನುತ್ತಾರೆ.
(೧) ಮೂಷಕ ವಾಹನವು ಅಲ್ಪವೃಷ್ಟಿ ಸೂಚಕವು.

(೨) ಖರ (ಕತ್ತೆ) ವಾಹನವು ಅನಾವೃಷ್ಟಿ ಸೂಚಕವು
(೩) ಮಯೂರ ವಾಹನವು ವೃಷ್ಟಿನಾಶದ ಸೂಚಕವು.
ಹೀಗೆ ಮೇಲೆ ತೋರಿಸಿದ ೩ ವಾಹನಗಳು ಅಲ್ಪವೃಷ್ಟಿ ಸೂಚಕವು.

(೧) ಜಂಬೂಕ ವಾಹನವು ಮಧ್ಯಮವೃಷ್ಟಿ ಸೂಚಕವು
(೨) ಮೇಷ ವಾಹನ ಮಧ್ಯಮವೃಷ್ಟಿ ಸೂಚಕವು
ಈ ಎರಡು ವಾಹನಗಳು ಮಧ್ಯಮವೃಷ್ಟಿ ಸೂಚಕವು.

(೧) ಅಶ್ವವಾಹನವು ಇದು ಪರ್ವತ ಪ್ರದೇಶಗಳಲ್ಲಿ ಮಾತ್ರ ವೃಷ್ಟಿ ಸೂಚಕವಿರುತ್ತದೆ.

ಹೀಗೆ ವಾಹನಗಳನ್ನೂ, ಅವುಗಳ ಫಲವನ್ನೂ ಗುರುತಿಸಬೇಕು.

(೨) ಅಶ್ವಿನಿಯಿಂದ ರೇವತೀ ನಕ್ಷತ್ರಗಳಲ್ಲಿ ಪುರುಷ ನಕ್ಷತ್ರ, ಸ್ತ್ರೀನಕ್ಷತ್ರ, ನಪುಂಸಕ ನಕ್ಷತ್ರಗಳೆಂದು ಮೂರು ಭಾಗಗಳಿವೆ. ಇವುಗಳನ್ನು ಹೇಗೆ ಕಂಡುಹಿಡಿಯಬೇಕೆಂಬುದನ್ನು ಈ ಕೆಳಗೆ ಕೊಡಲಾಗಿದೆ.

ಆರಿದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ, ಮಘಾ, ಪೂರ್ವಾ, ಉತ್ತರಾ, ಹಸ್ತಾ, ಚಿತ್ತಾ, ಸ್ವಾತೀ ಈ ಹತ್ತು ನಕ್ಷತ್ರಗಳು ಸ್ತ್ರೀ ಸಂಜ್ಞಕವು.

ವಿಶಾಖ, ಅನುರಾಧ, ಜ್ಯೇಷ್ಠ ಈ ಮೂರು ನಕ್ಷತ್ರಗಳು ನಪುಂಸಕ ಸಂಜ್ಞಕವು.

ಮೂಲಾ, ಪೂರ್ವಾಷಾಢ, ಉತ್ತರಾಷಾಢ, ಶ್ರವಣ, ಧನಿಷ್ಠ, ಶತತಾರಕಾ, ಪೂರ್ವಾಭಾದ್ರಪದ, ಉತ್ತರಾಭಾದ್ರಪದ, ರೇವತಿ, ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗ— ಈ ೧೪ ನಕ್ಷತ್ರಗಳು ಪುರುಷ ಸಂಜ್ಞಕ ನಕ್ಷತ್ರಗಳು.

ಮಳೆ ಪ್ರವೇಶ ನಕ್ಷತ್ರಗಳು, ನಿತ್ಯನಕ್ಷತ್ರಗಳು ಇವುಗಳಿಂದ ಆಗುವ ಯೋಗಗಳಿಂದ ಬೇರೆ ಬೇರೆ ಪರಿಣಾಮವಾಗುತ್ತದೆ. ಉದಾ : ಮೃಗಶಿರಾ ನಿತ್ಯನಕ್ಷತ್ರವಿರುವ ದಿನ ಅಶ್ವಿನೀ ಮಳೆಯು ಪ್ರವೇಶವಾಗುತ್ತದೆ ಎಂದು ತಿಳಿಯಿರಿ.

ಮೃಗಶಿರಾ ನಿತ್ಯ ನಕ್ಷತ್ರವು ಸಹ ಪುರುಷ ನಕ್ಷತ್ರವು. ಆದ್ದರಿಂದ ಇದಕ್ಕೆ ಪು—ಪು ಯೋಗವೆನ್ನುತ್ತಾರೆ.

ಉದಾ :— (೨) ಭರಣೀ ನಿತ್ಯ ನಕ್ಷತ್ರವಿರುವ ದಿನ ಆರಿದ್ರಾ ಮಳೆಯು ಪ್ರವೇಶವಾಗುತ್ತದೆ ಎಂದು ತಿಳಿಯಿರಿ. ಇಲ್ಲಿ ಭರಣಿ ನಿತ್ಯ ನಕ್ಷತ್ರವು ಪುರುಷ ನಕ್ಷತ್ರವು. ಆರಿದ್ರಾಮಳೆಯು ಸ್ತ್ರೀ ನಕ್ಷತ್ರವು. ಆದುದರಿಂದ ಇಲ್ಲಿ ಪು—ಸ್ತ್ರೀ ಯೋಗವಾಗುತ್ತದೆ.

ಈ ಯೋಗಗಳನ್ನು ಕಂಡುಹಿಡಿದ ಬಳಿಕ ಅವುಗಳ ಫಲಗಳಾವವು ಎಂಬುದನ್ನು ಕೆಳಗೆ ಕೊಡಲಾಗಿದೆ.

(೧) ಎರಡೂ ನಪುಂಸಕ (ನ—ನ)ಗಳಾದರೆ ಗಾಳಿ ವಿಶೇಷದಿಂದ ವೃಷ್ಟಿಭಂಗವಾಗುವುದು.

(೨) ಎರಡೂ ಸ್ತ್ರೀ (ಸ್ತ್ರೀ—ಸ್ತ್ರೀ) ಯೋಗಗಳಾದರೆ ಮೇಘಾಡಂಬರವಾಗುವುದು.

(೩) ಎರಡೂ ಪುರುಷ (ಪು—ಪು) ಯೋಗಗಳಾದರೆ ವೃಷ್ಟಿಭಂಗವಾಗುತ್ತದೆ.

(೪) ಪು-ಸ್ತ್ರೀ ಯೋಗವಾಗಲೀ, ಸ್ತ್ರೀ-ಪು ಯೋಗವಾಗಲೀ ಆದರೆ ಸುವೃಷ್ಟಿಯು, ಉತ್ತಮ ರೀತಿಯಿಂದ ಮಳೆಯಾಗುವುದು.

(೫) ಪು-ನ ಯೋಗವಾಗಲೀ, ಸ್ತ್ರೀ-ನ ಯೋಗವಾಗಲೀ ಆದರೆ ಮಧ್ಯಮ ವೃಷ್ಟಿಯು.

ಹೀಗೆ ಯೋಗಗಳ ಫಲಗಳನ್ನು ನಿರ್ಧರಿಸಬೇಕು.

೩. ವೃಷ್ಟಿಯ ಸೂರ್ಯ-ಚಂದ್ರರ ಯೋಗ

ಅಶ್ವಿನಿ, ಭರಣಿ, ಕೃತ್ತಿಕಾ, ಆರಿದ್ರಾ, ಪುನರ್ವಸು. ಪುಷ್ಯ, ಆಶ್ಲೇಷ. ಮಘಾ, ಉತ್ತರಾ, ಪೂರ್ವಾಷಾಢ ಶ್ರವಣಾ. ಧನಿಷ್ಠಾ, ರೇವತೀ— ಈ ೧೪ ನಕ್ಷತ್ರಗಳು ಚಂದ್ರ ನಕ್ಷತ್ರಗಳಾಗಿವೆ

ರೋಹಿಣಿ, ಮೃಗಶಿರಾ, ಪೂರ್ವಾ, ಹಸ್ತಾ, ಚಿತ್ರಾ, ಸ್ವಾತಿ, ವಿಶಾಖಾ,

ಅನುರಾಧಾ, ಜ್ಯೇಷ್ಠಾ, ಮೂಲಾ, ಶತತಾರಕಾ, ಪೂರ್ವಾಭಾದ್ರಪದ, ಉತ್ತರಾಭಾದ್ರಪದ— ಈ ೧೩ ನಕ್ಷತ್ರಗಳು ಸೂರ್ಯ ನಕ್ಷತ್ರಗಳು.

ಈ ಸೂರ್ಯನಕ್ಷತ್ರ ಹಾಗೂ ಚಂದ್ರನಕ್ಷತ್ರ ಇವುಗಳಿಂದ ಆಗುವ ಯೋಗಗಳ ಪರಿಣಾಮವು ಭಿನ್ನ ಭಿನ್ನವಿರುತ್ತದೆ.

ಉದಾ :— ಆರಿದ್ರಾ ಮಳೆಯು ಭರಣೀ ನಿತ್ಯ ನಕ್ಷತ್ರವಿರುವ ದಿನ ಪ್ರವೇಶವಾಗುತ್ತದೆ ಎಂದು ತಿಳಿಯಿರಿ. ಮಳೆಯ ನಕ್ಷತ್ರವಾದ ಆರಿದ್ರಾ ನಕ್ಷತ್ರವು ಚಂದ್ರ ನಕ್ಷತ್ರವಿರುತ್ತದೆ. ನಿತ್ಯ ನಕ್ಷತ್ರವಾದ ಭರಣೀ ನಕ್ಷತ್ರವೂ ಚಂದ್ರ ನಕ್ಷತ್ರವಿರುತ್ತದೆ. ಆದುದರಿಂದ ಇದು ಚಂ–ಚಂ ಯೋಗವಾಗುತ್ತದೆ.

ಸೂರ್ಯ-ಚಂದ್ರ ಯೋಗ ಫಲ

(೧) ಚಂ–ಚಂ ಯೋಗವಾದರೆ ಗಾಳಿ ವಿಶೇಷವಿರುತ್ತದೆ.

(೨) ಸೂ–ಸೂ (ಕೆಲವು ಪಂಚಾಂಗಗಳಲ್ಲಿ ಸೂ–ಸೂದ ಬದಲು ರ–ರ ಎಂದು ಬರೆಯುತ್ತಾರೆ) = ರವಿ ಯೋಗವಾದರೆ ಅನಾವೃಷ್ಟಿಯು.

(೩) ಸೂ–ಚಂಯೋಗವಾಗಲೀ, ಚಂ–ಸೂ ಯೋಗವಾಗಲಿ ಆದರೆ ಸುವೃಷ್ಟಿಯು (ಅಕ್ರಮ) ನಮ್ಮ ಪಂಚಾಂಗಗಳಲ್ಲಿ ಇದನ್ನೇ ಸಂಕ್ಷಿಪ್ತದಲ್ಲಿ ಕೊಟ್ಟಿರುತ್ತಾರೆ.

ಉದಾ :— ೧೮೮೧ ನೆಯ ಶಕೆಯ ಜ್ಯೇಷ್ಠ ಕೃಷ್ಣ ಪಕ್ಷದ ದ್ವಿತೀಯಾ ಸೋಮವಾರ ದಿನಾಂಕ ೨೨-೬-೫೯ ರ ದಿನವನ್ನು ನೋಡಿರಿ. ಆರಿದ್ರಾರ್ಕ ಅಥವಾ ಆರಿದ್ರಾ ೧ ರವಿ ೪–೫೪ ಮಹಿಷಕ ವಾಹನ ಸ್ತ್ರೀ–ಪು ಚಂ ಚಂ ಎಂದು ಬರೆದಿರುತ್ತಾರೆ. ಇದರ ಅರ್ಥವಿಷ್ಟೇ; ಸೂರ್ಯೋದಯದ ನಂತರ ೪ ಘಂ ೫೪ ಮಿ ಪಳ್ಕೆ ರವಿಯು (ಸೂರ್ಯ) ಆರಿದ್ರಾ ನಕ್ಷತ್ರವನ್ನು ಪ್ರವೇಶಿಸುತ್ತಾನೆ (೨೨-೬-೫೯ ರ ಸೂರ್ಯೋದಯದ ೪ ಘ–೫೪ ಪಳ್ಕೆ ಆರಿದ್ರಾ ಮಳೆಯು ಪ್ರಾರಂಭವಾಗುತ್ತದೆ.) ಆರಿದ್ರಾ ಮಳೆಯು ಮಹಿಷಕ ವಾಹನದ ಮೇಲೆ ಬಂದಿರುತ್ತದೆ. ಹಾಗೂ ಸ್ತ್ರೀ–ಪು ಯೋಗದ ಮೇಲೆಯೂ ಚಂ–ಚಂ ಯೋಗದ ಮೇಲೆಯೂ ಇರುತ್ತದೆ ಎಂದು ತಿಳಿಯಬೇಕು.

ಮಳೆಯ ವಿಚಾರದಲ್ಲಿ ಇತರ ಸಂಗತಿಗಳು

(೧) ಅಶ್ವಿನಿ, ಮೃಗ, ಪುಷ್ಯ, ಮಘಾ, ಸ್ವಾತಿ, ಶ್ರವಣಾ, ರೇವತಿ ಈ ಏಳು ನಕ್ಷತ್ರಗಳು ನಿತ್ಯ ನಕ್ಷತ್ರಗಳಿದ್ದಾಗ ಮಳೆಯ ನಕ್ಷತ್ರವು ಪ್ರವೇಶವಾದರೆ ಸುವೃಷ್ಟಿಯು.

(೨) ಜಲತತ್ವರಾಶಿಗಳಲ್ಲಿ ಮಳೆಯ ಅವಧಿ ಇದ್ದರೆ ಸುವೃಷ್ಟಿಯು.

(೩) ವೃಷ್ಟಿಪತನ ಮಳೆ ನಕ್ಷತ್ರದಿಂದ ನಿತ್ಯನಕ್ಷತ್ರದ ವರೆಗೆ ಎಣಿಸಿ ೧೬ ನ್ನು ಕೂಡಿಸಿ, ೨೮ ರಿಂದ ಭಾಗಿಸಬೇಕು. ಬಂದ ಶೇಷವು ೧-೨-೮-೯-೧೫-೧೬-೨೨-೨೩ ಸಮುದ್ರದಲ್ಲಿ ಪತನ, ೩-೭-೧೦-೧೪-೧೭-೨೧-೨೪-೦ ಬಂದರೆ ಸಮುದ್ರ ತಟಾಕದಲ್ಲಿ ಪತನ; ಶೇಷವು ೫-೧೨-೧೯-೨೬ ಉಳಿದರೆ ಪರ್ವತದಲ್ಲಿ ಪತನ, ಶೇಷವು ೪-೬-೧೧-೧೩-೧೮-೨೦-೨೫-೨೭ ಉಳಿದರೆ ಸಂಧಿಯಲ್ಲಿ ಪತನ ಎಂದು ತಿಳಿಯಬೇಕು

(೧) ಸಮುದ್ರದಲ್ಲಿ ಪತನ ಆದರೆ ಅತಿವೃಷ್ಟಿಯು. (೨) ತಟಾಕದಲ್ಲಿ ಆದರೆ ಸುವೃಷ್ಟಿಯು. (೩) ಸಂಧಿಯಲ್ಲಿಯಾದರೆ ಖಂಡವೃಷ್ಟಿಯು. (೪) ಪರ್ವತದಲ್ಲಿ ಆದರೆ ಅನಾವೃಷ್ಟಿಯು.

೪. ಯಾವ ರೀತಿ ಮಳೆ ಆಗುವುದು

ರವಿಯು ಯಾವ ದಿವಸ ಯಾವ ನಕ್ಷತ್ರದಲ್ಲಿ ಎಷ್ಟು ಎಷ್ಟು ಗಳಿಗೆ ಪ್ರವೇಶವಾಗುವನೋ ಆ ಸಂಖ್ಯೆಯಲ್ಲಿ ಆ ದಿವಸದ ತಿಥಿ, ವಾರ, ನಕ್ಷತ್ರಗಳ ಸಂಖ್ಯೆಯನ್ನು ಕೂಡಿಸಿ ೬ ರಿಂದ ಗುಣಿಸಿ, ೮ ರಿಂದ ಭಾಗಿಸಬೇಕು.

ಶೇಷ	೧ ಉಳಿದರೆ	ಶೂನ್ಯವೃಷ್ಟಿ
,,	೨ ,,	ಸುವೃಷ್ಟಿ
,,	೩ ,,	ಖಂಡವೃಷ್ಟಿ
,,	೪ ,,	ಗಾಳಿ ಮಿಶ್ರಿತ
,,	೫ ,,	ಅತಿವೃಷ್ಟಿ
,,	೬ ,,	ಅನಾವೃಷ್ಟಿ
,,	೭ ,,	ಸಾಧಾರಣ ವೃಷ್ಟಿ
,,	೦ ,,	ವೃಷ್ಟಿಭಂಗ

ಪಂಚಾಂಗವನ್ನು ಹೇಗೆ ನೋಡಬೇಕು ?

ಪಂಚಾಂಗವನ್ನು ಹೇಗೆ ನೋಡಬೇಕು ಎಂಬುದಕ್ಕೆ ಉದಾಹರಣೆಯಾಗಿ ಶಕ ೧೮೮೧ನೆಯ ಪಂಚಾಂಗವನ್ನು ಮಾದರಿಯನ್ನಾಗಿ ಕೊಟ್ಟು ವಿವರಿಸಲಾಗಿದೆ.

ಚೈತ್ರ ಶುಕ್ಲಪಕ್ಷದ ಪುಟವನ್ನು ನೋಡಿರಿ. ಈ ಪುಟ ತೆಗೆದ ಕೂಡಲೆ ನಾವು ಮೊದಲು ಕಾಣುವ ವಿಷಯವೆಂದರೆ ಈ ಪುಟದ ಶಿರೋಭಾಗದಲ್ಲಿ ೨ ಸಾಲುಗಳಿವೆ. ಮೊದಲನೆಯ ಸಾಲಿನಲ್ಲಿ ಎಡದಿಂದ ಬಲಭಾಗದ ಕಡೆಗೆ ಇಸ್ವಿ ಸನ್ ೧೯೫೯ ಎಪ್ರಿಲ್, ಹಿಜರಿ ೧೩೭೮ ಶವ್ವಲ, ವಿಕ್ರಮ ಸಂವತ್ಸರ ೨೦೧೬, ಪಾರಸೀ ಸನ್ ೧೩೨೮ ಹೀಗೆ ಬರೆದಿರುತ್ತಾರೆ.

ಎರಡನೆಯ ಸಾಲಿನಲ್ಲಿ (ಎಡದಿಂದ ಬಲಭಾಗದ ಕಡೆಗೆ) ಶಾಲಿವಾಹನ ಶಕೆ ೧೮೮೧ ವಿಕಾರಿನಾಮ ಸಂವತ್ಸರ ಚೈತ್ರ ಶುಕ್ಲ ಪಕ್ಷ ಉತ್ತರಾಯಣೆ ವಸಂತ ಋತೇ ಹೀಗೆ ಬರೆದಿರುತ್ತಾರೆ.

ಈ ಎರಡೂ ಸಾಲುಗಳ ನಂತರ ಕೆಳಭಾಗದಲ್ಲಿ ೨೧ ಖಾನೆಗಳ ೨೧ ಭಾಗಗಳಿವೆ.

೧ನೆಯ ಖಾನೆ :— ಈ ಖಾನೆಯಲ್ಲಿ ೧, ೨, ೩, ೪, ಹೀಗೆ ಅಂಕಿಗಳನ್ನು ಬರೆದಿರುತ್ತಾರೆ. ಇವುಗಳಿಗೆ ತಿಥಿ ಅನುತ್ತಾರೆ. ಪಂಚಾಂಗದಲ್ಲಿ ತಿಥಿಗಳನ್ನು ಅಕ್ಷರದಲ್ಲಿ ತೋರಿಸದೆ ಅಂಕಿ ರೂಪದಲ್ಲಿ ತೋರಿಸುತ್ತಾರೆ. ಉದಾ :— ಪ್ರತಿಪದಾ (ಪಾಡ್ಯ) ಎಂಬುದನ್ನು ತೋರಿಸುವದಕ್ಕೋಸ್ಕರ ೧ ಅಂಕಿಯನ್ನು ದ್ವಿತಿಯಾದ ಮುಂದೆ ೨ ಅಂಕಿಯನ್ನು, ತೃತಿಯಾದ ಮುಂದೆ ೩ ಅಂಕಿಯನ್ನು ಪೂರ್ಣಿಮಾ (ಹುಣ್ಣಿವೆ) ದ ಮುಂದೆ ೧೫ ಅಂಕಿಯನ್ನು ಅಮಾವಾಸ್ಯದ ಮುಂದೆ ೩೦ನೆಯ ಅಂಕಿಯನ್ನು ಹೀಗೆ ತಿಥಿಗಳ ಸಂಜ್ಞೆಯನ್ನು ಅಂಕಿಯ ರೂಪದಲ್ಲಿ ತೋರಿಸುತ್ತಾರೆ.

೨ನೆಯ ಸ್ಥಾನೆ :— ಈ ಎರಡನೆಯ ಸ್ಥಾನೆಯಲ್ಲಿ ಗು, ಶು, ಶ, ರ, ಚಂ ಹೀಗೆ ಅಕ್ಷರಗಳಿವೆ. ಇವು ಆ ಆ ವಾರಗಳ ಆದ್ಯಾಕ್ಷರಗಳು. ಉದಾ : ಗು ಅಂದರೆ ಗುರುವಾರ, ಚಂ ಅಂದರೆ ಸೋಮವಾರ (ಚಂದ್ರವಾರ), ಶ ಅಂದರೆ ಶನಿವಾರ ಹೀಗೆ.

೩ನೆಯ ಹಾಗೂ ೪ನೆಯ ಸ್ಥಾನೆ :— ಈ ಎರಡೂ ಸ್ಥಾನೆಗಳಲ್ಲಿ ಅನುಕ್ರಮವಾಗಿ ಯಾವ ಅಂಕಿಗಳಿರುವವೋ ಇವು ತಿಥಿಗಳ ಘಟಿಕಾ ಹಾಗೂ ಪಳಗಳು. ಉದಾ : ೧೦-೫೯ ಎಂದು ಬರೆದಿದ್ದರೆ ೧೦ ಘಟಿಕಾ ೫೯ ಪಳಾ ಎಂದು ತಿಳಿಯಬೇಕು.

೫ನೆಯ ಸ್ಥಾನೆ :— ಈ ಐದನೆಯ ನಂಬರಿನ ಸ್ಥಾನೆಯಲ್ಲಿ ಅ. ಭ, ಕೃ. ರೋ ಹೀಗೆ ಅಕ್ಷರಗಳಿವೆ. ಇವು ಆ ಆ ನಕ್ಷತ್ರಗಳ ಆದ್ಯಾಕ್ಷರಗಳು. ಉದಾ: ಅ ಅಂದರೆ ಅಶ್ವಿನಿ, ಭ ಅಂದರೆ ಭರಣಿ, ಕೃ ಅಂದರೆ ಕೃತಿಕಾ, ರೇ ಅಂದರೆ ರೇವತಿ ಇತ್ಯಾದಿ.

೬ನೆಯ ಹಾಗೂ ೭ನೆಯ ಸ್ಥಾನೆ :— ಈ ೬ನೆಯ ಹಾಗೂ ೭ನೆಯ ಸ್ಥಾನೆಗಳಲ್ಲಿ ಇರುವ ಅಂಕಿಗಳು ಅನುಕ್ರಮವಾಗಿ ಆ ಆ ನಕ್ಷತ್ರಗಳ ಘಟಿಕಾ ಹಾಗೂ ಪಳಗಳಿರುತ್ತವೆ. ಉದಾ : ೬೦-೦, ೨-೧೨, ೪-೪೫ ಅಂದರೆ ೬೦ ಘಟಿಕಾ, ೦ ಪಳಾ, ೨ ಘಟಿಕಾ ೧೨ ಪಳ ಇತ್ಯಾದಿ.

೮ನೆಯ ಸ್ಥಾನೆ :— ಈ ೮ ನೆಯ ನಂಬರಿನ ಸ್ಥಾನೆಯಲ್ಲಿ ವಿ, ಪ್ರೀ, ಆ, ಸೌ ಅಕ್ಷರಗಳಿವೆ. ಇವು ಆ ಆ ಯೋಗಗಳ ಆದ್ಯಾಕ್ಷರಗಳು. ಉದಾ : ವಿ ಅಂದರೆ ವಿಷ್ಕಂಭ, ಪ್ರೀ ಅಂದರೆ ಪ್ರೀತಿ, ಆ ಅಂದರೆ ಆಯುಷ್ಮಾನ್ ಇತ್ಯಾದಿ.

೯ನೆಯ ಹಾಗೂ ೧೦ನೆಯ ಸ್ಥಾನೆ :— ಈ ೯ ನೆಯ ಹಾಗೂ ೧೦ ನೆಯ ಸ್ಥಾನೆಗಳಲ್ಲಿರುವ ಅಂಕಿಗಳು ಅನುಕ್ರಮವಾಗಿ ಆ ಆ ಯೋಗಗಳ ಘಟಿಕಾ ಪಳಗಳಿರುತ್ತವೆ. ಉದಾ : ೫೯-೨೬, ೬೦-೦,

೧೧ನೆಯ ಸ್ಥಾನೆ :— ಈ ೧೧ನೆಯ ನಂಬರಿನ ಸ್ಥಾನೆಯಲ್ಲಿ ಬ, ಕೌ, ಭ, ಗ ಹೀಗೆ ಅಕ್ಷರಗಳಿವೆ ಇವು ಆ ಆ ಕರಣಗಳ ಆದ್ಯಾಕ್ಷರಗಳು. ಉದಾ : ಬ ಅಂದರೆ ಬವ, ಕೌ ಅಂದರೆ ಕೌಲವ, ಗ ಅಂದರೆ ಗರ ಇತ್ಯಾದಿ.

೧೨ನೆಯ ಖಾನೆ :— ಈ ೧೨ನೆಯ ನಂಬರಿನ ಖಾನೆಯಲ್ಲಿರುವ ಅಂಕಿಗಳು ಅನುಕ್ರಮವಾಗಿ ಆ ಆ ಕರಣಗಳ ಘಟಿಕಾ ಹಾಗೂ ಪಳಗಳನ್ನು ತೋರಿಸುತ್ತವೆ.

೧೩ನೆಯ ಖಾನೆ :— ಈ ಖಾನೆಯಲ್ಲಿ ದಿ ಎಂದು ಬರೆದಿರುತ್ತಾರೆ. ದಿ ಅಂದರೆ ದಿನಮಾನ ಎಂದು ಅರ್ಥವಾಗುತ್ತದೆ.

೧೪ನೆಯ ಖಾನೆ :— ಇದರಲ್ಲಿ ಮುಸಲ್ಮಾನೀ ತಿಂಗಳು, ತಾರೀಖುಗಳನ್ನು ಬರೆದಿರುತ್ತಾರೆ.

೧೫ನೆಯ ಖಾನೆ :— ಪಾರಸೀ ತಿಂಗಳು, ತಾರೀಖನ್ನು.

೧೬ನೆಯ ಖಾನೆ :— ಫಸಲೀ ತಿಂಗಳು, ತಾರೀಖನ್ನು.

೧೭ನೆಯ ಖಾನೆ :– ಇಂಗ್ರೇಜಿ ತಿಂಗಳು, ತಾರೀಖನ್ನು ಬರೆದಿರುತ್ತಾರೆ.

೧೮ನೆಯ ಖಾನೆ :— ಇಲ್ಲಿ ರವಿಯು ಪ್ರತಿನಿತ್ಯದ ಉದಯದ (ಸ್ಟ್ಯಾಂಡರ್ಡ್)ವೇಳೆಯನ್ನು.

೧೯ನೆಯ ಖಾನೆ :— ಇಲ್ಲಿ ರವಿಯ ಪ್ರತಿನಿತ್ಯ ಅಸ್ತವಾಗುವ (ಸ್ಟ್ಯಾಂಡರ್ಡ್)ವೇಳೆ ತೋರಿಸುತ್ತಾರೆ. ಉದಾ : ಉ ೬-೨೦ ಅಸ್ತ ೬-೪೦ ಹೀಗೆ.

೨೦ನೆಯ ಖಾನೆ :— ಇಲ್ಲಿ ಯಾವ ರಾಶಿಯಲ್ಲಿ ಎಷ್ಟು ಘಳಿಗೆಯಲ್ಲಿ ಚಂದ್ರನು ಇರುವನು ಅಂದರೆ ಪ್ರತಿನಿತ್ಯದ ಚಂದ್ರನ ರಾಶಿಯನ್ನು ತೋರಿಸಿರುತ್ತಾರೆ. ಉದಾ : ೩-೧೨ ನ. ವೃ ಎಂದು ಬರೆದಿರುತ್ತಾರೆ. ೩ ಘಳಿಗೆ ೧೨ ಪಳದ ನಂತರ ಚಂದ್ರನು ವೃಷಭರಾಶಿಯಲ್ಲಿ ಪ್ರವೇಶಿಸುತ್ತಾನೆ ಎಂದರ್ಥ.

೨೧ನೆಯ ಖಾನೆ :— ಇದು ಕೊನೆಯ ಖಾನೆಯಿದ್ದು, ಶಾಸ್ತ್ರಾರ್ಥ ವಿಚಾರವನ್ನು ಕೊಟ್ಟಿರುತ್ತಾರೆ. ತಿಥಿ, ನಕ್ಷತ್ರ, ವಾರ, ಯೋಗ, ಕರಣಗಳ ಸಾಮೂಹಿಕ ವಿಚಾರವನ್ನು ಕೊಟ್ಟಿರುತ್ತಾರೆ.

ಇನ್ನು ಪಂಚಾಂಗದ ಕೊನೆಯ ಭಾಗದಲ್ಲಿ ಮತ್ತೆ ೨ ಭಾಗಗಳಿವೆ. ಸ್ಪಷ್ಟಗ್ರಹಗಳ ಖಾನೆಯೂ, ಇನ್ನೊಂದು ೧೫ ದಿವಸಗಳ ಕುಂಡಲಿಯೂ

ಹೀಗೆ ಪಂಚಾಂಗಗಳಲ್ಲಿ ೨೩ ಖಾನೆಗಳ ೨೩ ಭಾಗಗಳಿವೆ. ಈ ಎಲ್ಲ ಖಾನೆಗಳನ್ನು ಹೇಗೆ ನೋಡಬೇಕು ಎಂಬುದನ್ನು ವಿವೇಚಿಸಲಾಗುವದು.

ಪ್ರತಿಯೊಂದು ಖಾನೆಯ ಪೂರ್ಣ ವಿಷಯ

ಖಾನೆ ನಂ. ೧ ತಿಥಿ

ಅಮಾ ಅಂದರೆ ಒಂದು ಕಡೆಗೆ ವಸ ಅಂದರೆ ಇರು. ಅಮವಾಸ ಅಂದರೆ ಒಂದೇ ಕಡೆಗಿರು. ಸೂರ್ಯ ಚಂದ್ರರು ಯಾವ ದಿನ ಒಂದೇ ಕಡಗೆ ಕೂಡುವರೊ (ಇರುವರೋ) ಆ ದಿನಕ್ಕೆ ಅಮವಾಸ್ಯೆ ಅನ್ನುತ್ತಾರೆ.

ಅಮಾವಾಸ್ಯೆಯಲ್ಲಿ ಚಂದ್ರನು ನಮಗೆ ಕಾಣಿಸುವುದಿಲ್ಲ. ಚಂದ್ರನ ಗತಿಯು ಸೂರ್ಯನ ಗತಿಗಿಂತ ಶೀಘ್ರವಾಗಿರುತ್ತದೆ ಚಂದ್ರನು ಸೂರ್ಯನ ಹತ್ತಿರಕ್ಕೆ ಬರಬರುತ್ತ ಅಮಾವಾಸ್ಯದ ನಂತರ ಪೂರ್ವದ ಕಡೆಗೆ ಪ್ರವಿಷ್ಟ ಹತ್ತುತ್ತಾನೆ. ಆಗ ಪ್ರತಿಪದೆಯು ಆರಂಭವಾಗುತ್ತದೆ. ಸೂರ್ಯನಿಂದ ಚಂದ್ರನು ೧೨ ಅಂಶ ಕ್ರಮಿಸಿದ ಕೂಡಲೇ ಪ್ರತಿಪದೆಯು ಸಮಾಪ್ತಿಯಾಗುತ್ತದೆ. ಅಂದರೆ ಚಂದ್ರ ಸೂರ್ಯರಲ್ಲಿ ೧೨ ಅಂಶ ಅಂತರವಾದಾಗ ಒಂದು ತಿಥಿ ಆಗುತ್ತದೆ.

೬೦ ಘಳಿಗೆ ಅಂದರೆ ಒಂದು ತಿಥಿ ಆಗುತ್ತದೆ. ೬೦ ಘಟಿಗೆಗಿಂತ ಹೆಚ್ಚಾಗಿದ್ದರೆ ವೃದ್ಧಿ (ತಿಥಿವೃದ್ಧಿ) ಅನ್ನುತ್ತಾರೆ. ೬೦ ಘಟಿಗೆಗಿಂತ ಕಡಿಮೆ ಆದರೆ ಕ್ಷಯ (ತಿಥಿಕ್ಷಯ) ಅನ್ನುತ್ತಾರೆ. ಸೂರ್ಯೋದಯಕ್ಕೆ ಯಾವ ತಿಥಿ ಇರುವದೋ ಅದನ್ನೇ ಪಂಚಾಂಗದಲ್ಲಿ ಬರೆದಿಯತ್ತಾರೆ. ಒಂದು ಪಕ್ಷದಲ್ಲಿ ೧೫ ತಿಥಿಗಳಿರುತ್ತವೆ ಅಂದರೆ ತಿಂಗಳಿಗೆ ೩೦ ತಿಥಿಗಳಿವೆ. ಎರಡೂ ಪಕ್ಷಗಳಲ್ಲಿ ೧೪ ತಿಥಿಗಳು ಸರಿಯಾಗಿ ಬರೆದಿರುತ್ತಾರೆ. ಶುಕ್ಲಪಕ್ಷದ ೧೫ನೆಯ ತಿಥಿಗೆ ಪೂರ್ಣಿಮಾ ಎಂತಲೂ, ಕೃಷ್ಣ ಪಕ್ಷದ ೧೫ನೆಯ ತಿಥಿಗೆ ಅಮಾವಾಸ್ಯೆ ಎಂತಲೂ ಬರೆದಿರುತ್ತಾರೆ. ಕೃಷ್ಣಪಕ್ಷದ ೧೫ನೆಯ ತಿಥಿಗೆ ೩೦ ಅಂಕಿಯನ್ನು ಹಾಕಿರುತ್ತಾರೆ.

ಶುದ್ಧ ಪ್ರತಿಪದೆಯಿಂದ ಹುಣ್ಣಿಮೆಯ ವರೆಗೆ ಶುಕ್ಲಪಕ್ಷವು. ಈ ಪಕ್ಷದಲ್ಲಿ ಚಂದ್ರನು ಪ್ರತಿದಿನ ವೃದ್ಧಿಂಗತವಾಗುತ್ತ ಹೋಗುತ್ತಾನೆ. ಕೃಷ್ಣ

ಪಕ್ಷದಲ್ಲಿ ಚಂದ್ರನ ಕಲೆಯು ಕ್ಷೀಣವಾಗುತ್ತ ಹೋಗುವದು. ಅಮಾವಾಸ್ಯೆಗೆ ಕೃಷ್ಣ ಪಕ್ಷವು ಮುಗಿಯುವದು.

ತಿಥಿವೃದ್ಧಿ :— ಎರಡು ದಿವಸಗಳ ಸೂರ್ಯೋದಯಕ್ಕೆ ಒಂದೇ ತಿಥಿ ಇದ್ದರೆ ವೃದ್ಧಿತಿಥಿ ಅನ್ನುತ್ತಾರೆ. ಅಂದರೆ ೧೬ ದಿವಸಕ್ಕೆ ಒಂದು ಪಕ್ಷವಾಗುತ್ತದೆ.

ಕ್ಷಯತಿಥಿ :— ಎರಡು ದಿವಸಗಳ ಸೂರ್ಯೋದಯಕ್ಕೆ ೨ ತಿಥಿ ಹೇಗೆ ಇರುತ್ತವೆಯೋ, ಹಾಗೆ ಎರಡು ಸೂರ್ಯೋದಯಗಳ ಒಳಗೆ— ಅಂದರೆ ಸೂರ್ಯೋದಯದ ಪೂರ್ವದಲ್ಲಿಯೇ ತಿಥಿ ಬದಲಾಗುತ್ತದೆ. ಇದಕ್ಕೆ ಕ್ಷಯ ತಿಥಿ ಅನ್ನುತ್ತಾರೆ. ಆಗ ೧೪ ತಿಥಿಗಳಿಗೆ ಒಂದು ಪಕ್ಷವಾಗುತ್ತದೆ.

ಖಾನೆ ನಂ. ೨ ಸೂರ್ಯೋದಯದಿಂದ ಸೂರ್ಯೋದಯದ ವರೆಗಿನ ಕಾಲಕ್ಕೆ ವಾರವೆಂದು ಹೆಸರು. ರವಿವಾರ, ಸೋಮವಾರ ಹೀಗೆ ಏಳು ವಾರಗಳು. ಒಂದೊಂದು ವಾರಕ್ಕೆ ೨೪ ಹೋರೆ (ತಾಸು)ಗಳು. ಒಂದೊಂದು ಹೋರೆಗೆ ಒಬ್ಬೊಬ್ಬ ಗ್ರಹನು ಅಧಿಪತಿಯಾಗಿದ್ದಾನೆ. ಉದಯ ಹೋರಾಧಿಪತಿಯ ಹೆಸರೇ ಆ ವಾರಕ್ಕೆ ಬಿದ್ದಿರುತ್ತದೆ. ಈ ಪೃಥ್ವಿಯು ಉತ್ಪನ್ನ ಕಾಲಕ್ಕೆ ಮೊದಲು ರವಿ, ಆಮೇಲೆ ಶುಕ್ರ, ಬುಧ, ಚಂದ್ರ ಶನಿ, ಗುರು, ಮಂಗಳ (ಕುಜ)ರು ಕ್ರಮವಾಗಿ ಉತ್ಪನ್ನರಾದರು. ಆದ್ದರಿಂದ ಅವರು ಕ್ರಮವಾಗಿ ಹೋರಾಧಿಪತಿಗಳಾದರು. ಮುಂದಿನ ಪುಟದಲ್ಲಿ ತೋರಿಸಿದ ಹೋರಾಚಕ್ರದಿಂದ ಹೋರಾಧಿಪತಿಗಳನ್ನು, ವಾರವನ್ನು ತಿಳಿದುಕೊಳ್ಳಬಹುದು.

ಈ ವಾರಗಳ ಆರಂಭದ ಗಣನೆಗಳ ಬಗ್ಗೆ ಸೂಕ್ಷ್ಮವಾದ ಮತಭೇದಗಳಿವೆ. ಉದಾ : ಹಿಂದೂ ಪದ್ಧತಿಯ ಪ್ರಕಾರ ಸೂರ್ಯೋದಯದಿಂದ ಸೂರ್ಯೋದಯದ ವರೆಗೆ ಒಂದೇ ವಾರವು. ಹಾಗೂ ಸೂರ್ಯೋದಯಕ್ಕೆ ವಾರದ ಆರಂಭವಾಗುತ್ತದೆ. ಆದರೆ ಮುಸಲ್ಮಾನೀ ಪದ್ಧತಿಯಂತೆ ಸೂರ್ಯಾಸ್ತಕ್ಕೆ ವಾರದ ಆರಂಭವಾಗುತ್ತದೆ. ಇಂಗ್ರೇಜಿ ಪದ್ಧತಿಯಂತೆ ರಾತ್ರಿ ೧೨ ಘಂಟೆ ಆದ ಬಳಿಕ ವಾರದ ಆರಂಭವಾಗುತ್ತದೆ. ಉದಾ :— ಒಬ್ಬ ವ್ಯಕ್ತಿಯು ಬುಧವಾರ ರಾತ್ರಿ ೯ ಘಂಟೆಗೆ ಜನಿಸಿದ್ದಾನೆ ಎಂದು

... ಏಪ್ರಿ... ಹಿಜರಿ ೧೩೭೮ ಶವ್ವಾಲ, ವಿಕ್ರಮ ಸಂ. ...೨೦೧೫, ಭಾರತೀಯ ಚೈತ್ರ–ವೈಶಾಖ...

ಶ್ರೀ ಶಾಲಿವಾಹನ ಶಕ ೧೮೮೧ ವಿಕಾರಿನಾಮ ಸಂವತ್ಸರೇ ಚೈತ್ರ ಶುಕ್ಲಪಕ್ಷಃ

...	...	...	...	...	...	...	...	...	ಚಂದ್ರ	ಶಾಸ್ತ್ರಾ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ಮೇಷೇ	ನವಸಂವತ ರಾರಂಭಃ ತೈಲ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ಮೇಷೇ	ದಮನಕೇನ ಶಿವಗೌರೀ ಪೂ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	... ನ. ವೃ	ಗೌರೀತೃತೀಯಾ ಶ್ರೀಗೌರೀ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ವೃಷಭೇ	ಶ್ರೀವಿನಾಯಕ ಚತುರ್ಥೀ, ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	... ನ. ಮಿ.	ಅಶ್ವಿನೀ ೧ ಮೇಷೇರ್ಕಃ ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ಮಿಥುನೇ	ಸ್ಕಂದಾಯ ದಮನಾರ್ಪಣ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	... ನ. ಕ.	ಭಾಸ್ಕರಾಯ ದಮನಾರ್ಪಣ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ಕರ್ಕೇ	ಶ್ರೀಭವಾನೀ ಜಯಂತಿ ಗು...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ಕರ್ಕೇ	ಶ್ರೀರಾಮನವಮೀ ಶ್ರೀದೇ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	... ನ. ೩೦	ಪ್ರಾತಃ ಪಾರಣಂ ಶ್ರೀಶಾ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ಸಿಂಹೇ	ಸರ್ವೇಷಾಂ ೧೧ ಕಾಮದಾ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	... ನ. ಕ.	ಸೋಮಪ್ರದೋಷಃ ವಿಷ್ಣು...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ಕನ್ಯಾ	ಮಹಾವೀರ ಜಯಂತೀ, ಅ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	... ಪ. ತು.	ಶ್ರೀಮೂಲತಃ ೧೫, ಚೈ...
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	ತುಲಾ	ದವನದ ಹುಣ್ಣಿಮೆ, ಹನುಮ...

... ನೂತನಪಂಚಾಂಗ ಫಲಶ್ರವಣಂ, ... ಶ್ರೀದೇವೀ-ಶ್ರೀರಾಮನವರಾತ್ರಾ...
... ತಿಃ ಕಲ್ಪಾದಿಃ, ಬಾಲೇಂದು ಪೂಜಾ ಕೃತ್ತಿ ೨, ವೃಷಭೇ ಶುಕ್ರಃ, ೧೯೫೦, (...
... (೩) ದೋಲೋತ್ಸವಃ, ಮತ್ಸ್ಯ ... ಮನ್ವಾದಿಃ ಧ. ಪ್ರ. ... ತಿಥಿಕ...
... (೫) ಧಾ. ಸಾ. ಕಲ್ಪಾದಿಃ, ನಾಗಪೂಜಾ, ಹಯವ್ರತಂ, ಶ್ರೀಲಕ್ಷ್ಮೀ ಪೂಜಾ. ವಿಮ...
... ಪ. ಯಮಘಂಟಃ ೪-೩೪, ... (...) ೧೧-೫೨, ನಾ. ಧ. ಸಿ. ೫-೨೧, ನಂ...
... ಕ್ಷಃ ೧೨-೩೩, ನಂ. ಅಶ್ವಿ ೨, ... ೨೯-೪೮ ಶ್ರೀಸತ್ಯಧ್ಯಾನತೀರ್ಥರ, (...
... ೧೨-೯೦, ... ೩೦-..., ... (೧೨) ... ಪ. ಅಶ್ವಿ...
... ೩೭-೩೨, ಪ. ಘಟಿ: ೮-೧, ... -೩೨, ಭಾರತೀಯ ... ತಿಥಿಪ್ರಯ...
... ದೋಲೋತ್ಸವ..., ಮನ್ವಾದಿಃ ... ನಂ. ಧ. ... ೧೭-..., ... ೪೬-೧೩ (...
... ೧, ವಿ ಪ. ... ಹುಟ್ಟ ವಿದ್ಯಾರ್ಥಿ... ಕಾಲಕಾಲೇಶ್ವರ, ... ಮಹಾಲಕ್ಷ್ಮೀ...

ಪಕ್ಷದಲ್ಲಿ ಚಂದ್ರನ ಕಲ
ಕೃಷ್ಣ ಪಕ್ಷವು ಮುಗಿಯ

ತಿಥಿವೃದ್ಧಿ :—
ಇದ್ದರೆ ವೃದ್ಧಿತಿಥಿ ಎ
ವಾಗುತ್ತದೆ.

ಕ್ಷಯಾತಿಥಿ :—
ಇರುತ್ತವೆಯೋ, ಹಾ
ಸೂರ್ಯೋದಯದ
ತಿಥಿ ಅನ್ನುತ್ತಾರೆ.

ಖಾನೆ ನಂ. ೨
ಕಾಲಕ್ಕೆ ವಾರವೆಂದು
ವಾರಗಳು. ಒಂದೊ
ಹೋರೆ ಒಬ್ಬೊಬ್ಬ
ಪತಿಯ ಹೆಸರೇ ಆ ವ
ಮೊದಲು ರವಿ, ಆ
(ಶನಿ)ರು ಕ್ರಮವಾಗಿ
ಹೋರಾಧಿಪತಿಗಳಾದ
ದಿನದ ಹೋರಾಧಿಪತಿಗ

ಈ ವಾರಗಳ
ಗಳವೆ. ಉದಾ :
ಸೂರ್ಯೋದಯದ ವರ
ವಾರದ ಆರಂಭವಾಗ
ಸೂರ್ಯಾಸ್ತಕ್ಕೆ ವಾರ
ರಾತ್ರಿ ೧೨ ಘಂಟೆ ಅ
ಒಬ್ಬ ವ್ಯಕ್ತಿಯು

ಹೋರಾಚಕ್ರ

ಹೋರಾಗಳು	ಹಗಲು ಹೋರಾಗಳು ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ												ರಾತ್ರಿ ಹೋರಾಗಳು ಸೂರ್ಯಾಸ್ತದಿಂದ ಸೂರ್ಯೋದಯದ ವರೆಗೆ											
	೧	೨	೩	೪	೫	೬	೭	೮	೯	೧೦	೧೧	೧೨	೧	೨	೩	೪	೫	೬	೭	೮	೯	೧೦	೧೧	೧೨
ರವಿವಾರ	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು
ಸೋಮ	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು
ಮಂಗಳ	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು
ಬುಧ	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ
ಗುರು	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ
ಶುಕ್ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ
ಶನಿ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು	ರ	ಶು	ಬು	ಚಂ	ಶ	ಗು	ಕು

ರ—ರವಿ, ಚಂ—ಚಂದ್ರ, ಕು—ಕುಜ (ಮಂಗಳ), ಬು—ಬುಧ, ಗು—ಗುರು, ಶು—ಶುಕ್ರ, ಶ—ಶನಿ ಎಂದು ತಿಳಿಯಿರಿ.

ತಿಳಿದರೆ ಹಿಂದೂ ಪದ್ಧತಿಯಂತೆ ಬುಧವಾರವು ಅವನ ಜನ್ಮವಾರವೂ, ಮುಸಲ್ಮಾನೀ ಪದ್ಧತಿಯಂತೆ ಗುರುವಾರ ಅವನ ಜನ್ಮವಾರವೂ ಆಗುತ್ತದೆ. ಇದರಂತೆ ಅದೇ ವ್ಯಕ್ತಿಯು ಬುಧವಾರ ರಾತ್ರಿ ೩ ಘಂಟೆಗೆ ಜನ್ಮತಾಳಿದ್ದಾನೆ ಎಂದು ತಿಳಿದರೆ, ಇಂಗ್ಲೀಷ ಪದ್ಧತಿಯಂತೆ ಗುರುವಾರವಾಗುತ್ತದೆ. ಆದುದರಿಂದ ವಾರದ ಬಗ್ಗೆ ವಿಶೇಷ ಲಕ್ಷ್ಯ ಕೊಡಬೇಕು. ನಮ್ಮ ಪಂಚಾಂಗದಲ್ಲಿ ಸೂರ್ಯೋದಯದಿಂದ ವಾರದ ಆರಂಭವಾಗುತ್ತದೆ.

ಸ್ಥಾನ ನಂ. ೩ ಹಾಗೂ ೪ — ಈ ಎರಡೂ ಸ್ಥಾನಗಳಲ್ಲಿ ಅನುಕ್ರಮವಾಗಿ ತಿಥಿಗಳ ಘಳಿಗೆ ಹಾಗೂ ಪಳಗಳಿರುತ್ತವೆ. ಉದಾ— ಪ್ರತಿಪದೆಯು (ಪಾಡ್ಯ) ಗುರುವಾರ ೧೨ ಘಳಿಗೆ ೩೨ ಪಳ ಇದೆ ಎಂದು ತಿಳಿದರೆ, ಇದರ ತಾತ್ಪರ್ಯವಿಷ್ಟೇ, ಪ್ರತಿಪದೆಯು ಗುರುವಾರ ಸೂರ್ಯೋದಯದಿಂದ ೧೨ ಘಳಿಗೆ ೩೨ ಪಳದ ವರೆಗೆ ಇರುತ್ತದೆ. ತದನಂತರ ಬಿದಿಗೆ (ದ್ವಿತೀಯಾ), ಪ್ರಾರಂಭ ಆಗುತ್ತದೆ ಎಂದು ತಿಳಿಯಬೇಕು.

ಸ್ಥಾನ ನಂ. ೫ ಚಂದ್ರನಿಂದ ೧೩ ಅಂಶ ೨೦ ಕಲಾ ಆಗುವ ಸಮಯುಕ್ತ ನಿತ್ಯ (ಚಂದ್ರ) ನಕ್ಷತ್ರವೆನ್ನುತ್ತಾರೆ. ಒಂದೊಂದು ನಕ್ಷತ್ರವು ೬೦ ಘಳಿಗೆ ೪೩ ಪಳಗಳಿರುತ್ತದೆ. ಈ ನಕ್ಷತ್ರಗಳು ಸಹ ವೃದ್ಧಿ ಹಾಗೂ ಕ್ಷಯಗಳಾಗುತ್ತವೆ. (ಒಂದೇ ನಕ್ಷತ್ರವು ೨ ದಿವಸ ಇರಬಹುದು.)

ನಮ್ಮ ಪಂಚಾಂಗಗಳಲ್ಲಿ ಈ ೨೭ ನಕ್ಷತ್ರಗಳ ಆದ್ಯ ಅಕ್ಷರಗಳನ್ನಷ್ಟೇ ಬರೆದಿರುತ್ತಾರೆ. ಉದಾ— ಅ ಅಂದರೆ ಅಶ್ವಿನಿ, ಭ ಅಂದರೆ ಭರಣಿ ಹೀಗೆ. ಈ ನಕ್ಷತ್ರಗಳನ್ನು ಗುರುತಿಸಲು ಒಮ್ಮೊಮ್ಮೆ ಕಠಿಣವಾಗುತ್ತದೆ. ಆ ಅಂದರೆ ಆರಿದ್ರಾ ನಕ್ಷತ್ರವೂ, ಆ ಅಂದರೆ ಆಶ್ಲೇಷಾ ನಕ್ಷತ್ರವೂ ಆಗುತ್ತದೆ. ಇದರಂತೆ ಉ ಅಂದರೆ ಉತ್ತರಾ ಹಾಗೂ ಉತ್ತರಾಷಾಢಾ ಅಥವಾ ಉತ್ತರಾಭಾದ್ರಪದ ಹೀಗೆ ಗುರುತಿಸಲು ಕಠಿಣವಾಗುತ್ತದೆ. ಆದ್ದರಿಂದ ಆಯಾ ನಕ್ಷತ್ರಗಳ ಹಿಂದಿನ ನಕ್ಷತ್ರ ಹಾಗೂ ಮುಂದಿನ ನಕ್ಷತ್ರಗಳನ್ನು ಮೊದಲು ಕಂಡುಹಿಡಿಯಬೇಕು.

ಸ್ಥಾನ ನಂ. ೬ ಹಾಗೂ ೭— ಈ ಎರಡೂ ಸ್ಥಾನಗಳಲ್ಲಿ ಅನುಕ್ರಮವಾಗಿ ನಕ್ಷತ್ರಗಳ ಘಳಿಗೆ ಹಾಗೂ ಪಳಗಳಿರುತ್ತವೆ. ಉದಾ— ಗುರುವಾರ ಅಶ್ವಿನಿ ೪೫-೪೨ ಎಂದು ತಿಳಿಯಿರಿ. ಅಂದರೆ ಗುರುವಾರ ಅಶ್ವಿನಿ

ನಕ್ಷತ್ರವು ಸೂರ್ಯೋದಯದಿಂದ ೪೫ ಘಳಿಗೆ ೪೨ ಪಳದ ವರೆಗೆ ಇರುತ್ತದೆ ಎಂದು ತಿಳಿಯಬೇಕು.

ಖಾನೆ ನಂ. ೮— ಈ ಎಂಟನೆಯ ನಂಬರಿನ ಖಾನೆಯಲ್ಲಿ ಯೋಗಗಳನ್ನು ಬರೆದಿದ್ದಾರೆ. ಚಂದ್ರ ಮತ್ತು ರವಿಯ ಬೇರೀಜು ೧೩ ಅಂಶ ೨೦ ಕಲೆಯಾಗುವ ಸಮಯಕ್ಕೆ ಯೋಗವೆಂದು ಹೆಸರು. ವಿಷ್ಕಂಭದಿಂದ ವೈಧೃತಿ ವರೆಗೆ ೨೭ ಯೋಗಗಳಿವೆ. ಇವನ್ನು "ಪಾರಿಭಾಷಿಕ ಶಬ್ದಗಳು" ಎಂಬ ಮೊದಲನೆಯ ಪ್ರಕರಣದಲ್ಲಿ ವಿವೇಚಿಸಲಾಗಿದೆ.

ಖಾನೆ ನಂ. ೯ ಹಾಗೂ ೧೦ — ಈ ಎರಡೂ ಖಾನೆಗಳಲ್ಲಿ ಅನುಕ್ರಮವಾಗಿ ಯೋಗಗಳ ಘಳಿಗೆ ಪಳಗಳಿರುತ್ತವೆ. ಉದಾ– ಶುಕ್ರವಾರ ಸೂರ್ಯೋದಯದಿಂದ ವಿಭವಯೋಗ ೨ ಘಳಿಗೆ ೧೨ ಪಳದ ವರೆಗೆ ಇರುತ್ತದೆ ಎಂದು ತಿಳಿಯಬೇಕು.

ಖಾನೆ ನಂ. ೧೧— ಈ ೧೧ನೆಯ ನಂಬರಿನ ಖಾನೆಗಳಲ್ಲಿ ಕರಣಗಳ ಬಗೆಗೆ ಕೊಡಲಾಗಿದೆ. ತಿಥಿಯ ಅರ್ಧಭಾಗಕ್ಕೆ ಕರಣಗಳೆನ್ನುತ್ತಾರೆ. ಅಂದರೆ ಒಂದು ತಿಥಿಯಲ್ಲಿ ೨ ಕರಣಗಳಿರುತ್ತವೆ. ಒಂದು ಚಂದ್ರಮಾಸದಲ್ಲಿ ೩೦ ತಿಥಿಗಳೂ ೬೦ ಕರಣಗಳೂ ಆಗುತ್ತವೆ. ಚಂದ್ರ ಹಾಗೂ ಸೂರ್ಯನಲ್ಲಿ ೬ ಅಂಶದ ಅಂತರವಾದ ಕೂಡಲೇ ಒಂದು ಕರಣವಾಗುತ್ತದೆ. ಬವದಿಂದ ಕಿಂಸ್ತುಘ್ನದ ವರೆಗೆ ೧೧ ಕರಣಗಳಿವೆ ಇವನ್ನು "ಪಾರಿಭಾಷಿಕ ಶಬ್ದಗಳು" ಎಂಬ ಮೊದಲನೆಯ ಪ್ರಕರಣದಲ್ಲಿ ಕೊಡಲಾಗಿದೆ.

ವದ್ಯ ಚತುರ್ದಶಿಯ ಉತ್ತರ ಭಾಗದಲ್ಲಿ ಶಕುನಿ ಕರಣವೂ, ಅಮವಾಸೆಯ ಪೂರ್ವಭಾಗದಲ್ಲಿ ಚತುಷ್ಪಾದ ಕರಣವೂ, ಅಮಾವಾಸ್ಯೆಯ ಉತ್ತರ ಭಾಗಕ್ಕೆ ನಾಗಕರಣವೂ, ಶುದ್ಧ ಪ್ರತಿಪದೆಯ ಪೂರ್ವ ಭಾಗಕ್ಕೆ ಕಿಂಸ್ತುಘ್ನ ಕರಣವೂ ನಿಶ್ಚಿತವಾಗಿವೆ.

ಇದರಂತೆ ಶುದ್ಧ ಪ್ರತಿಪದೆಯ ಉತ್ತರ ಭಾಗಕ್ಕೆ ಬವ ಕರಣವೂ, ಹಾಗೆ ದ್ವಿತೀಯಾಕ್ಕೆ ಬಾಲವ ಹಾಗೂ ಕೌಲವ ಕರಣವೂ, ತೃತೀಯಾಕ್ಕೆ ತೈತುಲ ಹಾಗೂ ಗರಕರಣವೂ ಹೀಗೆ ಒಂದೊಂದು ತಿಥಿಗೆ ಎರಡೆರಡು ಕರಣಗಳಿವೆ.

ಖಾನೆ ನಂ. ೧೨— ಇದು ಕರಣದ ಘಟಿಕಾ ಪಳ ತೋರಿಸುತ್ತದೆ.

ಖಾನೆ ನಂ. ೧೩— ಈ ೧೩ನೆಯ ನಂಬರಿನ ಖಾನೆಯಲ್ಲಿ ದಿ. ಎಂದು ಬರೆದಿರುತ್ತಾರೆ. ದಿ ಅಂದರೆ ದಿನಮಾನ ಎಂದು ಅರ್ಥ. ಹದಿನೈದನೆಯ ದಿವಸದ ಘಳಿಗೆ-ಪಳಗಳನ್ನು ಕೊಟ್ಟಿರುತ್ತಾರೆ. ಉಳಿದ ದಿವಸಗಳಲ್ಲಿ ಪಳಗಳನ್ನಷ್ಟೇ ತೋರಿಸಿರುತ್ತಾರೆ. ಯಾವುದಾದರೊಂದು ದಿನದ ದಿನಮಾನವನ್ನು ನೋಡಬೇಕಾದರೆ ಪ್ರತಿಪದಾ ದಿನದ ಘಳಿಗೆಯನ್ನು ನೋಡಬೇಕು. ದಿನಮಾನ ನೋಡುವಲ್ಲಿ ಮೊದಲು ಘಳಿಗೆಯ ಅಂಕಿಗಳನ್ನು, ಬಳಿಕ ಪಳಗಳ ಅಂಕಿಗಳನ್ನೂ ಕೊಟ್ಟಿರುತ್ತಾರೆ. ಈ ದಿನಮಾನಗಳಿಂದ ಹಗಲು ಎಷ್ಟು ತಾಸಿನದು ರಾತ್ರಿ ಎಷ್ಟು ತಾಸಿನದು, ಹಗಲು ದೊಡ್ಡದೋ ರಾತ್ರಿ ದೊಡ್ಡದೋ ಎಂಬುದನ್ನು ಗುರುತಿಸಲು ಬರುತ್ತದೆ.

ಖಾನೆ ನಂ. ೧೪ ರಿಂದ ೧೬— ನಂಬರಿನ ಖಾನೆಗಳ ವರೆಗೆ ಫಾರಸೀ, ಫಸಲೀ, ಮುಸಲ್ಮಾನೀ. ಇಂಗ್ರೇಜೀ ಮೊದಲಾದ ತಾರೀಖುಗಳನ್ನು ಕೊಟ್ಟಿರುತ್ತಾರೆ. ಇವುಗಳನ್ನು ಮೊದಲನೆಯ ಪ್ರಕರಣದಲ್ಲಿ ಪೂರ್ಣವಾಗಿ ವಿವೇಚಿಸಲಾಗಿದೆ.

ಖಾನೆ ನಂ ೧೭ ಹಾಗೂ ೧೮ ರಲ್ಲಿ ಪ್ರತಿದಿನದ ಸೂರ್ಯೋದಯದ ಹಾಗೂ ಸೂರ್ಯಾಸ್ತದ ಸ್ಟ್ಯಾ. ಟಾ. ಗಳನ್ನು ಕೊಟ್ಟಿರುತ್ತಾರೆ. ಇವು ಘಟಿಕಾ ಪಳಗಳಲ್ಲದೆ ತಾಸು ಹಾಗೂ ಮಿನಿಟುಗಳಲ್ಲಿ ಕೊಟ್ಟಿರುತ್ತಾರೆ. ಉದಾ : ರ.ಉ ೬-೧೪, ರ. ಅ. ೬-೩೭ ಅಂದರೆ ಸೂರ್ಯೋದಯವು ೬ ಹೊಡೆದು ೧೪ ಮಿನಿಟಿಗೆ ಹಾಗೂ ಸೂರ್ಯಾಸ್ತವು ೬ ಹೊಡೆದು ೩೭ ಮಿನಿಟಿಗೆ ಆಗುತ್ತದೆ ಎಂದು ತಿಳಿಯಬೇಕು.

ಖಾನೆ ನಂ. ೨೦ — ಈ ಖಾ.ನೆ ನಂ. ೨೦ರಲ್ಲಿ ಪ್ರತಿನಿತ್ಯದ ಚಂದ್ರನ ಬಗೆಗೆ ಕೊಟ್ಟಿರುತ್ತಾರೆ. ಪ್ರತಿನಿತ್ಯ ಚಂದ್ರನು ಯಾವ ರಾಶಿಯಲ್ಲಿರುವನು, ಯಾವ ರಾಶಿಯಲ್ಲಿ ಯಾವ ಘಳಿಗೆಗೆ ಬದಲಿಸುವನು ಎಂಬುದನ್ನು ಕೊಟ್ಟಿರುತ್ತಾರೆ. ಉದಾ : ೫-೨೯ ನಂ. ವೃ. ಎಂದು ಬರೆದಿರುತ್ತಾರೆ |

ಎಂದು ತಿಳಿದರೆ, ಸೂರ್ಯೋದಯದ ನಂತರ ಚಂದ್ರನು ೫ ಘಳಿಗೆ ೨೯ ಪಳದ ನಂತರ ಮೇಷ ರಾಶಿಯಿಂದ ವೃಷಭ ರಾಶಿಗೆ ಬರುವನು ಎಂದು ತಿಳಿಯಬೇಕು. ಈ ೧೨ ರಾಶಿಗಳನ್ನು ಯಾವ ದಿನ ಯಾವ ಘಳಿಗೆಗಳಲ್ಲಿ ಚಂದ್ರನು ಬದಲಿಸುವನು ಎಂಬುದನ್ನು ನೋಡಲು ಬರುತ್ತದೆ.

ಖಾನೆ ನಂ. ೨೧— ಈ ಖಾನೆ ನಂ. ೨೧ ರಲ್ಲಿ ಶಾಸ್ತ್ರದ ವಿಚಾರವನ್ನು ಕೊಟ್ಟಿರುತ್ತಾರೆ. ತಿಥಿ, ಯೋಗ, ಕರಣ ಚಂದ್ರದರ್ಶನ ಮೊದಲಾದವನ್ನೂ, ಗ್ರಹಗಳ ಉದಯ, ಅಸ್ತ, ವಕ್ರಿ ಮಾರ್ಗ, ಸಂಕ್ರಮಣ ಮೊದಲಾದ ಸಂಗತಿಗಳನ್ನೂ ಕೊಟ್ಟಿರುತ್ತಾರೆ. ಶಾಸ್ತ್ರದ ವಿಷಯಕ್ಕಾಗಿ ಪ್ರತ್ಯೇಕವಾದ ಮುಂದಿನ ಪ್ರಕರಣದಲ್ಲಿ ಕೊಡಲಾಗಿದೆ.

ಖಾನೆ ನಂ. ೨೨— ಈ ಖಾನೆ ನಂ. ೨೨ರಲ್ಲಿ ಸ್ಪಷ್ಟಗ್ರಹಗಳ ವಿಚಾರ ವನ್ನು ಕೊಡಲಾಗಿದೆ. ರ. ಚಂ. ಮಂ. ಬು. ಗು. ಶು. ಶ. ರಾ. ಕೇ. ಹೀಗೆ ೯ ಗ್ರಹಗಳ ಅದ್ಯಾಕ್ಷರಗಳನ್ನು ಎಡದಿಂದ ಬಲಕ್ಕೆ ಬರೆದಿರುತ್ತಾರೆ. ಕೆಲವು ಪಂಚಾಂಗಗಳಲ್ಲಿ ಹ ಅಂದರೆ ಹರ್ಶಲ, (ಪ್ರಜಾಪತಿ) ನ ಅಂದರ ನೆಪ್ಚೂನ್ ಹೀಗೆ ಆ ಗ್ರಹಗಳ ಆದ್ಯಾಕ್ಷರಗಳನ್ನು ಕೊಟ್ಟಿರುತ್ತಾರೆ. ಹಾಗೆ ಕೆಳ ಮಗ್ಗಲು ಮೇಲಿನಿಂದ ಕೆಳಗೆ ಅಂದರೆ ರಾಶಿ, ಅಂಶ, ಕಲಾ, ವಿಕಲ ಹೀಗೆ ೪ ಭಾಗಗಳನ್ನು ಕೊಟ್ಟಿರುತ್ತಾರೆ. ಈ ಖಾನೆಯ ಕೆಳಗಡೆ ಆಯಾ ಗ್ರಹ ಗಳ ಕೆಳಗಡೆ ಮಾ ಉ. ವ. ಎಂದು ಬರೆದಿರುತ್ತಾರೆ. ಮಾ ಅಂದರೆ ಮಾರ್ಗಿ, ವ ಅಂದರೆ ವಕ್ರ, ಉ ಅಂದರೆ ಉದಯ ಹೀಗೆ ಬರೆದಿರುತ್ತಾರೆ. ಇವೆಲ್ಲ ಪ್ರತಿ ಹದಿನೈದನೆಯ ದಿನದ ಸೂರ್ಯೋದಯಕ್ಕೆ ಆಗುವ ಗತಿ ಯನ್ನು ಕೊಟ್ಟಿರುತ್ತಾರೆ. ಉದಾ : ಚೈತ್ರ ಶುದ್ಧ ಹುಣ್ಣಿವೆ ಅಂದರೆ ಇಂಗ್ರೇಜಿ ದಿನಾಂಕ ೨೩-೪-೧೯೫೯ನೆಯ ದಿನದ ಸೂರ್ಯೋದಯಕ್ಕೆ ಆಗುವ ಎಲ್ಲ ಗ್ರಹಗತಿಯನ್ನು ಕೊಟ್ಟಿರುತ್ತಾರೆ. ರ. ಅಂದರೆ ರವಿ ೦-೮-೫೦-೧೨ ಎಂದು ಬರೆದಿದ್ದಾರೆ. ೦ ರಾಶಿ ಅಂದರೆ ಕೊನೆಯ ರಾಶಿ ಮೀನ ರಾಶಿ, ಮೀನ ಎಂದು ತಿಳಿಯಬೇಕು ರವಿಯು ಮೀನರಾಶಿಯನ್ನು ದಾಟಿ ಮುಂದಿನ ರಾಶಿಯಾದ ಮೇಷ ರಾಶಿಯಲ್ಲಿ ೮ ಅಂಶ ೫೦ ಕಲಾ ೧೨ ವಿಕಲ ಕ್ರಮ

ಸಿದ್ಧಾನೆ ಎಂದು ತಿಳಿಯುತ್ತದೆ. ಇದರಂತೆ ಯಾವ ಗ್ರಹವು ವಕ್ರಿ ಇದೆ, ಮಾರ್ಗಿ ಇದೆ. ಅಸ್ತ ಇದೆ. ಉದಯವಾಗಿದೆ ಎಂಬುದನ್ನು ಈ ಸ್ಪಷ್ಟಗ್ರಹ ಚಕ್ರದಲ್ಲಿ ಕೊಡಲಾಗಿದೆ.

ಖಾನೆ ನಂ. ೨೩— ಯಾವುದೇ ಪಂಚಾಂಗದಲ್ಲಿ ಪ್ರತಿ ೧೫ ದಿವಸಕ್ಕೆ ಅರ್ಥಾತ್ ಪ್ರತಿ ಪಕ್ಷಕ್ಕೆ ಒಂದು ಕುಂಡಲಿ ಇರುತ್ತದೆ. ಇದು ೧೪ ದಿವಸಗಳು ಪೂರ್ಣವಾದ ಬಳಿಕ ೧೫ನೆಯ ದಿವಸದ ಅಂದರೆ ಪೂರ್ಣಿಮಾದ ಸೂರ್ಯೋದಯಕಾಲಿಕ, ಅಮವಾಸ್ಯೆಯ ಸೂರ್ಯೋದಯಕಾಲಿಕ ಇರುವ ಗ್ರಹಗಳನ್ನು ೧೨ ಸ್ಥಾನಗಳ ಕುಂಡಲಿಯಲ್ಲಿ ತೋರಿಸಿರುತ್ತಾರೆ. ಕೆಲವೊಂದು ಪಂಚಾಂಗಗಳಲ್ಲಿ ಒಂದೊಂದು ಪಕ್ಷದಲ್ಲಿ ಅನೇಕ ಕುಂಡಲಿಗಳನ್ನು ತೋರಿಸಿರುತ್ತಾರೆ. ಯಾಕೆಂದರೆ ರವ್ಯಾದಿ ಗ್ರಹಗಳು (ಚಂದ್ರನನ್ನು ಹೊರತುಪಡಿಸಿ) ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಬದಲಿಯಾದಾಗ ಒಂದೊಂದು ಕುಂಡಲಿಯನ್ನು ತೋರಿಸಿರುತ್ತಾರೆ. ಉದಾ : ಚೈತ್ರಮಾಸದ ಶುಕ್ಲಪಕ್ಷ ಪಂಚಮೀ, ಸೋಮವಾರ— ಇಂಗ್ರೇಜಿ ದಿನಾಂಕ ೧೩-೪-೫೯ ರಂದು, ರವಿ ಮೇಷ ರಾಶಿಯನ್ನು ಪ್ರವೇಶಿಸಿದ ಕಾರಣ ಅಂದಿನ ಒಂದು ಕುಂಡಲಿಯನ್ನು ತೋರಿಸಿದ್ದಾರೆ. ಹೀಗೆ ಗ್ರಹಗಳು ಬದಲಿ ಆದ ಹಾಗೆ ಒಂದೊಂದು ಕುಂಡಲಿಯನ್ನು ಕೊಟ್ಟಿರುತ್ತಾರೆ.

ಪ್ರತಿ ಮಾಸದಲ್ಲಿ ಬರುವ ವಿಶೇಷ ತಿಥಿಗಳು

೧ ವಿನಾಯಕ ಚತುರ್ಥಿ

ಇದು ಪ್ರತಿ ಮಾಸದ ಶುದ್ಧ ಚತುರ್ಥಿ ದಿನ ಬರುತ್ತದೆ. ಗಣೇಶ ವ್ರತಕ್ಕಾಗಿ ಇದನ್ನು ಆಚರಿಸುತ್ತಾರೆ. ಮಧ್ಯಾಹ್ನ ಕಾಲದಲ್ಲಿದ್ದ ಚತುರ್ಥಿಯನ್ನೇ ಆಚರಿಸಬೇಕು. ಎರಡೂ ದಿನ ಮಧ್ಯಾಹ್ನ ವ್ಯಾಪ್ತಿಯಾಗಿದ್ದರೆ ಮೊದಲನೆಯ ದಿನದ ತಿಥಿಯನ್ನೇ ಆಚರಿಸಬೇಕು. ಭಾದ್ರಪದ ಶುದ್ಧ ಚತುರ್ಥಿಗೆ ಗಣೇಶ ಚತುರ್ಥಿಯೆಂತಲೂ, ಮಾಘಶುದ್ಧ ಚತುರ್ಥಿಗೆ ಗಣೇಶ ಜಯಂತಿಯೆಂತಲೂ ಅನ್ನುತ್ತಾರೆ.

(ಮಧ್ಯಾಹ್ನ ಕಾಲ ಅಂದರೆ ಸೂರ್ಯೋದಯದ ನಂತರ ೧೨ ಘಳಿಗೆಯಿಂದ ೧೮ ಘಳಿಗೆಯ ವರೆಗೆ).

೨. ದುರ್ಗಾಷ್ಟಮಿ (ದುರ್ಗಾ ೮)

ಪ್ರತಿ ಶುದ್ಧ ಅಷ್ಟಮಿಗೆ-ದುರ್ಗಾಷ್ಟಮಿ ಎನ್ನುತ್ತಾರೆ. ಶಿವಶಕ್ತಿಯ ಪೂಜೆಗೋಸ್ಕರ ಇದನ್ನು ಆಚರಿಸುತ್ತಾರೆ. ಅಶ್ವೀನ ಶುದ್ಧ ಅಷ್ಟಮಿಗೆ ಮಹಾಲಕ್ಷ್ಮೀ ಅಷ್ಟಮಿ ಎನ್ನುತ್ತಾರೆ. ಸೂರ್ಯೋದಯಕ್ಕೆ ಅಷ್ಟಮಿ ತಿಥಿ ಇದ್ದ ತಿಥಿಯನ್ನೇ ಆಚರಿಸುತ್ತಾರೆ.

೩. ಏಕಾದಶಿ

ಶುಕ್ಲ ಹಾಗೂ ಕೃಷ್ಣ ಈ ಎರಡೂ ಪಕ್ಷಗಳಲ್ಲಿ ಏಕಾದಶಿ ತಿಥಿಯನ್ನು ಆಚರಿಸುತ್ತಾರೆ. ಈ ಏಕಾದಶೀ ತಿಥಿಗಳಲ್ಲಿ ಎರಡು ಭೇದಗಳಿವೆ. ೧ ಸ್ಮಾರ್ತ ಏಕಾದಶಿ. ೨ ಭಾಗವತ ಏಕಾದಶಿ.

ದಶಮೀ, ಏಕಾದಶೀ ಅಥವಾ ದ್ವಾದಶೀ ಇವುಗಳಲ್ಲಿ ಯಾವುದಾದರೊಂದು ತಿಥಿ ಕ್ಷಯವಾಗಿದ್ದರೆ ಅಥವಾ ದ್ವಾದಶೀ ತಿಥಿಯು ವೃದ್ಧಿಯಾಗಿದ್ದರೆ ಅಥವಾ ಏಕಾದಶಿ ತಿಥಿಯ ಪೂರ್ವದಲ್ಲಿ ಸೂರ್ಯೋದಯದಿಂದ ೩-೪ ಘಳಿಗೆಯ ವರೆಗೆ ದಶಮೀ ತಿಥಿಯಿದ್ದರೆ (ದಶಮೀಯುಕ್ತ ಏಕಾದಶೀ) ಬಹುತರವಾಗಿ ಎರಡು ಏಕಾದಶಿಗಳು ಬರುತ್ತವೆ. ಮೊದಲನೆಯ ಏಕಾದಶಿಯನ್ನು ಸ್ಮಾರ್ತರೂ, ಎರಡನೆಯದನ್ನು ಭಾಗವತರೂ ಆಚರಿಸುವರು.

೧ ಸೂರ್ಯೋದಯದಿಂದ ೩-೪ ಘಳಿಗೆ ವರೆಗೆ ದಶಮಿ ಇದ್ದು ತದನಂತರ ಏಕಾದಶಿ ಇರುವ (ದಶಮೀಯುಕ್ತ ಏಕಾದಶಿ) ತಿಥಿಯನ್ನು ಸ್ಮಾರ್ತರು ಆಚರಿಸುವರು.

೨ ನವಮೀ ತಿಥಿ ಕ್ಷಯವಿದ್ದು, ದ್ವಾದಶೀ ದಿವಸ ಭಾಗವತ ಏಕಾದಶಿಯೂ, ಅದರ ಪೂರ್ವದ ತಿಥಿಯು ಸ್ಮಾರ್ತ ಏಕಾದಶಿಯೂ ಇರುತ್ತದೆ.

೩ ಎರಡು ದ್ವಾದಶಿಗಳು ಬಂದರೆ ಮೊದಲನೆಯ ದ್ವಾದಶಿಯ ಪೂರ್ವದಲ್ಲಿಯ ತಿಥಿಯು ಸ್ಮಾರ್ತ ಏಕಾದಶಿಯೂ, ಮೊದಲನೆಯ ದ್ವಾದಶೀ ಇರುವ ತಿಥಿಯು ಭಾಗವತ ಏಕಾದಶಿಯೂ ಇರುತ್ತದೆ.

೪ ದ್ವಾದಶೀ ತಿಥಿ ಕ್ಷಯವಿದ್ದರೆ ಏಕಾದಶೀ ಯುಕ್ತವಿರುವ ದ್ವಾದಶೀ ತಿಥಿಯನ್ನು ಭಾಗವತ ಏಕಾದಶಿಯೆಂದೂ, ಅದರ ಪೂರ್ವದಲ್ಲಿರುವ ತಿಥಿಯನ್ನು ಸ್ಮಾರ್ತ ಏಕಾದಶಿಯೆಂತಲೂ ಆಚರಿಸುವರು.

೫ ಎರಡು ಏಕಾದಶಿಗಳಿದ್ದರೆ ಮೊದಲನೆಯದನ್ನು ಸ್ಮಾರ್ತರೂ ಎರಡನೆಯದನ್ನು ಭಾಗವತರೂ ಆಚರಿಸುವರು.

೯ ಪ್ರದೋಷ

ಪ್ರತಿ ತ್ರಯೋದಶಿಗೆ ಮಾಡುವ ಉಪವಾಸಕ್ಕೆ ಪ್ರದೋಷವೆನ್ನುತ್ತಾರೆ. ಶಿವಜನ್ಮ ವ್ರತಕಲ್ಪೋಕ್ತರ ಇದನ್ನು ಆಚರಿಸುವರು. ಪ್ರದೋಷವು ಶನಿವಾರ ಅಥವಾ ಸೋಮವಾರ ಅಥವಾ ಮಂಗಳವಾರ ಬಂದರೆ ಹೆಚ್ಚು ಮಹತ್ವವಿರು. ತ್ರದೆ. ಹಾಗೂ ಅನುಕ್ರಮವಾಗಿ ಶನಿಪ್ರದೋಷ, ಸೋಮಪ್ರದೋಷ, ಭಾಮಪ್ರದೋಷ ಹೀಗೆ ಕರೆಯುವ ವಾಡಿಕೆಯುಂಟು.

೫ ಸಂಕಷ್ಟ ೪ (ಸಂಕಷ್ಟ ಚತುರ್ಥಿ)

ಪ್ರತಿ ಕೃಷ್ಣಪಕ್ಷದ ಚತುರ್ಥಿಗೆ ಸಂಕಷ್ಟ ಚತುರ್ಥಿಯೆನ್ನುತ್ತಾರೆ. ಗಣೇಶ ವ್ರತಕಲ್ಪೋಕ್ತರ ಇದನ್ನು ಆಚರಿಸುವರು. ಚಂದ್ರೋದಯಕ್ಕೆ ವ್ಯಾಪ್ತಿ ಇರುವ ತಿಥಿಯನ್ನೇ ಆಚರಿಸುತ್ತಾರೆ. ಎರಡೂ ದಿನ ಚಂದ್ರೋದಯಕ್ಕೆ ವ್ಯಾಪ್ತಿ ಇದ್ದರೆ ಮೊದಲನೆಯ ದಿನದ ತಿಥಿಯನ್ನೇ ಆಚರಿಸಬೇಕು. ಸಂಕಷ್ಟ ಚತುರ್ಥಿಯು ಮಂಗಳವಾರ ಬಂದರೆ ಹೆಚ್ಚು ಮಹತ್ವವಿದೆ. ಹಾಗೂ ಅದಕ್ಕೆ ಅಂಗಾರಕಾ ಎನ್ನುತ್ತಾರೆ ಶ್ರಾವಣ, ಆಶ್ವೀನ, ಮಾಘ ಮಾಸಗಳ ಚತುರ್ಥಿಗೆ ಹೆಚ್ಚು ಪ್ರಾಧಾನ್ಯವಿದೆ.

೬ ಕಾಲ ೮ (ಕಾಲಾಷ್ಟಮೀ)

ಪ್ರತಿ ಕೃಷ್ಣಪಕ್ಷದ ಅಷ್ಟಮಿಗೆ ಕಾಲಾಷ್ಟಮೀ ಎನ್ನುತ್ತಾರೆ ಶಿವಶಕ್ತಿಯ ವ್ರತಕಲ್ಪೋಕ್ತರ ಇದನ್ನು ಆಚರಿಸುತ್ತಾರೆ. ಅಪರಾಹ್ನ ವ್ಯಾಪಿನಿಯಾಗಲೀ, ನವಮೀ ಯುಕ್ತವಾಗಲಿ ಇದ್ದ ತಿಥಿಯನ್ನು ಆಚರಿಸುತ್ತಾರೆ. ಕಾರ್ತಿಕ ಕೃಷ್ಣ ಅಷ್ಟಮಿಗೆ ಕಾಲಭೈರವ ಜಯಂತಿ ಎನ್ನುತ್ತಾರೆ.

೭ ಶಿವರಾತ್ರಿ

ಪ್ರತಿ ವದ್ಯ ಚತುರ್ಥಿಗೆ ಮಾಡುವ ಉಪವಾಸಕ್ಕೆ ಶಿವರಾತ್ರಿ ಎನ್ನುತ್ತಾರೆ. ತ್ರಯೋದಶಿಯುಕ್ತವಾಗಲೀ ಮಧ್ಯಾಹ್ನ ವ್ಯಾಪ್ತಿ ಇರುವ

ತಿಥಿಯನ್ನೇ ಆಚರಿಸುತ್ತಾರೆ. ಮಾಘ ಕೃಷ್ಣ ಚತುರ್ದಶಿಗೆ ಮಹಾಶಿವರಾತ್ರಿ ಅನ್ನುತ್ತಾರೆ.

೮ ದರ್ಶ ೩೦ (ದರ್ಶ ಅಮವಾಸ್ಯೆ)

ಮಾಸಿಕ ಪಿತೃಶ್ರಾದ್ಧಕ್ಕೋಸ್ಕರ ಈ ತಿಥಿಯನ್ನು ಆಚರಿಸುತ್ತಾರೆ, ಅಪರಾಹ್ನಕಾಲ ವ್ಯಾಪಿನೀ ಇದ್ದ ತಿಥಿಯನ್ನು ಆಚರಿಸುತ್ತಾರೆ.

ತಿಥಿ ವಿವೇಚನೆ

೧ (ಭಾಗ ೧)

ಪ್ರತಿಪದಾ (ಪಾಡ್ಯ)

೧ ಚೈತ್ರ ಶುದ್ಧ ಪ್ರತಿಪದಾ : ಚಾಂದ್ರಮಾನ ಯುಗಾದಿ. (ಹೊಸ ವರುಷ) ಧ್ವಜಾರೋಹಣ.

೨ ಜ್ಯೇಷ್ಠ ಶುದ್ಧ ಪ್ರತಿಪದಾ : ದಶಾಹಾರ ವ್ರತ ಆರಂಭ

೩ ಭಾದ್ರಪದ ವದ್ಯ ಪ್ರತಿಪದಾ : ಮಹಾಲಯಾ ಆರಂಬ.

೪ ಆಶ್ವಿನ ಶುದ್ಧ ಪ್ರತಿಪದಾ : ನವರಾತ್ರಾರಂಭ, ಘಟಸ್ಥಾಪನ, ಮಾತಾಮಹಾ ಶ್ರಾದ್ಧ.

೫ ಕಾರ್ತಿಕ ಶುದ್ಧ ಪ್ರತಿಪದಾ : ಬಲಿಪಾಡ್ಯ, ವಿಕ್ರಮ ಸಂವತ್ಸರ ಆರಂಭ.

೬ ಫಾಲ್ಗುಣ ವದ್ಯ ಪ್ರತಿಪದಾ : ಧೂಲಿವಂದನಂ

೨ ದ್ವಿತೀಯಾ

೧ ಕಾರ್ತಿಕ ಶುದ್ಧ ದ್ವಿತೀಯಾ. (ಯಮದ್ವಿತೀಯಾ ಭಾವುಬೀಜ)

೩ ತೃತೀಯಾ (ತದಿಗೆ)

೧ ಚೈತ್ರ ಶುದ್ಧ ತೃತೀಯಾ : ಮತ್ಸ್ಯ ಜಯಂತಿ.

೨ ವೈಶಾಖ ಶುದ್ಧ ತೃತೀಯಾ : ಅಕ್ಷಯ ತೃತೀಯಾ, ಪರಶುರಾಮ ಜಯಂತಿ, ಬಸವಜಯಂತಿ

೩ ಭಾದ್ರಪದ ಶುದ್ಧ ತೃತೀಯಾ : ಹರಿತಾಲಿಕಾ (ಸ್ವರ್ಣಗೌರಿ ವ್ರತ), ವರಾಹ ಜಯಂತಿ.

೪ ಚತುರ್ಥಿ

೧ ಪ್ರತಿ ಶುದ್ಧ ಚತುರ್ಥಿ : ಇದು ವಿನಾಯಕ ಚತುರ್ಥಿ ಹಾಗೂ ವದ್ಯ ಚತುರ್ಥಿ ಸಂಕಷ್ಟಿ.

೨ ಶ್ರಾವಣ ಶುದ್ಧ ಚತುರ್ಥಿ : ನಾಗಚತುರ್ಥಿ

೩ ಭಾದ್ರಪದ ಶುದ್ಧ ಚತುರ್ಥಿ : ಗಣೇಶ ಚತುರ್ಥಿ

೫ ಪಂಚಮೀ

೧ ಶ್ರಾವಣ ಶುದ್ಧ ಪಂಚಮೀ : ನಾಗಪಂಚಮೀ

೨ ಭಾದ್ರಪದ ಶುದ್ಧ ಪಂಚಮೀ : ಋಷಿಪಂಚಮೀ

೩ ಆಶ್ವೀನ ಶುದ್ಧ ಪಂಚಮೀ : ಲಲಿತ ಪಂಚಮೀ

೪ ಮಾಘ ಶುದ್ಧ ಪಂಚಮೀ : ವಸಂತ ಪಂಚಮೀ

೫ ಫಾಲ್ಗುಣ ವದ್ಯ ಪಂಚಮೀ : ರಂಗಪಂಚಮೀ

೬ ಷಷ್ಠಿ

೧ ಶ್ರಾವಣ ಶುದ್ಧ ಷಷ್ಠಿ : ಶಿರಿಯಾಳ ಷಷ್ಠೀ

೨ ಮಾಘ ಶುದ್ಧ ಷಷ್ಠಿ : ಚಂಪಾ ಷಷ್ಠೀ

೭ ಸಪ್ತಮೀ

೧ ಶ್ರಾವಣ ಶುದ್ಧ ಸಪ್ತಮಿ : ಶೀತಲಾ ಸಪ್ತಮೀ

೨ ಮಾಘ ಶುದ್ಧ ಸಪ್ತಮೀ : ರಥ ಸಪ್ತಮೀ

೮ ಅಷ್ಟಮಿ

೧ ಪ್ರತಿ ಶುದ್ಧ ಅಷ್ಟಮೀ ದುರ್ಗಾಷ್ಟಮೀ, ವದ್ಯ ಅಷ್ಟಮೀ ಕಾಲಾಷ್ಟಮೀ.

೨ ಶ್ರಾವಣ ವದ್ಯ ಅಷ್ಟಮೀ : ಗೋಕುಲಾಷ್ಟಮೀ

೩ ಮಾಘ ಶುದ್ಧ ಅಷ್ಟಮೀ : ಭೀಷ್ಮಾಷ್ಟಮೀ

೯ ನವಮೀ

೧ ಚೈತ್ರ ಶುದ್ಧ ನವಮೀ : ಶ್ರೀರಾಮ ನವಮಿ

೨ ಭಾದ್ರಪದ ವದ್ಯ ನವಮೀ : ಅವಿಧವಾನವಮೀ
೩ ಆಶ್ವೀನ ಶುದ್ಧ ನವಮೀ : ಮಹಾನವಮೀ
೪ ಕಾರ್ತಿಕ ಶುದ್ಧ ನವಮೀ : ಕೂಷ್ಮಾಂಡ ನವಮೀ
೫ ಮಾಘ ವದ್ಯ ನವಮೀ : ರಾಮದಾಸ ನವಮೀ

೧೦ ದಶಮೀ

೧ ಜ್ಯೇಷ್ಠ ಶುದ್ಧ ದಶಮೀ : ದಶಹಾರ ಸಮಾಪ್ತಿ
೨ ಆಶ್ವೀನ ಶುದ್ಧ ದಶಮೀ : ವಿಜಯಾದಶಮೀ

೧೧ ಏಕಾದಶೀ

ಏಕಾದಶೀಯ ಮಹತ್ವ ಹಿಂದೆ ಕೊಡಲಾಗಿದೆ.

೧ ಆಷಾಢ ಶುದ್ಧ ಏಕಾದಶಿ : ಚತುರ್ಮಾಸ ಆರಂಭ, ಯಾತ್ರಾ
೨ ಕಾರ್ತಿಕ ಶುದ್ಧ ಏಕಾದಶೀ

೧೨ ದ್ವಾದಶೀ

೧ ಭಾದ್ರಪದ ಶುದ್ಧ ದ್ವಾದಶೀ : ವಾಮನ ಜಯಂತಿ
೨ ಆಶ್ವೀನ ವದ್ಯ ದ್ವಾದಶೀ : ಗೋವತ್ಸ ದ್ವಾದಶೀ
೩ ಕಾರ್ತಿಕ ಶುದ್ಧ ದ್ವಾದಶೀ : ತುಲಸೀ ವಿವಾಹ

೧೩ ತ್ರಯೋದಶಿ

೧ ಆಶ್ವೀನ ವದ್ಯ ತ್ರಯೋದಶೀ : ಧನ ತ್ರಯೋದಶಿ

೧೪ ಚತುರ್ದಶೀ

೧ ವೈಶಾಖ ಶುದ್ಧ ಚತುರ್ದಶೀ : ನರಸಿಂಹ ಜಯಂತಿ
೨ ಭಾದ್ರಪದ ಶುದ್ಧ ಚತುರ್ದಶೀ : ಅನಂತ ಚತುರ್ದಶೀ
೩ ಆಶ್ವೀನ ವದ್ಯ ಚತುರ್ದಶೀ : ನರಕ ಚತುರ್ದಶೀ
೪ ಕಾರ್ತಿಕ ಶುದ್ಧ ಚತುರ್ದಶೀ : ವೈಕುಂಠ ಚತುರ್ದಶೀ

೧೫ ಹುಣ್ಣಿವೆ (ಪೂರ್ಣಿಮಾ) ೩೦ ಹಾಗೂ ಅಮಾವಾಸಿ

ಎಲ್ಲ ಹುಣ್ಣಿವೆಗಳೂ ಅಮವಾಸ್ಯೆಗಳೂ ಮಹತ್ವದವಿರುತ್ತವೆ.

ಪ್ರತಿಪದಾ ಮೊದಲಾದ ತಿಥಿಗಳ ನಿರ್ಣಯ

ಪಾಡ್ಯದ ನಿರ್ಣಯ :— ಶುಕ್ಲಪಕ್ಷದ ಪಾಡ್ಯವು ಅಪರಾಹ್ಣ ವ್ಯಾಪ್ತಿ ಇದ್ದಲ್ಲಿ, ಪೂಜಾವ್ರತಾದಿಗಳ ವಿಷಯದಲ್ಲಿ ಅಮವಾಸ್ಯಾವೇಧೆಯುಳ್ಳದನ್ನೇ ಗ್ರಹಿಸಬೇಕು. ಸಾಯಾಹ್ನ ವ್ಯಾಪ್ತಿಯಿದ್ದರೂ ಪೂರ್ವವಿದ್ಧವನ್ನೇ ಗ್ರಹಿಸಬೇಕೆಂದು ಮಾಧವಾಚಾರ್ಯರ ಮತವು ಹಾಗಿಲ್ಲದಿದ್ದರೆ ದ್ವಿತೀಯಾಯುಕ್ತವಾದದ್ದನ್ನೇ ಪರಿಗ್ರಹಿಸಬೇಕು. ಬಹುಳ ಪಾಡ್ಯವನ್ನೆಲ್ಲ ದ್ವಿತೀಯಾಯುಕ್ತವಾದದ್ದನ್ನೇ ಗ್ರಹಿಸಬೇಕು. ಉಪವಾಸ ವಿಷಯದಲ್ಲಾದರೆ ಎರಡೂ ಪಕ್ಷಗಳ ಪ್ರತಿಪದೆಗಳನ್ನು ಪೂರ್ವವಿದ್ಧವಾದದ್ದನ್ನೇ ಪರಿಗ್ರಹಿಸಬೇಕು. ಅಪರಾಹ್ಣ ವ್ಯಾಪಿನಿಯಾದ ಪಾಡ್ಯದಲ್ಲಿ ಆಚರಿಸಬೇಕಾದ ಉಪವಾಸಾದಿಗಳಿಗೆ ಪ್ರಾತಃಕಾಲದಲ್ಲಿಯೇ ಸಂಕಲ್ಪ ಮಾಡಬೇಕಷ್ಟೇ ; ಸಂಕಲ್ಪ ಕಾಲದಲ್ಲಿ ಪಾಡ್ಯವೇ ಮೊದಲಾದ ತಿಥಿಯು ಇಲ್ಲದಿದ್ದರೂ ಪಾಡ್ಯವೇ ಮೊದಲಾದವುಗಳನ್ನು ಹೇಳಬೇಕೇ ಹೊರತು ಅಮಾವಾಸ್ಯಾದಿಗಳನ್ನು ಹೇಳಕೂಡದು. ಹೀಗೆಯೇ "ಉಪೋಷ್ಯಾ ದ್ವಾದಶೀ ಶುದ್ಧಾ" ಶುದ್ಧವಾದ ದ್ವಾದಶಿಯಲ್ಲಿಯೇ ಉಪವಾಸ ಮಾಡಬೇಕು. ಇದೇ ರೀತಿಯಾಗಿ, ಏಕಾದಶೀ ವ್ರತ ನಿಮಿತ್ತವಾದ ಸಂಕಲ್ಪ ಪೂಜೆ ಮೊದಲಾದವುಗಳಲ್ಲಿ 'ಏಕಾದಶೀ' ಎಂದು ಹೇಳಬೇಕೆ ಹೊರತು 'ದ್ವಾದಶಿ' ಎಂದು ಹೇಳಕೂಡದು. ಆದರೆ ಸಂಧ್ಯಾವಂದನೆ, ಅಗ್ನಿಹೋತ್ರ ಇತ್ಯಾದಿ ಕರ್ಮಗಳಲ್ಲಿ ಆಯಾಯ ಕಾಲದಲ್ಲಿ ವ್ಯಾಪ್ತಿಯುಳ್ಳ ದ್ವಾದಶಾದಿ ತಿಥಿಯನ್ನೇ ಹೇಳಬೇಕೆಂದು ಧರ್ಮಸಿಂಧುವಿನ ಅಭಿಪ್ರಾಯವು. ಸಂಕಲ್ಪ ಮಾಡುವದೂ ಕೂಡ ಸೂರ್ಯೋದಯಕ್ಕೆ ಮುಂಚೆ ಉಷಃಕಾಲದಲ್ಲಿಯಾಗಲೀ, ಸೂರ್ಯೋದಯದ ನಂತರ ಪ್ರಾತಃಕಾಲವೆಂಬ ಆರುಗಳಿಗೆಗಳಲ್ಲಿ ಮೊದಲಿನ ನಾಲ್ಕು ಗಳಿಗೆಗಳೊಳಗಾಗಿಯಾಗಲೀ ಪ್ರಶಸ್ತವಾಗಿರುತ್ತದೆ. ಮೂರನೆಯ ಮುಹೂರ್ತವಾದ ಕೊನೆಯ ಎರಡು ಗಳಿಗೆಗಳು ನಿಷಿದ್ಧಗಳಾಗಿವೆ.

ದ್ವಿತೀಯಾ ನಿರ್ಣಯ :— ಬಿದಿಗೆಯನ್ನು ಶುಕ್ಲಪಕ್ಷದಲ್ಲಿ ತದಿಗೆಯ ವೇಧೆಯುಳ್ಳದನ್ನು ಗ್ರಹಿಸಬೇಕು. ಕೃಷ್ಣಪಕ್ಷದಲ್ಲಿಯಾದರೆ ಅದರ

ಪ್ರಮಾಣವನ್ನು ಎರಡು ಭಾಗ ಮಾಡಿ, ಪೂರ್ವಾಹ್ನವೆಂಬ ಮೊದಲನೆಯ ಭಾಗದಲ್ಲಿಯೂ ವ್ಯಾಪ್ತಿಯು ಇದ್ದರೆ ಪಾಡ್ಯದ ವೇಧೆಯುಳ್ಳದ್ದನ್ನೇ ಪರಿಗ್ರಹಿಸಬೇಕು; ಹಾಗಿಲ್ಲದಿದ್ದರೆ, ಕೃಷ್ಣಪಕ್ಷದಲ್ಲಿಯೂ ಬಿದಿಗೆ ವೇಧೆಯುಳ್ಳದ್ದನ್ನೇ ಪರಿಗ್ರಹಿಸಬೇಕು.

ತೃತೀಯಾ ನಿರ್ಣಯ :— ರಂಭಾವ್ರತದಲ್ಲಿ ದ್ವಿತೀಯಾವೇಧೆಯುಳ್ಳ ತೃತೀಯೆ (ತದಿಗೆ)ಯನ್ನು ಸ್ವೀಕರಿಸಬೇಕು. ಇತರ ವ್ರತಗಳಲ್ಲಿ ಬಿದಿಗೆಯು ಮೂರು ಮುಹೂರ್ತ (ಆರುಗಳಿಗೆ) ಇದ್ದು, ಅದರ ಮೇಲೆ ತದಿಗೆಯು ಬಂದಿದ್ದರೆ, ಬಿದಿಗೆಯ ವೇಧೆಯುಳ್ಳ ಆ ದಿನವನ್ನು ಬಿಟ್ಟು ಮಾರನೆಯ ದಿನದಲ್ಲಿ ತದಿಗೆಯು ಆರು ಗಳಿಗೆ ಇದ್ದಲ್ಲಿ ಆ ಪರದಿನವನ್ನೇ ಗ್ರಹಿಸಬೇಕು. ಹಿಂದಿನ ದಿನದಲ್ಲಿ ಬಿದಿಗೆಯು ಆರು ಗಳಿಗೆಗಿಂತ ಕಮ್ಮಿಯಾಗಿದ್ದು, ಪರದಿನದಲ್ಲಿ ತದಿಗೆಯು ಆರು ಗಳಿಗೆ ಇಲ್ಲದೆ ಇದ್ದಲ್ಲಿ, ಆಗ ಬಿದಿಗೆಯ ವೇಧೆಯುಳ್ಳ ಹಿಂದಿನದನ್ನೇ ಸ್ವೀಕರಿಸಬೇಕು. ಹಿಂದಿನ ದಿನದಲ್ಲಿ ಬಿದಿಗೆಯು ಆರು ಗಳಿಗೆ ಇದ್ದು, ಮಾರನೆಯ ದಿನದಲ್ಲಿ ತದಿಗೆಯು ಆರು ಗಳಿಗೆಗಳಿಗಿಂತ ಕಡಿಮೆಯಾಗಿದ್ದರೂ, ಮಾರನೆಯ ದಿನವನ್ನೇ ಗ್ರಹಿಸಬೇಕು. ಆದರೆ ಗೌರೀವ್ರತದಲ್ಲಿ ಮಾತ್ರ ಕಲಾಕಾಷ್ಠಾದಿ ಅಲ್ಪಕಾಲದ ಬಿದಿಗೆಯ ವೇಧೆ ಇದ್ದರೂ ಆ ತದಿಗೆಯನ್ನು ಬಿಟ್ಟು ಪರದಿನದಲ್ಲಿ ತದಿಗೆಯು ಕಲಾಕಾಷ್ಠಾದಿ ಅಲ್ಪಕಾಲವಿದ್ದರೂ ಅದನ್ನು ಪರಿಗ್ರಹಿಸಬೇಕು ಯಾವುದಾದರೂ ತಿಥಿಯು ಕ್ಷಯದಿಂದ ಪರದಿನದಲ್ಲಿ ಚತುರ್ಥೀಯುಕ್ತವಾದ ತದಿಗೆಯು ಇರದೇ ಇದ್ದು, ಪೂರ್ವ ದಿನದಲ್ಲಿ ದ್ವಿತೀಯಾ ವೇಧೆಯು ತಪ್ಪದೆಯೂ ಇದ್ದರೆ, ಆಗ ದ್ವಿತೀಯಾವಿದ್ಧವಾದ ತದಿಗೆಯನ್ನೇ ಪರಿಗ್ರಹಿಸಬೇಕು. ತಿಥಿಯ ವೃದ್ಧಿಯಿಂದ ಹಿಂದಿನ ದಿನದಲ್ಲಿ ತದಿಗೆಯು ಅರವತ್ತು ಗಳಿಗೆ ಇದ್ದು, ಮಾರನೆಯ ದಿನದಲ್ಲಿ ಒಂದು ಗಳಿಗೆಯೋ ಮೊದಲಾಗಿ ಉಳಿದಿದ್ದರೆ, ಆಗ ಹಿಂದಿನ ದಿನದಲ್ಲಿ ಅರವತ್ತು ಗಳಿಗೆಯುಳ್ಳ ಶುದ್ಧವಾದದ್ದನ್ನು ಬಿಟ್ಟು ಚತುರ್ಥೀಯುಕ್ತವಾದದ್ದನ್ನೇ ಗೌರೀವ್ರತದಲ್ಲಿ ಪರಿಗ್ರಹಿಸಬೇಕು.

ಚತುರ್ಥೀ ನಿರ್ಣಯ :— ಗಣಪತಿಯ ವ್ರತವಲ್ಲದ ಇತರ ಉಪವಾಸ

ಕಾರ್ಯಗಳಲ್ಲಿ ಪಂಚಮೀಯುಕ್ತವಾದ ಚತುರ್ಥಿ (ಚೌತಿ)ಯನ್ನು ಪರಿಗ್ರಹಿಸ ಬೇಕು. ಚೌತಿ ಮತ್ತು ಗಣಪತಿ ವ್ರತಗಳಲ್ಲಿ ಮಧ್ಯಾಹ್ನ ವ್ಯಾಪ್ತಿಯುಳ್ಳ ಚೌತಿಯನ್ನು ಪರಿಗ್ರಹಿಸಬೇಕು. ಮಧ್ಯಾಹ್ನ ವ್ಯಾಪ್ತಿಯು ಪರದಿನದಲ್ಲಿ ಮಾತ್ರವೇ ಇದ್ದರೆ, ಅದನ್ನೇ ಗ್ರಹಿಸಬೇಕು. ಎರಡು ದಿವಸಗಳಲ್ಲಿಯೂ ಮಧ್ಯಾಹ್ನ ವ್ಯಾಪ್ತಿಯು ಇದ್ದರೂ, ಇಲ್ಲದಿದ್ದರೂ ಎರಡು ದಿವಸಗಳಲ್ಲಿ ಸಮವಾದಿಯಾಗಲೀ, ವಿಷಮವಾಗಿಯಾಗಲೀ ಮಧ್ಯಾಹ್ನದ ಏಕದೇಶದಲ್ಲಿ ವ್ಯಾಪ್ತಿ ಇದ್ದರೂ ಕೂಡ ತೃತೀಯಾ ಯೋಗವು ಮುಖ್ಯವಾದುದರಿಂದ ಹಿಂದಿನ ದಿನವನ್ನೇ ಪರಿಗ್ರಹಿಸಬೇಕು. ನಾಗವ್ರತದಲ್ಲಿ ಎಂದರೆ ಚೌತಿಯು ಪೂರ್ವ ದಿನದಲ್ಲಿ ಮಾತ್ರವೇ ಮಧ್ಯಾಹ್ನದಲ್ಲಿ ವ್ಯಾಪ್ತಿಯುಳ್ಳದ್ದಾಗಿದ್ದರೆ, ಪೂರ್ವ ದಿನವನ್ನೇ ಗ್ರಹಿಸಬೇಕು. ಎರಡು ದಿನಗಳಲ್ಲಿಯೂ, ಮಧ್ಯಾಹ್ನ ವ್ಯಾಪ್ತಿ ಇರಲೀ, ಇಲ್ಲದೇ ಇರಲೀ, ಸಮವಾದಿಯಾಗಲೀ, ವಿಷಮ ವಾಗಿಯಾಗಲೀ, ಮಧ್ಯಾಹ್ನದ ಏಕದೇಶದಲ್ಲಿ ವ್ಯಾಪ್ತಿ ಇದ್ದರೆ, ಈ ನಾಲ್ಕು ಸಂದರ್ಭಗಳಲ್ಲಿ ಪಂಚಮೀಯುಕ್ತವಾದದ್ದನ್ನೇ ಪರಿಗ್ರಹಿಸಬೇಕು. ಸಂಕಷ್ಟ ಚತುರ್ಥಿಯಲ್ಲಿ ಮಾತ್ರ ಚಂದ್ರೋದಯ ಕಾಲಕ್ಕೆ ವ್ಯಾಪ್ತಿಯುಳ್ಳ ಚೌತಿ ಯನ್ನು ಪರಿಗ್ರಹಿಸಬೇಕು. ಚಂದ್ರೋದಯ ಕಾಲವ್ಯಾಪ್ತಿಯು ಪರದಿನ ದಲ್ಲಿಯೇ ಇದ್ದರೆ ಅದನ್ನೇ ಪರಿಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಚಂದ್ರೋದಯ ವ್ಯಾಪ್ತಿ ಇಲ್ಲದಿದ್ದರೆ, ಆಗ ಪರದಿವಸದ ಚೌತಿಯನ್ನೇ ಪರಿ ಗ್ರಹಿಸಬೇಕು.

ಪಂಚಮೀ ನಿರ್ಣಯ :— ಕರ್ಮಗಳ ವಿಷಯದಲ್ಲೆಲ್ಲ ಪಂಚಮೀ ಯನು ಉಭಯ ಪಕ್ಷಗಳಲ್ಲಿಯೂ ಚತುರ್ಥಿಯ ವೇಧೆಯುಳ್ಳದನ್ನೇ ಪರಿ ಗ್ರಹಿಸಬೇಕು ; ಆದರೆ ಸ್ಕಂದೋಪವಾಸದಲ್ಲಿಯು ನಾಗವ್ರತದಲ್ಲಿಯೂ ಷಷ್ಠೀವಿದ್ಧವಾದ ಪಂಚಮಿಯನ್ನು ಪರಿಗ್ರಹಿಸಬೇಕು. ಪರದಿವಸದಲ್ಲಿ ಪಂಚಮಿಯು ಮೂರು ಮುಹೂರ್ತಕ್ಕಿಂತಲೂ ಕಡಿಮೆಯಾಗಿದ್ದು. ಹಿಂದಿನ ದಿನವಲ್ಲ ಮೂರು ಮುಹೂರ್ತಕ್ಕಿಂತಲೂ ಕಡಿಮೆಯಾದ ಚೌತಿವೇಧೆಯು ಇದ್ದರೆ, ಹಿಂದಿನ ದಿನದಲ್ಲಿಯೇ ಆಚರಿಸಬೇಕು. ಚೌತೀವೇಧೆಯು ಮೂರು

ಮುಹೂರ್ತಕ್ಕಿಂತಲೂ ಹೆಚ್ಚಾಗಿದ್ದರೆ, ಮಾರನೆಯ ಪಂಚಮಿಯು ಎರಡು ಮುಹೂರ್ತವಿದ್ದರೂ ಆದಿನವನ್ನೇ ಅಂಗೀಕರಿಸಬೇಕು.

ಷಷ್ಠೀ ನಿರ್ಣಯವು :— ಸ್ಕಂಧ ವ್ರತದಲ್ಲಿ ಪೂರ್ವವಿದ್ಧವಾದ ಷಷ್ಠಿಯನ್ನೇ ಪರಿಗ್ರಹಿಸಬೇಕು. ಇತರ ವ್ರತಗಳಲ್ಲಿ ಪರವಿದ್ಧವಾದುದನ್ನೇ ಗ್ರಹಿಸಬೇಕು. ಹಿಂದಿನ ದಿನದಲ್ಲಿ ಪಂಚಮಿಯು ಆರು ಮುಹೂರ್ತಗಳಿಗಿಂತ ಕಡಿಮೆಯಾಗಿದ್ದಲ್ಲಿ ಹಿಂದಿನ ದಿನದಲ್ಲಿಯಾದರೂ ಆಗಬಹುದು. ಷಷ್ಠಿಯಾಗಲೀ, ಸಪ್ತಮಿಯಾಗಲಿ ರವಿವಾರದಲ್ಲಿ ಬಂದರೆ ಅದಕ್ಕೆ ಪದ್ಮಕಯೋಗವೆಂದು ಹೆಸರು.

ಸಪ್ತಮೀ ನಿರ್ಣಯವು :— ಸಪ್ತಮಿಯ ಕರ್ಮಗಳ ವಿಷಯದಲ್ಲಿ ಮಾತ್ರ ಷಷ್ಠೀಯುಕ್ತವಾದದ್ದೇ ಆಗಬೇಕು. ಯಾವತ್ತಾದರೂ ಪೂರ್ವ ದಿವಸದಲ್ಲಿ ಸೂರ್ಯಾಸ್ತ ಕಾಲಪರ್ಯಂತವಾಗಿಯೂ ಷಷ್ಠಿಯು ಇದ್ದು, ಹಗಲಿನಲ್ಲಿ ಷಷ್ಠೀಯುಕ್ತವಾದ ಸಪ್ತಮಿಯು ಇರದೇ ಹೋಗಿ, ಮಾರನೆಯ ದಿವಸ ಅಷ್ಟಮೀ ವೇಧೆಯೂ ಇದ್ದರೆ, ನಿರ್ವಾಹವಿಲ್ಲದೆ ಆದಿನದಲ್ಲಿ ಅಷ್ಟಮಿಯುಕ್ತವಾದ ಸಪ್ತಮಿಯನ್ನೇ ಪರಿಗ್ರಹಿಸಬೇಕು. ಇದರಂತೆಯೇ ಮಿಕ್ಕ ತಿಥಿಗಳ ನಿರ್ಣಯವನ್ನೂ ಊಹಿಸಿ ತಿಳಿಯತಕ್ಕದ್ದು.

ಅಷ್ಟಮೀ ನಿರ್ಣಯು :— ವ್ರತಗಳ ವಿಷಯದಲ್ಲಿ ಮಾತ್ರ ಶುಕ್ಲಪಕ್ಷದಲ್ಲಿ ನವಮೀಯುಕ್ತವಾದ ಅಷ್ಟಮಿಯನ್ನು ಪರಿಗ್ರಹಿಸಬೇಕು. ಕೃಷ್ಣಪಕ್ಷದಲ್ಲಿ ಸಪ್ತಮೀಯುಕ್ತವಾದ ಅಷ್ಟಮಿಯನ್ನು ಪರಿಗ್ರಹಿಸಬೇಕು. ಮಿಳಿತ ಮಾಡಿ ಮಾಡಬೇಕಾದ ಶಿವೋತ್ಸವ, ಶಕ್ತ್ಯುತ್ಸವಗಳಲ್ಲಿ ಕೃಷ್ಣಪಕ್ಷದಲ್ಲಿಯಾದರೂ ನವಮೀಯುಕ್ತವಾದದ್ದನ್ನೇ ಪರಿಗ್ರಹಿಸಬೇಕು. ಶುಕ್ಲಪಕ್ಷದಲ್ಲಿ ಪ್ರಾತಃಕಾಲ ಮೊದಲುಗೊಂಡು ಅಪರಾಹ್ನ ಪೂರ್ತಿಯಾಗುವುದರೊಳಗಾಗಿ ಒಂದು ಮುಹೂರ್ತ ಮಾತ್ರವಾದರೂ ಅಷ್ಟಮೀ ಸಂಬಂಧವುಂಟಾದಲ್ಲಿ, ಅದು ಗ್ರಾಹ್ಯವಾದ ಬುಧಾಷ್ಟಮಿಯಾಗುತ್ತದೆ, ಸಾಯಾಹ್ನದಲ್ಲಿ ಚೈತ್ರಮಾಸದಲ್ಲಿಯೂ, ಶ್ರಾವಣವೇ ಮೊದಲಾದ ನಾಲ್ಕು ಮಾಸಗಳಲ್ಲಿಯೂ, ಕೃಷ್ಣಪಕ್ಷದಲ್ಲಿಯೂ ಸಹ ಮೇಲೆ ಹೇಳಿದಂತೆ ಬುಧವಾರಕ್ಕೆ

ಅಷ್ಟಮೀ ಸಂಬಂಧವು ಉಂಟಾದರೂ ಅದನ್ನು ಬುಧಾಷ್ಟಮಿಯೆಂದು ಬಗೆ ಗಣಿಸಕೂಡದು. ಕೆಲವರು ಪ್ರತಿಯೊಂದು ಕೃಷ್ಣಾಷ್ಟಮಿಯಲ್ಲಿಯೂ, ಕಾಲಭೈರವನನ್ನು ಉದ್ದೇಶಿಸಿ ಉಪವಾಸ ಮಾಡುತ್ತಾರೆ. ಅದರಲ್ಲಿ ಮಾರ್ಗಶಿರ ಕೃಷ್ಣಾಷ್ಟಮಿಯಲ್ಲಿ ಭೈರವ ಜಯಂತಿಯಾದ ಕಾರಣ ಅದಕ್ಕೆ ಅನುಸಾರವಾಗಿ ನಿರ್ಣಯ ಮಾಡುವದು ಯುಕ್ತವಾದುದರಿಂದ, ಈ ಸಂದರ್ಭದಲ್ಲಿ ಮಧ್ಯಾಹ್ನ ವ್ಯಾಪ್ತಿಯುಳ್ಳ ಅಷ್ಟಮಿಯನ್ನು ಪರಿಗ್ರಹಿಸಬೇಕು. ಎರಡು ದಿನಗಳಲ್ಲಿಯೂ ಮಧ್ಯಾಹ್ನ ವ್ಯಾಪ್ತಿಯುಳ್ಳದ್ದನ್ನು ಪರಿಗ್ರಹಿಸಬೇಕೆಂದು ಕೌಸ್ತುಭಕಾರರು ಹೇಳಿರುವದರಿಂದ ಎರಡು ದಿನಗಳಲ್ಲಿಯೂ, ಪ್ರದೋಷಕಾಲ ವ್ಯಾಪ್ತಿ ಇದ್ದಲ್ಲಿ ವಾಕ್ಯಗಳಿಗೂ ವಿರೋಧ ಇಲ್ಲದೆ ಇರುವದಕ್ಕಾಗಿ ಪರದಿನವನ್ನೇ ಗ್ರಹಿಸಬೇಕು. ಹಿಂದಿನ ದಿನದಲ್ಲಿ ಪ್ರದೋಷಕ್ಕೆ ಮಾತ್ರ, ಪರದಿನದಲ್ಲಿ ಮಧ್ಯಾಹ್ನಕ್ಕೆ ಮಾತ್ರವೇ ವ್ಯಾಪ್ತಿ ಇದ್ದಲ್ಲಿ, ಆಗ ಬಹುಜನ ಶಿಷ್ಟರ ಆಚರಣೆಯ ಪ್ರಕಾರ ಪ್ರದೋಷವ್ಯಾಪ್ತಿಯುಳ್ಳ ಹಿಂದಿನ ದಿನವನ್ನೇ ಪರಿಗ್ರಹಿಸಬೇಕು. ಅಲ್ಲದೆ, "ಅರ್ಕಪರ್ವದ್ವಯೇ ರಾತ್ರೌ ಚತುರ್ದಶ್ಯಷ್ಟಮೀದಿವಾ" ॥ ರವಿವಾರ, ಪೂರ್ಣಿಮಾ–ಅಮಾವಾಸ್ಯೆಗಳಲ್ಲಿ ರಾತ್ರಿಯಲ್ಲಿಯೂ, ಚತುರ್ದಶಿ ಅಷ್ಟಮಿಗಳಲ್ಲಿ ಹಗಲಿನಲ್ಲಿಯೂ ಭೋಜನವು ನಿಷಿದ್ಧವಾಗಿದೆ ಎಂಬ ವಚನದಿಂದ ಊಟ ಮಾಡುವದನ್ನು ಬಿಡಬೇಕೆಂಬುದೊಂದೇ ಹೊರತು, ಅಲ್ಲಿ ಯಾವ ವ್ರತವೂ ಇಲ್ಲ. "ನಿಷೇಧಸ್ತು ನಿವೃತ್ತ್ಯಾತ್ಮಾ ಕಾಲಮಾತ್ರಮಪೇಕ್ಷತೇ" ನಿವೃತ್ತಿ ಎಂಬ ಅರ್ಥವುಳ್ಳ ನಿಷೇಧ ಶಬ್ದವು ಕಾಲವನ್ನು ಮಾತ್ರ ಅಪೇಕ್ಷಿಸುವದು, ಎಂಬ ವಚನದಿಂದ ಭೋಜನ ಕಾಲದಲ್ಲಿ ವ್ಯಾಪ್ತಿಯುಳ್ಳ ಅಷ್ಟಮಿಯನ್ನು ಬಿಟ್ಟು ನವಮಿಯಲ್ಲಾಗಲೀ, ಸಪ್ತಮಿಯಲ್ಲಾಗಲೀ ಊಟ ಮಾಡಬಹುದೆಂದು ತೋರುತ್ತದೆ. ಇದು ಯುಕ್ತವೋ ಅಯುಕ್ತವೋ ಎಂಬುದನ್ನು ವಿದ್ವಾಂಸರು ವಿಚಾರಿಸಬೇಕು.

ನವಮೀನಿರ್ಣಯ :— ಎಲ್ಲ ಸಂದರ್ಭಗಳಲ್ಲಿಯೂ, ಅಷ್ಟಮೀಯುಕ್ತವಾದ ನವಮಿಯನ್ನೇ ಪರಿಗ್ರಹಿಸಬೇಕು.

ದಶಮೀ ನಿರ್ಣಯ :— ಉಪವಾಸಾದಿಗಳಲ್ಲಿ ನವಮೀಯುಕ್ತವಾದ ದಶಮಿಯನ್ನೇ ಪರಿಗ್ರಹಿಸಬೇಕು. ನವಮಿಯುಕ್ತವಾದದ್ದು ದೊರೆಯದೇ ಇದ್ದಲ್ಲಿ ಏಕಾದಶೀ ವಿದ್ಧವಾದ್ದನ್ನೇ ಪರಿಗ್ರಹಿಸಬಹುದು.

ತ್ರಯೋದಶೀ ನಿರ್ಣಯ :— ತ್ರಯೋದಶಿಯು ಶುಕ್ಲಪಕ್ಷದಲ್ಲಿ ಪೂರ್ವವಿದ್ಧವಾದದ್ದೂ, ಕೃಷ್ಣಪಕ್ಷದಲ್ಲಿ ಪರವಿದ್ಧವಾದದ್ದೂ ಗ್ರಾಹ್ಯವು. ಶನಿವಾರವೇ ಮೊದಲಾದ ವಾರಗಳಿಂದ ಯುಕ್ತವಾದ ದಾನವ್ರತಾದಿಗಳು ಶುಕ್ಲಪಕ್ಷದ ತ್ರಯೋದಶಿಯಲ್ಲಾರಂಭಿಸಿ, ಒಂದು ವರ್ಷ ಪರ್ಯಂತವಾಗಿ ಎರಡು ಪಕ್ಷಗಳಲ್ಲಿಯೂ ಅದೇ ಶನಿವಾರಾದಿಯುಕ್ತವಾದ ತ್ರಯೋದಶೀಯಲ್ಲಾಗಲಿ ಅಥವಾ ಶುಕ್ಲ ಪಕ್ಷದ ತ್ರಯೋದಶಿಗಳಲ್ಲಾಗಲಿ ಪ್ರದೋಷ ಕಾಲದಲ್ಲಿ ಮಾಡುವ ಈಶ್ವರ ಪೂಜಾಸಹಿತ ಭೋಜನ ರಹಿತವಾದ ಪ್ರದೋಷ ವ್ರತದಲ್ಲಿ. ಸೂರ್ಯಾಸ್ತಮಾನಾನಂತರದಲ್ಲಿ ಪ್ರದೋಷವೆಂದು ಹೇಳಲ್ಪಡುವ ಮೂರು ಮುಹೂರ್ತ (ಆರು ಗಳಿಗೆ) ವ್ಯಾಪಿನಿಯಾದ ತ್ರಯೋದಶಿಯನ್ನು ಪರಿಗ್ರಹಿಸಬೇಕು. ಎರಡು ದಿವಸಗಳಲ್ಲಿಯೂ ಪ್ರದೋಷ ವ್ಯಾಪ್ತಿ ಇದ್ದರೂ, ಎರಡು ದಿವಸಗಳಲ್ಲಿ ಸಮವಾಗಿ ಪ್ರದೋಷದ ಒಂದು ಭಾಗದಲ್ಲಿ ವ್ಯಾಪ್ತಿಯಿದ್ದರೂ ಸಹ ಎರಡನೆಯ ದಿವಸವೇ ಶ್ರೇಷ್ಠವು. ಹಿಂದಿನ ದಿನ ಪ್ರದೋಷದಲ್ಲಿ ವ್ಯಾಪಿಸಿದ್ದರೆ ಆಗ ಹಿಂದಿನ ದಿವಸ ಪೂರ್ಣ ವ್ಯಾಪಿಸಿದ್ದರೆ ಹಿಂದಿನ ದಿವಸವನ್ನೇ ಪರಿಗ್ರಹಿಸಬಹುದು; ಆದರೆ ಶನಿ ಪ್ರದೋಷ ದಿನ ಭೋಜನ ಮಾಡುವವರಿಗೆ ಸಾಕಾಗುವಷ್ಟು ಕಾಲ ಪ್ರದೋಷ ಸಮಯ ಇಲ್ಲದಿದ್ದರೆ ಪಂಚಮ ಹಿಂದಿನ ದಿನ ಮಾಡಬಹುದು. ಅದಿಲ್ಲದಿದ್ದರೆ ಸಾಯಂಕಾಲದಲ್ಲಿ ಸೂರ್ಯಾಸ್ತದ ಪರದಿನವನ್ನೇ ಪರಿಗ್ರಹಿಸಬೇಕು. ಎರಡು ದಿವಸಗಳಲ್ಲಿಯೂ ತ್ರಯೋದಶೀವ್ಯಾಪ್ತಿಯು ಇಲ್ಲದಿದ್ದರೆ ಆದರೆ ಹಿಂದಿನ ದಿವಸವನ್ನೇ ಪರಿಗ್ರಹಿಸಬೇಕು.

ಚತುರ್ದಶೀ ನಿರ್ಣಯ :— ಚತುರ್ದಶಿಯು ಶುಕ್ಲಪಕ್ಷದಲ್ಲಿ ಪರವಿದ್ಧವಾದದ್ದೂ. ಕೃಷ್ಣಪಕ್ಷದಲ್ಲಿ ಪೂರ್ವವಿದ್ಧ ಯಾದದ್ದೂ ಗ್ರಾಹ್ಯವು. ಕೃಷ್ಣಪಕ್ಷದ ಚತುರ್ದಶಿಯಲ್ಲಿ ಶಿವರಾತ್ರಿ ದಿನದಲ್ಲಿ ಮಾಡುವ ಶಿವಪೂಜೆ ವ್ರತಾದಿಗಳಲ್ಲಿ ರಾತ್ರಿ

ಶಿವರಾತ್ರಿಯುಂತೆ ಚತುರ್ದಶಿಯು ಅರ್ಧರಾತ್ರಿಗೆ ವ್ಯಾಪ್ತಿಯುಳ್ಳದ್ದೇ ಆಗಿರಬೇಕು. ಕೆಲವರು ಪ್ರದೋಷ ಮಾತ್ರ ವ್ಯಾಪನೆಯುಳ್ಳದ್ದನ್ನು ಪರಿಗ್ರಹಿಸುವರು.

ಚತುರ್ದಶಿಯಲ್ಲಿ ಹಗಲು ಊಟ ಮಾಡಬಾರದೆಂಬುವುದು ನಿತ್ಯ ವಾದುದರಿಂದ ಅವನ್ನು ಕಾಪಾಡಿಕೊಳ್ಳುವುದರಲ್ಲಿ, ಭೋಜನ ಕಾಲದಲ್ಲಿ ವ್ಯಾಪ್ತಿಯುಳ್ಳ ಚತುರ್ದಶಿಯನ್ನು ಬಿಟ್ಟು ತ್ರಯೋದಶಿಯಲ್ಲಾಗಲೀ ಪೂರ್ಣಿಮಾ— ಅಮಾವಾಸ್ಯೆಗಳಲ್ಲಾಗಲೀ ಭೋಜನ ಮಾಡಬಹುದು. ಶಿವರಾತ್ರಿವ್ರತ ಮಾಡತಕ್ಕವರು ಚತುರ್ದಶಿಯಲ್ಲಿಯೇ ಪಾರಣೆ ಮಾಡ ಬಹುದು. ವಿಧಿಪ್ರಾಪ್ತವಾದ ವಿಚಾರದಲ್ಲಿ ನಿಷೇಧವು ಪ್ರವೇಶಿಸುವದಿಲ್ಲ ವೆಂಬ ನಿಯಮವಿರೋಣದರಿಂದ 'ಚತುರ್ದಶ್ಯಷ್ಟಮೀ ದಿವಾ' ಎಂಬ ನಿಷೇಧವು ಈ ಸಂದರ್ಭದಲ್ಲಿ ಇಲ್ಲ.

ಪೂರ್ಣಿಮಾ ಅಮಾವಾಸ್ಯೆಗಳ ನಿರ್ಣಯ :— ಸಾವಿತ್ರೀ ವ್ರತದ ಹೊರತು ಮಿಕ್ಕವ್ರತಾದಿಗಳಲ್ಲಿ ಪೂರ್ಣಿಮಾ-ಅಮಾವಾಸ್ಯೆಗಳನ್ನು ಎರಡ ನೆಯವುಗಳದ್ದೇ ಪರಿಗ್ರಹಿಸಬೇಕು. ಅಲ್ಲದೆ, ಶ್ರಾವಣ ಮತ್ತು ಕಾರ್ತಿಕ ಮಾಸಗಳ ಪೂರ್ಣಿಮಾಗಳು ಕುಲ-ಧರ್ಮಾದಿ ವಿಷಯದಲ್ಲಿ ಚತುರ್ದಶೀ ವಿದ್ಧವಾದವು ಗ್ರಾಹ್ಯಗಳಾಗಿವೆ ಎಂದು ಹೇಳಿರುವ ಈ ಒಂದು ವಚನದಿಂದ ಕೆಲವರು ಕುಲಧರ್ಮದ ವಿಷಯದಲ್ಲಿ ಎಲ್ಲ ಪೂರ್ಣಿಮೆಗಳನ್ನು ಪೂರ್ವ ವಿದ್ಧವಾದವುಗಳನ್ನೇ ಪರಿಗ್ರಹಿಸುತ್ತಿರುವರು. 'ಚತುರ್ದಶಿ'ಯು ಹದಿ ನೆಂಟು ಗಳಿಗೆಗಳಿಂದ ಪಂಚದಶಿಯನ್ನು ದೂಷಿಸುವದೆಂಬ ವಚನದಂತೆ, ಚತುರ್ದಶಿ ತಿಥಿಯು ಹದಿನೆಂಟು ಗಳಿಗೆಗಿಂತ ಕಡಿಮೆಯಾಗಿದ್ದ ಪಕ್ಷದಲ್ಲಿ ಒಂದು ವೇಳೆ ಅಂಥ ಚತುರ್ದಶೀ ವೇಧೆಯುಳ್ಳ ಹುಣ್ಣಿಮೆಯನ್ನು ಕುಲ ಧರ್ಮ ವಿಷಯದಲ್ಲಿ ಪರಿಗ್ರಹಿಸಬಹುದು. ಚತುರ್ದಶಿಯು ಹದಿನೆಂಟು ಗಳಿಗೆಗಿಂತಲೂ ಹೆಚ್ಚಾಗಿದ್ದಲ್ಲಿ ಅಂಥ ಚತುರ್ದಶೀ ವೇಧೆಯುಳ್ಳ ಹುಣ್ಣಿಮೆ ಯನ್ನು ಸ್ವೀಕರಿಸಬಾರದು.

ಮಂಗಳವಾರದಿಂದ ಅಥವಾ ಸೋಮವಾರದಿಂದ ಕೂಡಿದ ಅಮಾ ವಾಸ್ಯೆಯಲ್ಲಿ ಸ್ನಾನ-ದಾನಾದಿಗಳನ್ನು ಮಾಡುವುದು ಬಹು ಪುಣ್ಯಕರ

ವಾದದ್ದು. ಇದರಂತೆ ಭಾನುವಾರದಿಂದ ಕೂಡಿದ ಸಪ್ತಮಿಯೂ, ಮಂಗಳವಾರದಿಂದ ಕೂಡಿದ ಚೌತಿಯೂ ಪುಣ್ಯಪ್ರದಗಳಾಗಿವೆ ಅಲ್ಲದೆ ಸೋಮವಾರದಿಂದ ಕೂಡಿದ ಅಮಾವಾಸ್ಯೆಯಲ್ಲಿ ಅಶ್ವತ್ಥ ಪೂಜೆಯೇ ಮೊದಲಾದ ಸ್ವರೂಪವುಳ್ಳ ಸೋಮವತೀವ್ರತವನ್ನು ಮಾಡುತ್ತಾರೆಯಷ್ಟೇ ? ಅದರಲ್ಲಿ ಸೋಮವಾರಕ್ಕೆ ಅಪರಾಹ್ನದೊಳಗಾಗಿ ಒಂದು ಮುಹೂರ್ತ ಮಾತ್ರ ಅಮವಾಸ್ಯೆಯು ಸೇರಿದರೂ, ಆ ದಿನದಲ್ಲಿ ವ್ರತವನ್ನು ಮಾಡಬೇಕು. ಹಗಲಿನ ಕೊನೆಯಲ್ಲಿ ಮೂರು ಮುಹೂರ್ತಾತ್ಮಕವಾದ ಸಾಯಾಹ್ನದಲ್ಲಿಯಾಗಲೀ, ರಾತ್ರಿಯಲ್ಲಾಗಲೀ ಅಮಾವಾಸ್ಯಾಯೋಗ ಉಂಟಾದರೂ ಅದರಲ್ಲಿ ವ್ರತವನ್ನು ಮಾಡಕೂಡದೆಂಬುದು ಶಿಷ್ಟಾಚಾರವು.

ತಿಥಿ ವಿವೇಚನೆ

ಭಾಗ ೨

ಪ್ರತಿಮಾಸದಲ್ಲಿ ಬರುವ ಮಹತ್ವದ ಹಬ್ಬಗಳು.

ಚೈತ್ರಮಾಸ :— ಯುಗಾದಿ, ಗೌರೀತೃತೀಯಾ, ಶ್ರೀರಾಮನವಮೀ, ಹನುಮಜ್ಜಯಂತಿ (ದವನದ ಹುಣ್ಣಿವೆ) ಅಕ್ಷತ್ರದಿಗೆಯ ಅಮಾವಾಸ್ಯೆ.

ವೈಶಾಖ ಮಾಸ :— ಅಕ್ಷಯತೃತೀಯಾ, ನರಸಿಂಹಜಯಂತಿ, ಅಗೀಹುಣ್ಣಿವೆ, ಬಾದಾಮೀ ಅಮಾವಾಸ್ಯೆ, (ಅಕ್ಷಯ ತೃತಿಯಾ ಈ ತಿಥಿಯು ಚತುರ್ಥೀಯುಕ್ತ ಇರಬೇಕು) ರೋಹಿಣೀ ಹಾಗೂ ಬುಧವಾರ ಯುಕ್ತವಿದ್ದರೆ ಉತ್ತಮ, ಆದರೆ ದ್ವಿತೀಯಾಯುಕ್ತವಿರಕೂಡದು.

ಜ್ಯೇಷ್ಠ :— ವಟಸಾವಿತ್ರಿಯ ಪೂಜೆ, ಕಾರಹುಣ್ಣಿವೆ, ಮಣ್ಣೆತ್ತಿನ ಅಮಾವಾಸ್ಯೆ.

ಆಷಾಢ :— ಚಾತುರ್ಮಾಸ್ಯ ಆರಂಭ, ಆಷಾಢ ಏಕಾದಶೀ, ಕಡ್ಲಿಗೌರಿಹುಣ್ಣಿವೆ, ವ್ಯಾಸಪೂಜಾ, ನಾಗರಅಮಾವಾಸ್ಯೆ.

ಶ್ರಾವಣ :— ನಾಗಚತುರ್ಥೀ, ನಾಗಪಂಚಮಿ, ಶಿರಿಯಾಳಷಷ್ಠಿ, ನೂಲಹುಣ್ಣಿವೆ (ರಕ್ಷಾಬಂಧನ), ಗೋಕುಲಾಷ್ಟಮಿ.

ಭಾದ್ರಪದ :— ಹರಿತಾಲಿಕಾ, ಸ್ವರ್ಣಗೌರಿವ್ರತ ಗಣೇಶಚತುರ್ಥಿ, ಋಷಿ ಪಂಚಮೀ, ಗೌರಿಆವಾಹನ, ಗೌರೀಪೂಜನ, ಗೌರಿವಿಸರ್ಜನ, ಅನಂತಚತುರ್ದಶೀ, ಅನಂತನ ಹುಣ್ಣಿವೆ. ಪಿತೃಪಕ್ಷ, ಅವಿಧವಾ ನವಮೀ.

ಆಶ್ವೀನ :— ನವರಾತ್ರಿಯ ಆರಂಭ, ಘಟಸ್ಥಾಪನ, ಲಲಿತಪಂಚಮೀ, ಸರಸ್ವತೀಪೂಜೆ, ಮಹಾಲಕ್ಷ್ಮೀ ಪೂಜೆ. ಖಂಡೇನವಮೀ, ವಿಜಯಾದಶಮಿ, (ವಿಜಯಾ ದಶಮಿ—ಇದನ್ನು ಅಪರಾಹ್ನಕಾಲ ವ್ಯಾಪಿನೀ ಇದ್ದದ್ದು) ಸೀಗೆ ಹುಣ್ಣಿವೆ :ಗುರುದ್ವಾದಶೀ, ನರಕಚತುರ್ದಶಿ, ದೀಪಾವಳಿ ಅಮಾವಾಸ್ಯೆ ಲಕ್ಷ್ಮೀಪೂಜಾ).

ಕಾರ್ತಿಕ :— ಬಲಿಪ್ರತಿಪದಾ (ಪಾಡ್ಯ), ಯಮದ್ವಿತೀಯಾ, ಅಕ್ಕನ ತದಿಗೀ, ಕಡೇಪಂಚಮೀ, ತುಲಸೀವಿವಾಹ, ವೈಕುಂಠಚತುರ್ದಶಿ, ಗೌರೀ ಹುಣ್ಣಿವೆ, ಛಟ್ಟೀ ಅಮಾವಾಸ್ಯೆ.

ಮಾರ್ಗಶೀರ್ಷ :— ನಾಗಪೂಜಾ, ಚಂಪಾಷಷ್ಠಿ, ದತ್ತಜಯಂತಿ, ಹೊಸ್ತಿಲ ಹುಣ್ಣಿವೆ. ಎಳ್ಳ ಅಮಾವಾಸ್ಯೆ.

ಪೌಷ್ಯ :— ಮಕರ ಸಂಕ್ರಾಂತಿ, ಬನದ ಹುಣ್ಣಿವೆ, ಅಪರಾತ್ರಿ ಅಮಾವಾಸ್ಯೆ.

ಮಾಘ :— ಗಣೇಶ ಜಯಂತಿ, ವಸಂತಪಂಚಮೀ ರಥಸಪ್ತಮಿ (ಅರುಣೋದಯ ವ್ಯಾಪಿನೀ ಇದ್ದ ತಿಥಿ) ಭಾರತಹುಣ್ಣಿವೆ, ಮಹಾಶಿವರಾತ್ರಿ.

ಫಾಲ್ಗುಣ :— ಹೋಳೀಹುಣ್ಣಿವೆ, ರಂಗಪಂಚಮೀ, ಯುಗಾದೀ ಅಮಾವಾಸ್ಯೆ

ಜಯಂತಿಗಳು

ಜಯಂತಿ ಅಂದರೆ ಹುಟ್ಟುಹಬ್ಬ. ಪರಮಾತ್ಮನು ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ಕಾಪಾಡುವುದಕ್ಕೋಸ್ಕರ ಯಾವ ತಿಥಿಯ ವೇಳೆ ಅವತರಿಸಿದನೋ ಅದಕ್ಕೆ ಜಯಂತಿ ಅನ್ನುತ್ತಾರೆ, ಹೀಗೆ ೧೨ ಮುಖ್ಯವಾದ ಜಯಂತಿಗಳು ಇರುತ್ತವೆ.

೧ ಮತ್ಸ್ಯ ಜಯಂತಿ. ಚೈತ್ರ ಶುದ್ಧ ೩

೨ ಶ್ರೀರಾಮ ಜಯಂತಿ, ಚೈತ್ರಶುದ್ಧ ೯ (ಮಧ್ಯಾಹ್ನ ಕಾಲ ವ್ಯಾಪಿನೀ.)

೩ ಹನುಮಾನ ಜಯಂತಿ, ಚೈತ್ರ ಶುದ್ಧ ೧೫
(ಸೂರ್ಯೋದಯ ಕಾಲದ ತಿಥಿ)

೪ ಪರಶುರಾಮ ಜಯಂತಿ, ವೈಶಾಖ ಶುದ್ಧ ೩,
(ಪ್ರದೋಷ ಕಾಲದ ವ್ಯಾಪಿನೀ)

೫ ನರಸಿಂಹ ಜಯಂತಿ, ವೈಶಾಖ ಶುದ್ಧ ೧೪,
(ಸಾಯಂಕಾಲ ವ್ಯಾಪಿನೀ)

೬ ಕೂರ್ಮ ಜಯಂತಿ, ವೈಶಾಖ ಶುದ್ಧ ೧೫,
(ಸೂರ್ಯಾಸ್ತ ಕಾಲ ವ್ಯಾಪಿನೀ)

೭ ಕಲ್ಕಿ ಜಯಂತಿ, ಶ್ರಾವಣ ಶುದ್ಧ ೬,
(ಸೂರ್ಯಾಸ್ತ ಕಾಲ ವ್ಯಾಪಿನೀ)

೮ ಕೃಷ್ಣ ಜಯಂತಿ, ಶ್ರಾವಣ ಕೃಷ್ಣ ೮,
(ಮಧ್ಯರಾತ್ರೀ ಕಾಲ ತಿಥಿ)

೯ ವರಾಹ ಜಯಂತಿ, ಭಾದ್ರಪದ ಶುದ್ಧ ೩,
(ಅಪರಾಹ್ನ ಕಾಲ ವ್ಯಾಪಿನೀ)

೧೦ ವಾಮನ ಜಯಂತಿ. ಭಾದ್ರಪದ ಶುದ್ಧ ೧೨,
(ಮಧ್ಯಾಹ್ನ ಕಾಲ ವ್ಯಾಪಿನೀ)

೧೧ ಬುದ್ಧ ಜಯಂತಿ, ಅಶ್ವೀನ ಶುದ್ಧ ೧೦ (ಸೂರ್ಯಾಸ್ತ)

೧೨ ಶ್ರೀ ದತ್ತಾತ್ರಯ ಜಯಂತಿ, ಮಾರ್ಗಶೀರ್ಷ ಶುದ್ಧ ೧೫,
(ಪ್ರದೋಷ)

ಇದಲ್ಲದೆ ಅನೇಕ ಸಾಧು-ಸತ್ಪುರುಷರ ಜಯಂತಿಗಳನ್ನು ಆಚರಿಸುವ ಪದ್ಧತಿ ಉಂಟು. ಅವನ್ನು ಪಂಚಾಂಗದಲ್ಲಿ ಕೊಟ್ಟಿರುತ್ತಾರೆ. ನೋಡಲು ಸುಲಭವಿರುವ ಕಾರಣ ಎಲ್ಲವನ್ನೂ ಇಲ್ಲಿ ಕೊಡಲಾಗಿಲ್ಲ. ಉದಾ : ಭವಾನಿ ಜಯಂತಿ, ಶ್ರೀ ರಾಮಾನುಜಾಚಾರ್ಯ ಜಯಂತಿ, ಶ್ರೀ ಶಂಕರಾಚಾರ್ಯರ ಜಯಂತಿ, ಶ್ರೀ ಬಸವೇಶ್ವರ ಜಯಂತಿ, ಶ್ರೀ ಶೇಷಾಚಲ ಮಹಾರಾಜರ ಜಯಂತಿ ಇತ್ಯಾದಿಗಳು.



ಪಂಚಾಂಗದಲ್ಲಿರುವ ಇತರ ಸಂಗತಿಗಳು

೧ ಗ್ರಹಣಗಳು

ಕೆಲವು ಪಂಚಾಂಗಗಳಲ್ಲಿ ಗ್ರಹಣದದ ವಿಚಾರವನ್ನು ಕೊನೆಗೂ, ಕೆಲವು ಪಂಚಾಂಗಗಳಲ್ಲಿ ಮೊದಲೂ ಕೊಟ್ಟಿರುತ್ತಾರೆ. (ಬಹುತರವಾಗಿ ಮೊದಲು ಕೊಡುವುದೇ ಬಹಳ)

ಸೂರ್ಯಗ್ರಹಣ, ಚಂದ್ರಗ್ರಹಣ ಹೀಗೆ ಗ್ರಹಣಗಳಲ್ಲಿ ಎರಡು ಪ್ರಕಾರಗಳಿವೆ. ಸೂರ್ಯಗ್ರಹಣವು ಅಮಾವಾಸ್ಯೆಗೂ, ಚಂದ್ರಗ್ರಹಣವು ಹುಣ್ಣಿವೆಗೂ ಬರುತ್ತವೆ. ಗ್ರಹಣಗಳು ಹೇಗಾಗುತ್ತವೆ ಎಂಬುದನ್ನು ಇಲ್ಲಿ ಕೊಡದೇ, ಪಂಚಾಂಗದಲ್ಲಿ ಕೊಟ್ಟಿರುವ ಗ್ರಹಣದ ವಿಷಯವನ್ನು ಹೇಗೆ ಪರಿಶೀಲಿಸಬೇಕೆಂಬುದನ್ನು ಮಾತ್ರ ಇಲ್ಲಿ ವಿವರಿಸಲಾಗುವುದು.

ಈ ಗ್ರಹಣ ಕಾಲದಲ್ಲಿ ೭ ಭಾಗಗಳನ್ನು ಮಾಡಿದ್ದಾರೆ.

೧ ವೇಧ— ವೇಧ ಅಂದರೆ ಗ್ರಹಣ ಹತ್ತುವಕ್ಕಿಂತ ಸುಮಾರು ೯-೧೦ ತಾಸುಗಳಿಂದ ಆಚರಿಸುವ ನಿಯಮವು. ಸೂರ್ಯಗ್ರಹಣದಲ್ಲಿ ಗ್ರಹಣ ವಾಗುವದಕ್ಕೆ ಹಿಂದೆ ೪ ಯಾಮಗಳೂ, ಚಂದ್ರಗ್ರಹಣದಲ್ಲಿ ೩ ಯಾಮಗಳೂ ವೇಧ ಉಂಟು.

೨ ಸ್ಪರ್ಶಕಾಲ— ಸ್ಪರ್ಶವಾಗುವ ಕಾಲವು.

೩ ಸಮ್ಮಿಲನ ಕಾಲ— ಪೂರ್ಣ ಸ್ಪರ್ಶವಾಗುವ ಕಾಲ.

೪ ಮಧ್ಯಕಾಲ— ಮಧ್ಯದಕಾಲವು.

೫ ಉನ್ಮಿಲನ ಕಾಲ— ಸ್ಪರ್ಶ ಕಡಿಮೆ ಆಗಹತ್ತುವ ಕಾಲ

೬ ಮೋಕ್ಷಕಾಲ— ಪೂರ್ಣ ಬಿಟ್ಟಿಂಥ ವೇಳೆ

೭ ಪರ್ವಕಾಲ— ಸ್ಪರ್ಶಕಾಲದಿಂದ ಮೋಕ್ಷಕಾಲದ ವರೆಗಿನ ಅವಧಿ. ಗ್ರಹಣಗಳಲ್ಲಿ ಖಂಡ ಮತ್ತು ಖಗ್ರಾಸ ಎಂಬ ಎರಡು ಪ್ರಕಾರಗಳಿವೆ.

ಆಯಾ ಗ್ರಹಣಗಳಿಂದ ಉಂಟಾಗುವ ರಾಶಿಗಳ ಶುಭಾಶುಭ ಫಲಗಳನ್ನು ಪಂಚಾಂಗದಲ್ಲಿ ಕೊಟ್ಟಿರುತ್ತಾರೆ.

೧ ತಮ್ಮ ರಾಶಿಯಿಂದ ೩ನೆಯ, ೬ನೆಯ, ೧೦ನೆಯ, ೧೧ನೆಯ, ರಾಶಿಯಲ್ಲಿ ಗ್ರಹಣಗಳಾದರೆ ಶುಭವು.

೨ ತಮ್ಮ ರಾಶಿಯಿಂದ ೨ನೆಯ, ೫ನೆಯ, ೭ನೆಯ, ೯ನೆಯ ರಾಶಿಗಳಲ್ಲಿ ಗ್ರಹಣವಾದರೆ ಮಧ್ಯಮವು.

೩ ತಮ್ಮ ರಾಶಿಯಲ್ಲಿ ಅಥವಾ ಜನ್ಮಸ್ಥ ಹಾಗೂ ತಮ್ಮ ರಾಶಿಯಿಂದ ೪ನೆಯ, ೮ನೆಯ, ೧೨ನೆಯ ರಾಶಿಯಲ್ಲಿಯಾದರೆ ಬಹಳ ಅಶುಭದಾಯಕವು.

೨ ಮಕರ ಸಂಕ್ರಾಂತಿಯ ಫಲಗಳು

ಬಹುತರವಾಗಿ ಎಲ್ಲ ಪಂಚಾಂಗಗಳಲ್ಲಿ ಮಕರ ಸಂಕ್ರಾಂತಿಯ ಫಲಗಳನ್ನು ಕೊನೆಗೆ ಕೊಟ್ಟಿರುತ್ತಾರೆ.

ಪಂಚಾಂಗದಲ್ಲಿ ಸಂಕ್ರಾಂತಿಯ ಕೆಳಗೆ ಎರಡು ಚಿತ್ರಗಳನ್ನು ಕೊಟ್ಟಿರುತ್ತಾರೆ. ಇವು ಸಂಕ್ರಾಂತಿಯ ವಾಹನ ಹಾಗೂ ಉಪವಾಹನವು. ಸಂಕ್ರಾಂತಿಯು ಯಾವ ವಾಹನದ ಮೇಲೆ ಬಂದಿರುವುದೋ ಹಾಗೂ ಯಾವ ವಸ್ತುಗಳನ್ನು ಧರಿಸಿರುವುದೋ, ಆ ವಾಹನ ಹಾಗೂ ಆ ವಸ್ತುಗಳು ತೀರ ಅಗ್ಗವು ಹಾಗೂ ನಾಶವಾಗುವವು. ಇವೆಲ್ಲವನ್ನು ಪಂಚಾಂಗದಲ್ಲಿ ಬರೆದಿರುತ್ತಾರೆ.

ಸಂಕ್ರಾಂತಿಯು ಯಾವ ದಿಕ್ಕಿನಿಂದ ಬರುತ್ತದೆ ಹಾಗೂ ಯಾವ ದಿಕ್ಕಿಗೆ ಹೋಗುತ್ತದೆ ಎಂಬುದು ಪ್ರಕಟಿಸುತ್ತದೆ. ಉದಾ : [illegible] ಹಾಗೂ ಶುಭ್ರವಾದ ಸಂಕ್ರಾಂತಿ ಬಂದರೆ ದುರ್ಭಿಕ್ಷ ಇದೆ. [illegible] [illegible] ಬಂದರೆ [illegible] [illegible] [illegible] [illegible] ಬಂದರೆ [illegible] [illegible] [illegible] ಬಂದರೆ [illegible] ದಿಕ್ಕಿಗೆ — [illegible] ದಿಕ್ಕುಗಳಾಗುತ್ತವೆ [illegible] [illegible] [illegible] ಸಂಕ್ರಾಂತಿಯು [illegible] [illegible] [illegible] ದಿಕ್ಕಿಗೆ [illegible] [illegible] ದಿಕ್ಕಿಗೆ [illegible] [illegible] [illegible] [illegible] [illegible] [illegible]

ಇರುತ್ತದೆ. ಉದಾ : ಉತ್ತರ ಕಡೆ ಗಮನವಿದ್ದರೆ ದಕ್ಷಿಣ ಕಡೆಗೆ ಆಗಮನವೂ ಹಾಗೂ ಈಶಾನ್ಯ ಕಡೆಗೆ ಅವಲೋಕನವೂ ಇರುತ್ತದೆ.

ಜನ್ಮಾರ್ಕ್ಷವಶಾತ್ ಸಂಕ್ರಾಂತಿ ಫಲಂ

ಮಕರ ಸಂಕ್ರಾಂತಿಯ ವಾಹನಾದಿಗಳ ಪ್ರಕಾರ ಹಾಗೂ ಅವುಗಳ ಫಲಾಫಲಗಳನ್ನು ಹೇಳಿದ ಬಳಿಕ ಜನ್ಮಾರ್ಕ್ಷವಶಾತ್ ಎಂದು ೬ ಖಾನೆಗಳ ಒಂದು ಕೋಷ್ಟಕವಿರುತ್ತದೆ. ೧ ಪಂಥಾ, ೨ ಭೋಗ, ೩ ವ್ಯಥಾ, ೪ ವಸ್ತ್ರಂ, ೫ ಹಾನಿ, ೬ ವಿಪುಲಧನಂ. ಇವನ್ನು ಹೇಗೆ ನೋಡಬೇಕೆಂಬುದನ್ನು ಈ ಕೆಳಗೆ ಕೊಡಲಾಗಿದೆ.

ಯಾವ ನಕ್ಷತ್ರದ ಮೇಲೆ ಸಂಕ್ರಮಣವು ಬರುವುದೋ ಆ ನಕ್ಷತ್ರದ ಹಿಂದಿನ ನಕ್ಷತ್ರದಿಂದ ೩ ನಕ್ಷತ್ರಗಳನ್ನು ಒಂದನೆಯ ಭಾಗದಲ್ಲಿಯೂ, ಅದರ ಮುಂದಿನ ಮೂರು ನಕ್ಷತ್ರಗಳನ್ನು ಮೂರನೆಯ ಭಾಗದಲ್ಲಿಯೂ, ಅದರ ಮುಂದಿನ ೬ ನಕ್ಷತ್ರಗಳನ್ನು ನಾಲ್ಕನೆಯ ಭಾಗದಲ್ಲಿಯೂ, ಅದರ ಮುಂದಿನ ೩ ನಕ್ಷತ್ರಗಳನ್ನು ಐದನೆಯ ಭಾಗದಲ್ಲಿಯೂ, ಅದರ ಮುಂದಿನ ೬ ನಕ್ಷತ್ರಗಳನ್ನು ಕೊನೆಯ ಅಂದರೆ ಆರನೆಯ ಭಾಗದಲ್ಲಿಯೂ ಬರೆದಿರುತ್ತಾರೆ. ಉದಾ : ಪುಷ್ಯ ನಕ್ಷತ್ರದಲ್ಲಿ ಸಂಕ್ರಮಣವಾಗಿದ್ದರೆ ಪುನರ್ವಸು ಪುಷ್ಯ, ಆಶ್ಲೇಷ ಇವು ಮೊದಲನೆಯ ಭಾಗ ಅಂದರೆ ಪಂಥಾದಲ್ಲಿ ಬರುತ್ತವೆ. ಉದಾಹರಣೆಗಾಗಿ ಈ ಶಕದ ಅಂದರೆ ೧೯೭೧ನೆಯ ಸಂಕ್ರಮಣವನ್ನು ಕೊಟ್ಟಿದೆ.

ಅಥಜನ್ಮಾರ್ಕ್ಷವಶಾತ್ ಸಂಕ್ರಾಂತಿ ಫಲಂ

೧	೨		೩
ಪಂಥಾ	ಭೋಗ		ವ್ಯಥಾ
ಪುನರ್ವಸು	ಮಘಾ	ಹಸ್ತಾ	ವಿಶಾಖ
ಪುಷ್ಯ	ಪೂರ್ವಾ	ಚಿತ್ರಾ	ಅನುರಾಧ
ಆಶ್ಲೇಷಾ	ಉತ್ತರಾ	ಸ್ವಾತಿ	ಜ್ಯೇಷ್ಠಾ

೪		೫	೬	
ವಸ್ತ್ರಂ		ಹಾನಿ	ವಿಪುಲ ಧನಂ	
ಮೂಲಾ ಪೂ-ಅ ಉ-ಅ	ಶ್ರವಣ ಧನಿಷ್ಠಾ ಶತತಾರಾ	ಪೂ-ಭಾ ಉ-ಭಾ ರೇವತಿ	ಅಶ್ವಿನಿ ಭರಣಿ ಕೃತ್ತಿಕಾ	ರೋಹಿಣಿ ಮೃಗ ಆರಿದ್ರಾ

ಈ ಕೋಷ್ಟಕವನ್ನು ನೋಡುವ ರೀತಿ

೧ ಯಾವುದೇ ವ್ಯಕ್ತಿಯ ಜನ್ಮನಕ್ಷತ್ರವು ಈ ೬ ಭಾಗದಲ್ಲಿ ಎಲ್ಲಿ ಇರುವುದು ಎಂಬುದನ್ನು ಮೊದಲು ಕಂಡುಹಿಡಿಯಬೇಕು.

೨ ಒಂದನೆಯ, ಮೂರನೆಯ, ಐದನೆಯ ಭಾಗದಲ್ಲಿ ಬಂದರೆ ಹಾನಿದಾಯಕವು.

೩ ಎರಡನೆಯ, ನಾಲ್ಕನೆಯ, ಆರನೆಯ ಭಾಗದಲ್ಲಿ ಬಂದರೆ ಉತ್ತಮವು. ಉದಾ: ಯಾರೊಬ್ಬ ವ್ಯಕ್ತಿಯ ನಕ್ಷತ್ರವು ಮೃಗ ಇದೆ ಎಂದು ತಿಳಿದರೆ ೬ನೆಯ ಭಾಗದಲ್ಲಿ ಇರುವುದರಿಂದ ಲಾಭವು.

ಯೋಗಗಳು

ಯೋಗವೆಂದರೆ ಕೆಲವು ತಿಥಿಗಳು ಕೆಲವೊಂದು ವಾರದಲ್ಲಿ ಬಂದರೆ ಅಥವಾ ಕೆಲವೊಂದು ವಾರದಲ್ಲಿ ಕೆಲವೊಂದು ನಕ್ಷತ್ರಗಳು (ನಿರ್ದಿಷ್ಟವಾದ ವಾರಗಳಲ್ಲಿ ನಿರ್ದಿಷ್ಟವಾದ ನಕ್ಷತ್ರಗಳು) ಬಂದರೆ ಕೆಲವೊಂದು ನಿರ್ದಿಷ್ಟವಾದ ಯೋಗಗಳಾಗುತ್ತವೆ ಎಂದು ನಮ್ಮ ಶಾಸ್ತ್ರಕಾರರು ಸೂಚಿಸಿದ್ದಾರೆ. ಹೀಗೆ ೧೩ ಪ್ರಕಾರದ ಯೋಗಗಳಿವೆ. ನಮ್ಮ ಪಂಚಾಂಗದಲ್ಲಿ ಅಮೃತ ಸಿದ್ಧಿಯೋಗ, ಯಮಘಂಟಯೋಗ ಹೀಗೆ ಕೆಲವು ಯೋಗಗಳನ್ನು ಕೊಟ್ಟಿದ್ದಾರೆ; ಇವನ್ನು ಹೇಗೆ ಪರಿಶೀಲಿಸಬೇಕು ಎಂಬುದನ್ನು ಈ ಪ್ರಕರಣದಲ್ಲಿ ಕೊಡಲಾಗಿದೆ.

೧ ಅಮೃತಸಿದ್ಧಿ ಯೋಗಗಳು

೧ ರವಿವಾರ ದಿನ ಹಸ್ತಾ ನಕ್ಷತ್ರ ಬಂದರೆ

೨ ಸೋಮವಾರ ದಿನ ಮೃಗಶಿರಾ ಅಥವಾ ಶ್ರವಣಾ ಬಂದರೆ
೩ ಮಂಗಳವಾರ ಅಶ್ವಿನಿ ನಕ್ಷತ್ರವು ಬಂದರೆ
೪ ಬುಧವಾರ ಅನುರಾಧಾ ನಕ್ಷತ್ರ ಬಂದರೆ
೫ ಗುರುವಾರ ಪುಷ್ಯ ನಕ್ಷತ್ರ ಬಂದರೆ
೬ ಶುಕ್ರವಾರ ರೇವತಿ ನಕ್ಷತ್ರ ಬಂದರೆ
೭ ಶನಿವಾರ ರೋಹಿಣಿ ನಕ್ಷತ್ರ ಬಂದರೆ

ಹೀಗೆ ಆಯಾ ವಾರಗಳಲ್ಲಿ ಆಯಾ ನಕ್ಷತ್ರಗಳು ಬಂದರೆ ಅಮೃತ ಸಿದ್ಧಿಯೋಗವಾಗುವುದು. ಮೇಲೆ ತೋರಿಸಿದ ೭ ಪ್ರಕಾರದ ಯೋಗಗಳಲ್ಲಿ ಯಾವುದೇ ಶುಭ ಕೆಲಸಕ್ಕೂ, ಧಾನ್ಯ ಸುವರ್ಣಾದಿಗಳನ್ನು ಸಂಗ್ರಹಿಸಾವದೂ ಶುಭದಾಯಕವು. ಗುರುವಾರ ಪುಷ್ಯ ನಕ್ಷತ್ರ ಬಂದರೆ ಗುರುಪುಷ್ಯಾಮೃತ ಯೋಗವೆಂತಲೂ ಅನ್ನುತ್ತಾರೆ. ಈ ಗುರುಪುಷ್ಯಾಮೃತ ಯೋಗವು ಬಹಳೇ ಶುಭಯೋಗವು.

೨ ಯಮಘಂಟ ಯೋಗಗಳು

೧ ರವಿವಾರ ಮಘಾ ನಕ್ಷತ್ರ ಬಂದರೆ
೨ ಸೋಮವಾರ ವಿಶಾಖಾ ನಕ್ಷತ್ರ ಬಂದರೆ
೩ ಮಂಗಳವಾರ ಆರಿದ್ರಾ ನಕ್ಷತ್ರ ಬಂದರೆ
೪ ಬುಧವಾರ ಮೂಲಾನಕ್ಷತ್ರ ಬಂದರೆ
೫ ಗುರುವಾರ ಕೃತ್ತಿಕಾ ನಕ್ಷತ್ರ ಬಂದರೆ
೬ ಶುಕ್ರವಾರ ಅನುರಾಧಾ ನಕ್ಷತ್ರ ಬಂದರೆ
೭ ಶನಿವಾರ ಹಸ್ತಾ ನಕ್ಷತ್ರ ಬಂದರೆ

ಈ ಏಳು ಪ್ರಕಾರದ ಯಮಘಂಟಾ ಯೋಗಗಳಿವೆ. ಇವುಗಳಲ್ಲಿ ಯಾವುದೇ ಶುಭ ಹಾಗೂ ಹೊಸ ಕೆಲಸಗಳನ್ನೂ ಪ್ರಯಾಣವನ್ನೂ ಮಾಡಬಾರದು.

೩ ಮೃತ್ಯು ಯೋಗಗಳು

೧ ರವಿವಾರ ಅನುರಾಧಾ ನಕ್ಷತ್ರ ಬಂದರೆ
೨ ಸೋಮವಾರ ಉತ್ತರಾಷಾಢ ನಕ್ಷತ್ರ ಬಂದರೆ

೩ ಮಂಗಳವಾರ ಶತತಾರಕಾ ಬಂದರೆ
೪ ಬುಧವಾರ ಅಶ್ವಿನೀ ನಕ್ಷತ್ರ ಬಂದರೆ
೫ ಗುರುವಾರ ಮೃಗಶಿರಾ ನಕ್ಷತ್ರ ಬಂದರೆ
೬ ಶುಕ್ರವಾರ ಆಶ್ಲೇಷಾ ನಕ್ಷತ್ರ ಬಂದರೆ
೭ ಶನಿವಾರ ಹಸ್ತಾ ನಕ್ಷತ್ರ ಬಂದರೆ

ಹೀಗೆ ಏಳು ಪ್ರಕಾರದ ಮೃತ್ಯುಯೋಗಗಳಿವೆ.

೪ ದಗ್ಧ ಯೋಗಗಳು

೧ ರವಿವಾರ ದ್ವಾದಶಿ (೧೨) ತಿಥಿ ಬಂದರೆ
೨ ಸೋಮವಾರ ಏಕಾದಶೀ ತಿಥಿ ಬಂದರೆ
೩ ಮಂಗಳವಾರ ಪಂಚಮೀ ತಿಥಿ ಬಂದರೆ
೪ ಬುಧವಾರ ತೃತೀಯಾ (ತದಿಗೆ) ಬಂದರೆ
೫ ಗುರುವಾರ ಷಷ್ಠೀ ತಿಥಿ ಬಂದರೆ
೬ ಶುಕ್ರವಾರ ಅಷ್ಟಮೀ ತಿಥಿ ಬಂದರೆ
೭ ಶನಿವಾರ ನವಮೀ ತಿಥಿ ಬಂದರೆ

ಹೀಗೆ ಏಳು ಪ್ರಕಾರದ ದಗ್ಧ ಯೋಗಗಳಿವೆ.

೫ ತ್ರಿಪುಷ್ಕರ ಯೋಗ

ಮಂಗಳವಾರ, ರವಿವಾರ, ಶನಿವಾರ, ಈ ಯಾವುದೇ ಒಂದು ವಾರದಲ್ಲಿ ಭದ್ರಾ ತಿಥಿಗಳಾದ ದ್ವಿತೀಯಾ, ಸಪ್ತಮೀ, ದ್ವಾದಶೀ ಈ ಯಾವುದೇ ಒಂದು ತಿಥಿಯು ಇದ್ದು, ತ್ರಿಪಾದಿ ನಕ್ಷತ್ರಗಳಾದ ಕೃತ್ತಿಕಾ, ಪುನರ್ವಸು, ಉತ್ತರಾ ವಿಶಾಖಾ, ಉತ್ತರಾಷಾಢ, ಪೂರ್ವಾಭಾದ್ರಪದ ಈ ನಕ್ಷತ್ರಗಳಲ್ಲಿ ಒಂದು ಹೀಗೆ ಮೇಲೆ ತೋರಿಸಿದ ನಿರ್ದಿಷ್ಟವಾದ ತಿಥಿ, ವಾರ, ನಕ್ಷತ್ರ ಎಲ್ಲವೂ ಒಂದು ಬರುತ್ತವೆಯೋ ಅದಕ್ಕೆ ತ್ರಿಪುಷ್ಕರ ಯೋಗವೆನ್ನುತ್ತಾರೆ. ಈ ತ್ರಿಪುಷ್ಕರ ಯೋಗದಲ್ಲಿ ಜನನ, ಮರಣ, ಲಾಭ, ಹಾನಿ ಹೀಗೆ ಯಾವುದೇ ಸಂಗತಿ ಜರುಗಿದರೆ ಅವು ಸಿ (ಮೂರು ಸಾರೆ ಪುನಃ ಜರುಗುತ್ತವೆ ಎಂದು ನಮ್ಮ ಪುರಾತನ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ.)

ಇದರಂತೆ ಮೇಲೆ ತೋರಿಸಿದ ಅವೇ ವಾರಗಳಲ್ಲಿ ಅವೇ ಭದ್ರಾ ತಿಥಿಗಳು ಇದ್ದು, ದ್ವಿಪಾದಿ ನಕ್ಷತ್ರಗಳಾದ ಮೃಗಶಿರಾ, ಚಿತ್ರಾ, ಧನಿಷ್ಠಾ ನಕ್ಷತ್ರಗಳು ಬಂದರೆ ದ್ವಿಪುಷ್ಕರ ಯೋಗವೆನ್ನುತ್ತಾರೆ. ಈ ಯೋಗಗಳಲ್ಲಿ ಜರುಗಿದ ಯಾವುದೇ ಸಂಗತಿ ಪುನಃ ಆಗುವವೆಂದೂ ಅಭಿಪ್ರಾಯವಿದೆ.

೬ ಕಪಿಲಾಷಷ್ಠೀ ಯೋಗ

ಭಾದ್ರಪದ ಶುದ್ಧ ಷಷ್ಠೀ ತಿಥಿಯು ಮಂಗಳವಾರ ಅಥವಾ ರವಿವಾರ ಇದ್ದು, ಅದೇ ದಿನ ವ್ಯತೀಪಾತ ಯೋಗ ಹಾಗೂ ರೋಹಿಣಿ ನಕ್ಷತ್ರವೂ ಇದ್ದರೆ ಇದಕ್ಕೆ ಕಪಿಲಾಷಷ್ಠೀ ಯೋಗವೆನ್ನುತ್ತಾರೆ. ಈ ಕಪಿಲಾಷಷ್ಠೀ ಯೋಗವು ಪ್ರತಿ ವರುಷಕ್ಕೆ ಬಾರದೇ ೬೦ ವರುಷಕ್ಕೆ ಒಮ್ಮೆ ಬರುತ್ತದೆ ಎಂದು ಅಭಿಪ್ರಾಯವಿದೆ.

೭ ಗಜಚ್ಛಾಯಾ ಯೋಗ

ಭಾದ್ರಪದ ಕೃಷ್ಣಪಕ್ಷದ ಅಮಾವಾಸ್ಯೆಯ ದಿನ ನಿತ್ಯ ನಕ್ಷತ್ರವು ಹಸ್ತಾ ಇದ್ದು, ಸೂರ್ಯ ನಕ್ಷತ್ರವೂ ಹಸ್ತಾ ಇದ್ದರೆ ಈ ಪರ್ವಣೀ ಕಾಲಕ್ಕೆ ಗಜಚ್ಛಾಯಾ ಯೋಗವೆನ್ನುತ್ತಾರೆ. ಈ ದಿನದಲ್ಲಿ ಶ್ರಾದ್ಧಾದಿಗಳನ್ನು ಮಾಡಿದರೆ ಹೆಚ್ಚಿನ ಫಲಪ್ರಾಪ್ತಿ ಸಿಗುತ್ತದೆಂದು ಅಭಿಪ್ರಾಯವಿದೆ. (ಈ ವರುಷದ ಭಾದ್ರಪದ ಅಮಾವಾಸ್ಯೆಗೆ ಈ ಯೋಗವಿದೆ.)

೮ ಭದ್ರಾ ಅಥವಾ ಭ. ಪ್ರ. ಭ. ನಿ.

ವಿಷ್ಟಿ ಕರಣಕ್ಕೆ ಭದ್ರಾ ಎಂಬ ಬೇರೆ ಹೆಸರು. ಭದ್ರಾ ಇದ್ದ ದಿನ ಯಾವ ಕೆಲಸ ಮಾಡಬಾರದೆಂದು ಶಾಸ್ತ್ರಜ್ಞರ ಅಭಿಪ್ರಾಯವಿದೆ. ಆದ್ದರಿಂದಲೇ ಈ ಭದ್ರಾ ಪ್ರಾರಂಭವಾಗುವ ಕಾಲವನ್ನೂ, ಸಮಾಪ್ತವಾಗುವ ಕಾಲವನ್ನೂ ಪಂಚಾಂಗದಲ್ಲಿ ಬರೆದಿರುತ್ತಾರೆ. ಭದ್ರಾ, ಪ್ರವೃತ್ತಿ, ಇದನ್ನೇ ಸಂಕ್ಷಿಪ್ತವಾಗಿ ಭ. ಪ್ರ. ಹಾಗೂ ಭದ್ರಾ ನಿವೃತ್ತಿ ಎಂದರೆ ಭ. ನಿ. ಎಂದು ಸಂಕ್ಷಿಪ್ತದಲ್ಲಿ ಕೊಟ್ಟು, ಅದರ ಮುಂದೆ ಘಳಿಗೆ-ಪಳಗಳನ್ನು ಕೊಟ್ಟಿರುತ್ತಾರೆ. ಉದಾ: ಚೈತ್ರ ಶುದ್ಧ ಸಪ್ತಮಿ ಎಂದರೆ ೧೫-೪-೫೯ ನೆಯ ದಿನ ಭ. ಪ್ರ. ೩೫—೨ ಎಂದು ಬರೆದಿದ್ದಾರೆ. ಅದರ ಅರ್ಥ ೧೫-೪-೫೯

ನೆಯ ಸೂರ್ಯೋದಯದ ನಂತರ ೩೫ ಘಳಿಗೆ ೨ ಪಳಕ್ಕೆ (ಭ. ಪ್ರ.) ಭದ್ರಾ ಸುರು ಆಗುತ್ತದೆ. ಈ ಭ. ಪ್ರ. ಭ.ಸಿಗಳಲ್ಲಿ ಯಾವುದೇ ಶುಭ ಹಾಗೂ ಹೊಸ ಕೆಲಸ ಮಾಡಬಾರದು.

ಅರ್ಕ ನಿರ್ಣಯ

ಸೂರ್ಯನು (ಅರ್ಕ) ಯಾವ ದಿನ ನಕ್ಷತ್ರ ಇಲ್ಲವೆ ರಾಶಿ ಬದಲಿಸುವನೋ ಅಥವಾ ಚರಣ ಬದಲಿಸುವನೋ ಆ ದಿನದ ತಿಥಿಯ ಎದುರಿಗೆ ಅರ್ಕ ಎಂದು ಪಂಚಾಂಗದಲ್ಲಿ ಬರೆದಿರುತ್ತಾರೆ ಹಾಗೂ ಯಾವ ರಾಶಿ ಬದಲಿಸುವನೋ ಆ ರಾಶಿಯ ಹೆಸರನ್ನೂ, ಯಾವ ನಕ್ಷತ್ರವನ್ನು, ಚರಣವನ್ನು ಬದಲಿಸುವನೋ ಆ ನಕ್ಷತ್ರದ ಮುಂದೆ ಚರಣ ಬದಲಿಸಿದ ನಂತರ ಚರಣದ ಮುಂದೆ ಅರ್ಕವನ್ನು ಬರೆದಿರುತ್ತಾರೆ. ಉದಾ— ಅಶ್ವಿನೀ ೧ ಮೇಷಾರ್ಕ, ಕೃತ್ತಿಕಾ ೨ ವೃಷಭಾರ್ಕ ಚೈತ್ರ ಶುದ್ಧ ಪಂಚಮೀ ದಿನ– ಅಂದರೆ ೧೩-೪-೫೯ ನೆಯ ಅಶ್ವಿನೀ ೧ ಮೇಷಾರ್ಕ ೫೪-೨೫ ಎಂದು ಬರೆದಿರುತ್ತಾರೆ ಇದರ ಅರ್ಥ ೧೩-೪-೫೯ ನೆಯ ಸೂರ್ಯೋದಯದ ೫೪ ಘಳಿಗೆ ೨೫ ಪಳಕ್ಕೆ ಸೂರ್ಯನು ಅಶ್ವಿನೀ ನಕ್ಷತ್ರದ ಒಂದನೆಯ ಚರಣವನ್ನು ಪ್ರವೇಶಿಸುವನು. ಅಶ್ವಿನೀ ನಕ್ಷತ್ರ ಮೇಷರಾಶಿಯಲ್ಲಿರುವ ಕಾರಣ ಅಶ್ವಿನೀ ೧ ಮೇಷಾರ್ಕ ಎಂದು ಬರೆದಿರುತ್ತಾರೆ. ಇದರಂತೆ ಇತರ ರಾಶಿ ಹಾಗೂ ನಕ್ಷತ್ರಗಳನ್ನು ತಿಳಿದುಕೊಳ್ಳಬೇಕು.

ಕರಿದಿನ

ಹುಣ್ಣಿವೆ ಹಾಗೂ ಅಮಾವಾಸ್ಯೆ ಈ ಎರಡು ದಿನಗಳು ಅಧ್ಯಯನಕ್ಕೆ ವರ್ಜ್ಯಗಳಿವೆ. ಈ ಹುಣ್ಣಿವೆ ಹಾಗೂ ಅಮಾವಾಸ್ಯೆಗಳು ಮುಗಿಯುವ ಅವಧಿಗೆ ಪರ್ವಕಾಲವೆನ್ನುತ್ತಾರೆ.

ಇದರಂತೆ ಸೂರ್ಯ ಸಂಕ್ರಾಂತಿಯ ದಿವಸವೂ ಕೆಲವು ನಿಯಮಿತ ಕಾಲಕ್ಕೂ ಪರ್ವಕಾಲವಿರುತ್ತದೆ. ಇದರಂತೆ ಸೂರ್ಯ ಹಾಗೂ ಚಂದ್ರ ಗ್ರಹಣಗಳ ಕಾಲಕ್ಕೂ ಪರ್ವಕಾಲವಿರುತ್ತದೆ. (ಪರ್ವಕಾಲ ಅಂದರೆ ನಿಯಮಿತ ಕಾಲ) ಈ ಪರ್ವಕಾಲದಲ್ಲಿ ಅಧ್ಯಯನ ಮೊದಲಾದ ಶುಭ ಹಾಗೂ ನೂತನ ಕೆಲಸ ಮಾಡಬಾರದೆಂದು ಅಭಿಪ್ರಾಯವಿದೆ. ಇದರಂತೆ

ಕೆಲವು ಪರ್ವಗಳ ಎರಡನೆಯ ದಿವಸ ಯಾವದೊಂದು ಹೊಸ ಕೆಲಸ ಮಾಡದುದರಿಂದ ಈ ಎರಡನೆಯ ದಿವಸಕ್ಕೆ ಕರಿಯೆನ್ನುತ್ತಾರೆ.

ಈ ಕೆಳಗೆ ತೋರಿಸಿದಂತೆ ಕೆಲವು ಕರಿದಿನಗಳನ್ನು ಪಂಚಾಂಗದಲ್ಲಿ ಕೊಟ್ಟಿರುತ್ತಾರೆ.

೧ ವೈಶಾಖ ಕೃಷ್ಣ ಅಮಾವಾಸ್ಯೆಯ ಮರುದಿನ
೨ ಹೋಳೀಹುಣ್ಣಿಮೆಯ ಮರುದಿನ
೩ ಕರ್ಕ ಹಾಗೂ ಮಕರ ಸಂಕ್ರಾಂತಿಯ ಮರುದಿನ
೪ ಸೂರ್ಯಗ್ರಹಣ ಹಾಗೂ ಚಂದ್ರಗ್ರಹಣದ ಮರುದಿನ

ಸಂವತ್ಸರದ ಹೆಸರನ್ನು ಕಂಡುಹಿಡಿಯುವ ರೀತಿ

ಕೆಲವು ಪಂಚಾಂಗಗಳ ಹೊರಮಗ್ಗಲು ಅಂದರೆ ಕವರಿನಲ್ಲಿ ಶಾಲಿವಾಹನಶಕೆ, ಸಂವತ್ಸರದ ಹೆಸರು ಹೀಗೆ-ಅನೇಕ ಸನ್‌ಗಳ ಹೆಸರನ್ನು ಬರೆದಿರುತ್ತಾರೆ. ಆದರೆ ಪಂಚಾಂಗದ ಒಳ ಮಗ್ಗಲಿಗೆ ಕೇವಲ ಶಕೆಗಳನ್ನಷ್ಟೇ ಬರೆದಿರುತ್ತಾರೆ. ಸಂವತ್ಸರಗಳ ಹೆಸರನ್ನು ಬರೆದಿರುವದಿಲ್ಲ. ಪಂಚಾಂಗದ ಕವರು ಹರಿದಾಗಲೀ ಅಥವಾ ಕಾಣಿಸದಂತೆ ಆಗಲೀ ಆದರೆ, ಈ ಪಂಚಾಂಗ ಯಾವ ಸಂವತ್ಸರದ್ದು ಎಂಬುದನ್ನು ಬೇಗ ಗುರುತಿಸಲು ಕಠಿಣವಾಗುತ್ತದೆ. ಇದನ್ನು ಸುಲಭವಾಗಿ ಕಂಡುಹಿಡಿಯುವದಕ್ಕೋಸ್ಕರ ಈ ಕೆಳಗೆ ವಿವರಿಸಲಾಗಿದೆ

ಯಾವುದೇ ಶಾಲಿವಾಹನ ಶಕೆಯಲ್ಲಿ ೧೨ ಸಂಖ್ಯೆಯನ್ನು ಕೂಡಿಸಿ ಬಂದ ಬೇರೀಜಿಗೆ ೬೦ ರಿಂದ ಭಾಗಿಸಬೇಕು. ಭಾಗಿಸಿದ ನಂತರ ಉಳಿದ ಶೇಷವೇ ಆ ಸಂವತ್ಸರದ ನಂಬರಿನ ಸಂಖ್ಯೆ ಆಗುತ್ತದೆ.

ಉದಾ : ೧೮೮೧ ನೆಯ ಶಕೆಯು ಸಂವತ್ಸರವನ್ನು ಹೇಗೆ ಕಂಡುಹಿಡಿಯಬೇಕು ? ೧೮೮೧ + ೧೨ = ೧೮೯೩ ಸಂಖ್ಯೆ ಬಂದಿತು. ಈ ೧೮೯೩ ಕ್ಕೆ ೬೦ ರಿಂದ ಭಾಗಿಸಬೇಕು.

೧೮೯೩ ÷ ೬೦ = ೩೧ ಭಾಗಾಕಾರ, ೩೩ ಶೇಷ. ಸಂವತ್ಸರದಲ್ಲಿ ೩೩ ನೆಯ ನಂಬರೇ ಆ ಸಂವತ್ಸರದ ಹೆಸರು. ಪಾರಿಭಾಷಿಕ ಶಬ್ದಗಳಲ್ಲಿ

೬೦ ಸಂವತ್ಸರಗಳ ಹೆಸರುಗಳನ್ನು ಕೊಡಲಾಗಿದೆ. ಅದರಲ್ಲಿ ೩೩ನೆಯ ನಂಬರ ವಿಕಾರಿ ಬರುತ್ತದೆ. ಅದ್ದರಿಂದ ೧೯೫೯ ನೆಯ ಶಕೆಯು ಸಂವತ್ಸರದ ಹೆಸರು ವಿಕಾರಿ ಎಂದು ಇರುತ್ತದೆ.

ಇದರಂತೆ ವಿಕ್ರಮ ಸಂವತ್ಸರದಲ್ಲಿ ೯ ಅಂಕಿಯನ್ನು ಕೂಡಿಸಿ ಬಂದ ಬೇರೀಜಿಗೆ ೬೦ ರಿಂದ ಭಾಗಿಸಲು ವಿಕ್ರಮ ಸಂವತ್ಸರದ ಹೆಸರನ್ನು ಕಂಡು ಹಿಡಿಯಲು ಬರುತ್ತದೆ.

ತಿಥಿಯ ಮೇಲಿಂದ ನಿತ್ಯ ನಕ್ಷತ್ರವನ್ನು (ಚಂದ್ರ ನಕ್ಷತ್ರ)
ಹೇಗೆ ಕಂಡುಹಿಡಿಯಬೇಕು.

ಯಾವುದೇ ತಿಂಗಳ ತಿಥಿಯ ಮೇಲಿಂದ ನಿತ್ಯ ನಕ್ಷತ್ರವನ್ನು ಪಂಚಾಂಗ ನೋಡದೇ ತೋಂಡತಾಳೆಯಿಂದ ಕಂಡುಹಿಡಿಯಲು ಬರುತ್ತದೆ. ಯಾವ ತಿಂಗಳ ಯಾವ ತಿಥಿಯ ನಕ್ಷತ್ರವನ್ನು ತೆಗೆಯುವಾಗ ಚೈತ್ರ ಮಾಸದಿಂದ ಆ ತಿಂಗಳು ಎಷ್ಟನೆಯದು ಎಂಬುದನ್ನು ನೋಡಲು ತೆಗೆದು ಆ ನಂಬರಿನ ೨ ಪಟ್ಟು (ದುಪ್ಪಟ್ಟು) ಮಾಡಬೇಕು. ತದನಂತರ ಬಂದಸಂಖ್ಯೆಗೆ ಕೊಟ್ಟ ತಿಥಿಯ ಸಂಖ್ಯೆಯನ್ನು ಕೂಡಿಸಬೇಕು. ಅಧಿಕ ಮಾಸವಿದ್ದರೆ (ಒಂದು ತಿಂಗಳ) ೧ ಸಂಖ್ಯೆಯನ್ನು ಕೂಡಿಸಬೇಕು. ಕೃಷ್ಣಪಕ್ಷದ ೧೫ ತಿಥಿಗಳನ್ನು ಅಂದರೆ ೧೫ ಸಂಖ್ಯೆಯನ್ನೂ ಕೂಡಿಸಬೇಕು. ಒಟ್ಟು ಸಂಖ್ಯೆಯಲ್ಲಿ ಶುಕ್ಲ ಪಕ್ಷದ ತಿಥಿಯಿದ್ದರೆ ೨ ನ್ನು, ಕೃಷ್ಣಪಕ್ಷದ ತಿಥಿಯಿದ್ದರೆ ೩ ನ್ನೂ ಕಳೆಯಲು, ಬಂದ ಶೇಷ ಸಂಖ್ಯೆಯೇ ನಿತ್ಯ ನಕ್ಷತ್ರದ ಸಂಖ್ಯೆಯಾಗುತ್ತದೆ.

ಉದಾ : ೧ ಆಶ್ವೀನಮಾಸ ಶುಕ್ಲಪಕ್ಷದ ಅಷ್ಟಮಿಗೆ ಯಾವ ನಕ್ಷತ್ರವಿರುವದು ? ಆಶ್ವೀನಮಾಸ ಇದು ಚೈತ್ರಮಾಸದಿಂದ ಏಳನೆಯ ಮಾಸವಿರುತ್ತದೆ. ಈ ಮಾಸದ ಎರಡು ಪಟ್ಟು ಅಂದರೆ $೭ \times ೨ = ೧೪$; ೧೪ ಸಂಖ್ಯೆ ಬಂತು. ಇದರಲ್ಲಿ ಅಷ್ಟಮೀ ತಿಥಿ ಅಂದರೆ ೮ನ್ನು ಕೂಡಿಸಲು, $೧೪ + ೮ = ೨೨$; ೨೨ ಸಂಖ್ಯೆ. ಶುಕ್ಲಪಕ್ಷವಿರುವ ಈ ಸಂಖ್ಯೆಯಲ್ಲಿ ಎರಡನ್ನು ಕಳೆಯಬೇಕು ಅಂದರೆ $೨೨ - ೨ = ೨೦$ ಈ ಸಂಖ್ಯೆ ಬಂದಿತು. ಈ ೨೦ ಸಂಖ್ಯೆಯೇ ನಕ್ಷತ್ರದ ಸಂಖ್ಯೆಯು. ಅಶ್ವಿನಿಯಿಂದ ರೇವತಿಯ ವರೆಗೆ ಇರುವ ೨೭ ನಕ್ಷತ್ರಗಳಲ್ಲಿ ೨೦ ನೆಯ ನಂಬರಿನ ನಕ್ಷತ್ರವೆಂದರೆ

ಪೂ-ಆ ನಕ್ಷತ್ರವಿರುತ್ತದೆ. ಆದುದರಿಂದ ಆಶ್ವೀನ ಶುಕ್ಲಪಕ್ಷ ಅಷ್ಟಮೀ ದಿನ ಪೂರ್ವಾಷಾಢ ನಕ್ಷತ್ರವಿರುತ್ತದೆ.

ಇನ್ನು ಕೃಷ್ಣಪಕ್ಷದ ತಿಥಿಗಳ ನಕ್ಷತ್ರವನ್ನು ಹೇಗೆ ತೆಗೆಯಬೇಕು ? ಉದಾ: ೨. ಆಷಾಢ ಕೃಷ್ಣಪಕ್ಷ ಪಂಚಮೀ ದಿನ ಯಾವ ನಕ್ಷತ್ರವಿರುತ್ತದೆ ? ಆಷಾಢಮಾಸ ಇದು ೪ ನೆಯ ತಿಂಗಳು ಇರುತ್ತದೆ. ಈ ಮಾಸದ ಎರಡು ಪಟ್ಟು (ದುಪ್ಪಟ್ಟು) ೪ × ೨ = ೮ ಸಂಖ್ಯೆ ಬರುತ್ತದೆ. ಕೃಷ್ಣಪಕ್ಷದ ಪಂಚಮೀ ಅಂದರೆ ಶುಕ್ಲಪಕ್ಷದ ೧೫ ತಿಥಿ ಅಧಿಕ ಪಂಚಮೀ ಅಂದರೆ ೧೫ + ೫ = ೨೦ ಸಂಖ್ಯೆ ಬಂದಿತು. ಮಾಸದ ಸಂಖ್ಯೆಗೆ ತಿಥಿಯ ಸಂಖ್ಯೆಯನ್ನು ಕೂಡಿಸಬೇಕು. ೮ + ೨೦ = ೨೮–೨೮ ಸಂಖ್ಯೆ ಬಂದಿತು. ಕೃಷ್ಣಪಕ್ಷದ ತಿಥಿ ಇರುವ ಕಾರಣ ೩ ಸಂಖ್ಯೆಯನ್ನು ಕಳೆಯಬೇಕು. ಅಂದರೆ ೨೮ – ೩ = ೨೫ ಸಂಖ್ಯೆ ಬಂದಿತು. ನಕ್ಷತ್ರಗಳಲ್ಲಿ ೨೫ ನೆಯ ನಂಬರಿನ ನಕ್ಷತ್ರ ಅಂದರೆ ಪೂರ್ವಾಭಾದ್ರಪದ ನಕ್ಷತ್ರವಿರುವುದು. ಆದುದರಿಂದ ಆಷಾಢ ಕೃಷ್ಣಪಕ್ಷ ಪಂಚಮೀ ದಿನ ಪೂರ್ವಾಭಾದ್ರಪದ ನಕ್ಷತ್ರವಿರುತ್ತದೆ.

ಶೇಷ ಸಂಖ್ಯೆಯು ೨೭ ಕ್ಕಿಂತ ಹೆಚ್ಚು ಬಂದರೆ, ಬಂದ ಸಂಖ್ಯೆಯಲ್ಲಿ ಪುನಃ ೨೭ನ್ನು ಕಳೆಯಬೇಕು. ಹೇಗೆಂದರೆ ಶೇಷ ೨೯ ಬಂದಿತು ಎಂದು ತಿಳಿದು ೨೯ ರಲ್ಲಿ ೨೭ ಕಳೆಯಬೇಕು ೨ ಸಂಖ್ಯೆ ಅಂದರೆ ಭರಣೀ ನಕ್ಷತ್ರ. ಹೀಗೆ ಈ ಲೆಕ್ಕವು ಬಹಳೇ ಸ್ಥೂಲಮಾನದಿಂದ ಇರುವ ಕಾರಣ ಒಮ್ಮೊಮ್ಮೆ ತಪ್ಪು ಹಿಂದೆ ಇಲ್ಲವೆ ಮುಂದಿನ ನಕ್ಷತ್ರ ಬರುವದುಂಟು ಮತ್ತು ಒಂದೇ ದಿನದಲ್ಲಿ ೨ ತಿಥಿಗಳಾಗಲೀ ಬಂದರೆ ಅಥವಾ ತಿಥಿ ಕ್ಷಯವಾದರೆ ಲೆಕ್ಕ ತಪ್ಪಿ ಹಿಂದಿನ ನಕ್ಷತ್ರವಾಗಲೀ ಬರುವ ಸಂಭವವಿದೆ.

ಅಯನಾಂಶ ವಾದ

ನಮ್ಮ ಭರತಖಂಡದಲ್ಲಿ ನಿರಯನ ಪಂಚಾಂಗಗಳು ರೂಢಿಯಲ್ಲಿ ಇರುವವು. ಅಯನಾಂಶ ವಾದದಿಂದ ಭಿನ್ನತೆಯುಂಟಾಗಿ ಏಕಮೇವ ಪಂಚಾಂಗಗಳು ಹೊರಡುವದಿಲ್ಲ. ಜ್ಯೋತಿಷ್ಯಶಾಸ್ತ್ರದ ಮೇಲೆ ಆಧುನಿಕರಲ್ಲಿ ಅವಿಶ್ವಾಸ ಹುಟ್ಟಲಿಕ್ಕೆ ಇದೂ ಒಂದು ಕಾರಣವಾಗಿದೆ. ೧೯೧೭ ರಲ್ಲಿ ಪಂಚಾಂಗಗಳಲ್ಲಿ ಮತೈಕ್ಯವನ್ನುಂಟುಮಾಡಲಿಕ್ಕೆ ಸಾಂಗಲಿಯಲ್ಲಿ ಜ್ಯೋತಿಷ್ಯ ಸಮ್ಮೇಲನವು ಕೂಡಿತ್ತು. ಪಂಚಾಂಗಕರ್ತರ ವಾಗ್ವಾದದಿಂದ ಬೇಸತ್ತು, ಕೊನೆಗೆ ಲೋ. ಟಿಳಕರು "ಪಾಹಿಜೇತರ ೭೦ ಅಯನಾಂಶ ಧರಾ, ಏಕಚ ಪಂಚಾಂಗ ಕರಾ" ಎಂದು ನುಡಿದರು. ಆ ಬಳಿಕ ಅನೇಕ ಸಮ್ಮೇಲನಗಳಾದರೂ ಅಯನಾಂಶ ವಾದ ಬಗೆಹರಿದಿಲ್ಲ. ಸಾಯನ ಪಂಚಾಂಗದಲ್ಲಿ ಈ ವಾದವಿಲ್ಲ. ರಾಫೆಲ್ ಎಫಿಮೇರೀಜ್ ಅಥವಾ ಉಜ್ಜಯಿನಿಯಿಂದ ಹೊರಡುವ ಸಾಯನ ಪಂಚಾಂಗ ತಕ್ಕೊಂಡು ನೋಡಿದರೆ, ನಿಮಗೆ ಕೂಡ ತಿಳಿಯುವದು. ನಮ್ಮ ನಿರಯನ ಪಂಚಾಂಗಕರ್ತರಲ್ಲಿ ಮುಖ್ಯವಾಗಿ ಮೂರು ಪಕ್ಷಗಳಿರುವವು. ಒಂದು ಟಿಳಕ ಪಂಚಾಂಗ ಕರ್ತರಾದ ಪಟವರ್ಧನ ಶಾಸ್ತ್ರಿಗಳದು, ಇನ್ನೊಂದು ಕೇತಕರ ಪಕ್ಷ, ಮತ್ತೊಂದು ಬಿ. ವಿ. ರಾಮನ್ನರ ಪಕ್ಷ. ಇವರೆಲ್ಲರ ಅಯನಾಂಶ ಭಿನ್ನವಾಗಿರುವದು. ಪ್ರಾಚೀನ ಸಿದ್ಧಾಂತ ಗ್ರಂಥಗಳಲ್ಲಿ ಅಯನಗತಿಯ ಬಗ್ಗೆ ಕೊಂಚ ಮತಭೇದಗಳಿದ್ದರೂ, ಈಗ ಎಲ್ಲರೂ ಪ್ರಾಯಶಃ ವೇಧಗ್ರಾಹ್ಯವಾದ ಅಯನಗತಿ ಪ್ರತಿವರ್ಷ ಸು. ೭೦ ವಿಕಲೆ (ವಿಲೋಮಗತಿ) ಇದನ್ನೇ ಹಿಡಿಯುವರು. ಇದರಲ್ಲಿ ಮತಭೇದವಿಲ್ಲ. ಆದರೆ ಯಾವ ವರುಷ ಸಾಯನ ನಿರಯನಗಳು ರಾಶಿಚಕ್ರದ ಒಂದೇ ಅಂಶದಲ್ಲಿದ್ದವೆಂಬ ಬಗ್ಗೆ ಗಣಕಜ್ಞರಲ್ಲಿ ಬಡಿದಾಟವಿದೆ. ಈ ಬಡಿದಾಟ ಒಡಂಬಡಿಕೆಯಿಂದ 'ತ್ವಯಾರ್ಧಂ ಮಯಾರ್ಧಂ' ನ್ಯಾಯದಿಂದ ಬಗೆಹರಿಯುವದೂ ಅಲ್ಲ.

ಎಲ್ಲರೂ ಗಣಿತಜ್ಞರು; ಮಹಾ ಮೇಧಾವಿಗಳು. ಬೆಂಗಳೂರಿನ ಅಸ್ಟ್ರಾಲಾಜಿಕಲ್ ಮ್ಯಾಗಜೀನದಲ್ಲಿ ಅನೇಕ ಲೇಖನಗಳು ಬಂದಿರುವವು. ಅವನ್ನು ವಾಚಕರು ನೋಡಿರಬಹುದು.

ಕಾಲಕ್ರಮದಿಂದ ಗ್ರಹಗತಿಯಲ್ಲಿ ಉಂಟಾಗುವ ಫರ್ಕನ್ನು ಗಣಿತಜ್ಞರು ತೆಗೆದುಹಾಕಬೇಕಾಗುವದು. ಸೂರ್ಯಸಿದ್ಧಾಂತದ ತರುವಾಯ ವರಾಹಮಿಹಿರಾಚಾರ್ಯರು ವೇಧದಿಂದ ನೋಡಿ ಪಂಚಸಿದ್ಧಾಂತಿಕೆಯನ್ನು ಬರೆದು, ಗಣಿತವನ್ನು ತಿದ್ದಿಕೊಂಡರು. ತರುವಾಯ ಭಾಸ್ಕರಾಚಾರ್ಯರು ಸಿದ್ಧಾಂತಶಿರೋಮಣಿಯನ್ನು ಬರೆದು, ಅನೇಕ ವರುಷಗಳ ನಂತರ ಪಂಚಾಂಗವನ್ನು ಶುದ್ಧೀಕರಿಸಿದರು. ತರುವಾಯ ಸುಮಾರು ೧೫ನೆಯ ಶತಮಾನದಲ್ಲಿ ಕೇಶವದೈವಜ್ಞನು ಹುಟ್ಟಿ, ಪಂಚಾಂಗ ಸಾಧನೆಯ ಗ್ರಹಲಾಘವೀಯವನ್ನು ಬರೆದು, ಹಿಂದಿನ ಪಂಚಾಂಗಗಳನ್ನು ತಿದ್ದಿದನು. ತರುವಾಯ ೨೦ನೆಯ ಶತಮಾನದ ಆರಂಭದಲ್ಲಿ ಕೇತಕರರು ಹುಟ್ಟಿ ಜ್ಯೋತಿರ್ಗಣಿತವನ್ನು ಸುಲಭ ಸಂಸ್ಕೃತದಲ್ಲಿಯೇ ಬರೆದು, ಗ್ರಹಗಳನ್ನು ಈಗಿನ ಸೂಕ್ಷ್ಮ ಗಣಿತಕ್ಕೆ ಸರಿಹೋಗುವಂತೆ ಮಾಡಿದರು. ಅವರ ಮಕ್ಕಳೂ ಗಣಿತಜ್ಞರಿದ್ದಾರೆ. (ವಿಜಾಪುರದಲ್ಲಿ ಈಗ) ಈಗ ಕಲಕತ್ತೆಯ ಲಾಹಿರೀ ಪಂಚಾಂಗ, ಮುಂಬೈಯ ಪ್ರಸಿದ್ಧ ಜನ್ಮಭೂಮಿ ಪಂಚಾಂಗ ಮತ್ತು ಮಧ್ಯಭಾರತದಲ್ಲಿ ಹೊರಡುವ ಪಂಚಾಂಗ ಇವೆಲ್ಲ ಕೇತಕರರ ಅಯನಾಂಶ ಪಕ್ಷದವರವು. ಆದರೆ ಕೇತಕರರು ಗಣಿತ ತಜ್ಞರಿರುವಂತೆ ಫಲಿತಜ್ಞರಿರಲಿಲ್ಲ. ಫಲಿತದ ಮೇಲೆ ಅವರ ವಿಶ್ವಾಸವೂ ಇರಲಿಲ್ಲ. ಜ್ಯೋತಿಷ್ಯ ಶಾಸ್ತ್ರದಲ್ಲಿ ಮುಖ್ಯ ಎರಡು ಅಂಗಗಳಿವೆ. ಒಂದು ಗಣಿತ (Astronomy) ಎರಡು. ಫಲಿತ (Astrology). ಫಲಿತವು ಗಣಿತವನ್ನು ಅವಲಂಬಿಸಿರುವದು. ಒಂದೊಂದು ಶಾಖೆಯ ಅಭ್ಯಾಸಕ್ಕೆ ಒಂದೊಂದು ಜನ್ಮವೂ ಸಾಲದು. ಶಾಖೆಗಳು ಅಷ್ಟು ವಿಶಾಲವಾಗಿರುವವು. ಇಂದಿನ ಗಣಿತಶಾಸ್ತ್ರ ಪಾಶ್ಚಾತ್ಯರ ಪರಿಶ್ರಮದಿಂದ ಬಹಳ ಸೂಕ್ಷ್ಮತ್ವಕ್ಕೆ ಬಂದಿರುವದು. ಗಣಿತವನ್ನು ಅವಲಂಬಿಸಿದ ಫಲಿತವು ಸೂಕ್ಷ್ಮವಾಗಬೇಕಾದರೆ ಸೂಕ್ಷ್ಮಗಣಿತವನ್ನೇ ಅವಲಂಬಿಸಬೇಕಾಗುವದು. ಹಾಗಾದರೆ ಯಾವ ಪಂಚಾಂಗವನ್ನು ಅವಲಂಬಿಸಬೇಕು.

ಇಂದು ನಮ್ಮ ಭಾರತದಲ್ಲಿ ವಿರಲವಾಗಿದ್ದರೂ ಗಣಿತ, ಫಲಿತ ಎರಡೂ ಬಲ್ಲವರೂ ಅಲ್ಲಲ್ಲಿ ಇರುವರು. ಬಂಗಾಲದ ಎಸ್. ಕೆ. ಕಾರ, ಬೆಂಗಳೂರಿನ ಬಿ. ವ್ಹಿ. ರಾಮನ್ ಉಜ್ಜಯಿನಿಯ ಆರ್. ವ್ಹಿ. ವೈದ್ಯ ಮೊದಲಾದ ಫಲಿತಶಾಸ್ತ್ರ — ಗಣಿತಶಾಸ್ತ್ರ ತಜ್ಞರು, ದುರಾಗ್ರಹವನ್ನು ಬಿಟ್ಟು ಪಂಚಾಂಗ ಪರಿಷತ್ತನ್ನು ಕೂಡಿಸಿ, ಈ ವಾದವನ್ನು ಬಗೆಹರಿಸಿದರೆ, ಪಂಚಾಂಗ ಸಾಧನೆಯಲ್ಲಿ ಮತೈಕ್ಯ ತೋರಬಹುದು. ಆದರೆ ಆ ಕಾಲವು ಎಂದು ಸನ್ನಿಹಿತವಾಗುವದೋ ದೇವರೇ ಬಲ್ಲ.

ಭಾರತ ಸರಕಾರದವರು ಇಂದು ಪಂಚಾಂಗವನ್ನು ನಿರ್ಮಿಸಿದ್ದರೂ, ಅದು ಕೇವಲ ವ್ಯಾವಹಾರಿಕ ದೃಷ್ಟಿಯಿಂದ ಅದು ಪಂಚಾಂಗವಲ್ಲ. ತ್ರ್ಯಂಗವಾಗಿರುವದು. ಅದರಲ್ಲಿ ಯೋಗ, ಕರಣಗಳನ್ನು ಕೊಟ್ಟಿಲ್ಲ. ಫಲಿತ ಕಥನ ಮಾಡುವವರಿಗೆ ಇವು ಅವಶ್ಯವಾಗಿ ಬೇಕು. ನಮ್ಮಲ್ಲಿ ಧಾರ್ಮಿಕ ಜನರಿಗೂ ಪಂಚಾಂಗ ಅವಶ್ಯವಾಗಿ ಬೇಕು. ವ್ರತೋಪವಾಸಾದಿಗಳು, ಧಾರ್ಮಿಕ ಕಾರ್ಯಗಳು ತಿಥಿ-ನಕ್ಷತ್ರಾದಿಗಳನ್ನು ಅವಲಂಬಿಸಿರುವವು. ಅನೇಕ ಧಾರ್ಮಿಕ ಕಾರ್ಯಗಳಿಗೆ ಚಾಂದ್ರಮಾಸಗಳೇ ಬೇಕಾಗುವವು. ಸೌರವರ್ಷದಂತೆ ನಮಗೆ ಬಾರ್ಹಸ್ಪತ್ಯವರ್ಷವೂ ಬೇಕಾಗುವದು. ಬಾರ್ಹಸ್ಪತ್ಯವರ್ಷವನ್ನು ನಮ್ಮ ಪಂಚಾಂಗಕರ್ತರು ಉಲ್ಲೇಖಿಸುವದೇ ಇಲ್ಲ. ಮಳೆಬೆಳೆಗಳನ್ನು ನಿರ್ಣಯಿಸಲಿಕ್ಕೆ ಈ ಬಾರ್ಹಸ್ಪತ್ಯ ವರ್ಷಗಳು ಬಹಳ ಪ್ರಯೋಜನಕಾರಿಯಾಗಿರುವವು. ವರಾಹಮಿಹಿರಾಚಾರ್ಯರು ಇವರ ಗಣಿತವನ್ನು ಬೃಹತ್ ಸಂಹಿತೆಯಲ್ಲಿ ಕೊಟ್ಟಿರುವರು. ಅದರ ವಿವರಣೆಯನ್ನು ಕೂಡ ಎ. ಎಮ್. ದಲ್ಲಿ ಹೈದರಾಬಾದಿನ ಪ್ರೊಫೆಸರರಾಗಿದ್ದ ಕೃಷ್ಣಮೂರ್ತಿಯವರು ಮಾಡಿದ್ದರು. ಇಂತಹ ಉಪಯುಕ್ತ ವಿಷಯಗಳನ್ನು ನಮ್ಮ ಪಂಚಾಂಗಕರ್ತರು ಅಲಕ್ಷಿಸುತ್ತಾರೆ. ಪಂಚಾಂಗದಲ್ಲಿ ಎಲ್ಲರಿಗೂ ಉಪಯುಕ್ತವಾಗುವ ಫಲಿತಾಪೇಕ್ಷಿಗಳಿಗೆ, ಧಾರ್ಮಿಕರಿಗೆ, ವ್ಯಾವಹಾರಿಕರಿಗೆ ವಿಷಯಗಳು ಬೇಕು. ಇಲ್ಲವಾದರೆ ವೇಂಕಟಾಧ್ವರಿ ಕವಿ ಬಣ್ಣಿಸಿದಂತೆ "ಗಣಿತಂ ಗಣಕ ಸಮಾನ ಧರ್ಮೇ, ನಿಜಪಂಚಾಂಗ ವಿವರ್ಣತಾವಹೇ" ಎಂಬ ವಿಡಂಬನೆಗೆ ಪಾತ್ರವಾಗುವವು. ಆದ್ದರಿಂದ

ಪಂಚಾಂಗಕರ್ತರು ಜಾಗೃತರಾಗಿ ಇಂದಿನ ಕಾಲಕ್ಕೆ ಹೊಂದುವಂತೆ ಶುದ್ಧ ದೃಕ್ ಪ್ರತ್ಯಯ ಪಂಚಾಂಗಗಳನ್ನು ಪ್ರಕಟಿಸಬೇಕು.

ದೃಕ್ ಪ್ರತ್ಯಯವೆಂದ ಕೂಡಲೆ ಯಾವುದು— ದೃಕ್ ಪ್ರತ್ಯಯ ? ಟಿಳಕ ಪಂಚಾಂಗದ ಅಧ್ವರ್ಯುಗಳಾದ ರಘುನಾಥಶಾಸ್ತ್ರಿ ಪಟವರ್ಧನರು ತಮ್ಮ ಪ್ರಚಾರ ಪಟುತ್ವದಿಂದ ತಮ್ಮ ಪಂಚಾಂಗವೇ ದೃಕ್ ಪ್ರತ್ಯಯಕ್ಕೆ ಬರುವದೆಂದು ಅನೇಕ ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಘೋಷನಾದದಿಂದ ಹೇಳಹತ್ತಿರುವರು. ಅವರ ಅಯನಾಂಶ ಈಗ ಶು. ೧೯-೨೦ ಇರುವದು. ಈ ಪಕ್ಷದವರ ವಾದವೇನೆಂದರೆ, ಪ್ರಾಚೀನ ಗ್ರಂಥಗಳಲ್ಲಿ 'ಪೌಷ್ಣಾಂತೇ ಭಗಣಃ ಸ್ಮೃತಃ' ಎಂದು ಉಲ್ಲೇಖವಿರುವದರಿಂದ ರೇವತಿಯೋಗತಾರೆಯು ಆರಂಭದ ಬಿಂದು. ರೇವತೀ ನಕ್ಷತ್ರದ (ಇದು ೩೨ ನಕ್ಷತ್ರಗಳದ್ದಿದ್ದು, ಮೃದಂಗಾಕಾರದ್ದಿರುವದು.) ಸಂಕ್ರಾಂತಿವೃತ್ತದಿಂದ ಅರ್ಧ ಅಂಶ ಅಂತರದಲ್ಲಿ ವೈಜಯಂತೀ ತಾರೆ ಇರುವದು; ಇದೇ ಆರಂಭ ಬಿಂದು. ಇದೇ ರಾಶಿಚಕ್ರದ ಆರಂಭ ಬಿಂದು ಎಂದು ಹೇಳುವರು. ಕೇತಕರರ ಪಕ್ಷದವರು ಚಿತ್ರಾ ನಕ್ಷತ್ರದ ಎದುರಿಗೆ ಇರುವ ಬಿಂದು ರಾಶಿಚಕ್ರದ ಆರಂಭ ಬಿಂದು ಎಂದು ಹೇಳುವರು. ಚಿತ್ರಾ ನಕ್ಷತ್ರ ರಾಶಿಚಕ್ರದಿಂದ ೧೮೦ ಅಂಶ ಅಂತರದಲ್ಲಿರುವದು. ಇದನ್ನು ವಿರೋಧಿಸುವವರು ಚಿತ್ರಾದ ಅಂತರ ೧೮೩ ಅಂಶವೆಂದು ಹೇಳುವರು. ಇದು ಚಿತ್ರಾಪಕ್ಷ. ಮೇಲಿನದು ವೈಜಯಂತೀ ಪಕ್ಷ. ಚಿತ್ರಾ ಪಕ್ಷದ ಅಯನಾಂಶವು ೧೯೫೫ ಇಸವಿಯಲ್ಲಿ ೨೩-೧೬-೮ ಇತ್ತು.

ಶ್ರೀ ಬಿ. ವಿ. ರಾಮನ್‌ರು ಆರಂಭ ವರ್ಷವನ್ನು ಇ. ಸ. ೩೯೭ ಹಿಡಿದು ಬನ್ನ ವರ್ಷದಲ್ಲಿ ಇಷ್ಟು ಕಳೆದು ೫೦.೧ ಅಯನಗತಿಯಂತೆ ಲೆಕ್ಕ ಮಾಡಿದರೆ ಅವರ ಅಯನಾಂಶ ಆ ವರ್ಷ ೨೧-೫೦. ರಾಫೆಲ್ ಸಾಹೇಬರ ಸಾಯನಪಂಚಾಂಗ ತೆಗೆದುಕೊಂಡು ಆಯಾ ಪಕ್ಷಗಳ ಅಯನಾಂಶಗಳನ್ನು ಕಳೆದರೆ ಪಂಚಾಂಗಗಳಾಗುವವು.

ಇವರಿಂದ ಪಂಚಾಂಗದಿಂದ ಫಲಿತವನ್ನು ನೋಡುವ ಸಾಮಾನ್ಯ ಜನರು ಗೊಂದಲದಲ್ಲಿ ಬೀಳುವರು. ಉದಾ :— ಜ್ಯೇಷ್ಠಾ-ಮೂಲಾ ಸಂಧಿ ಕಾಲ, ಆಶ್ಲೇಷಾ-ಮಘಾ ಸಂಧಿಕಾಲ. ರೇವತಿ-ಅಶ್ವಿನೀ ಸಂಧಿಕಾಲ—

೭॥ ಗಳಿಗೆ ಗಂಡಾಂತರ ಸಮಯವಿರುವದು. ಈ ವೇಳೆಯಲ್ಲಿ ಕೂಸು ಹುಟ್ಟಿದರೆ ಶಾಂತಿ ಮಾಡಿಸುವರು. ಇದರಂತೆ ಲಗ್ನಸಂಧಿ-ಕೆಲವು ನಕ್ಷತ್ರಗಳ ಕೆಲವು ಚರಣಗಳು ಗಂಡಾಂತರವನ್ನು ತರುವಂಥವು ಇರುತ್ತವೆ. ಇವು ಶಾಂತ್ಯುಕ್ತ ನಕ್ಷತ್ರಗಳೆಂದೂ ಹೇಳಿದ್ದಾರೆ.

ಇನ್ನು ನಮ್ಮ ದೇಶದಲ್ಲಿ ರಶಿಯಾದಂತೆ, ಚೀನದಂತೆ, ಕಮ್ಯುನಿಝಂ ಪೂರ್ಣಪ್ರಭಾವ ಬೀರಿಲ್ಲ. ಹಣಕಿ ಹಾಕಹತ್ತಿದೆ. ಇದು ಪೂರ್ಣ ಪ್ರಭಾವ ಬೀರುವ ವರೆಗಾದರೂ ಧಾರ್ಮಿಕರಿಗೆ ಶುದ್ಧ ಪಂಚಾಂಗಗಳು ಬೇಕು. ಅಯನಾಂಶ ಭೇದದಿಂದ ಲಗ್ನಸಂಧಿ, ನಕ್ಷತ್ರ ಸಂಧಿಗಳಲ್ಲಿ ಸ್ಪಷ್ಟ ನಿರ್ಣಯವಾಗದೆ ಸಂದೇಹ ಹುಟ್ಟುವದು. ಇದಲ್ಲದೆ ದಶಾಫಲವನ್ನು ನೋಡುವಾಗ ಭೋಗ್ಯವರ್ಷಗಳಲ್ಲಿ ೩-೪ ವರ್ಷಗಳಷ್ಟು ಅಂತರ ಬರುವದು. ೨-೨॥ ವರ್ಷಗಳ ವರೆಗೆ ಫಲಿತಗಳನ್ನು ಹೇಳುವ ನಾಡಿಗ್ರಂಥಗಳು ಅವು ಮುದಿ ತವಾಗಿದ್ದರೂ ನಮ್ಮ ದೇಶದಲ್ಲಿರುವವು. ಅಂದಬಳಿಕ ಈ ಅಯನಾಂಶ ಭೇದವನ್ನು ನಿವಾರಿಸದೆ ಗತ್ಯಂತರವಿಲ್ಲ.

ಉತ್ತರಾಧಿಮಠದ ಅಧಿಪತಿಗಳಾಗಿದ್ದ ಶ್ರೀ ಸತ್ಯಧ್ಯಾನತೀರ್ಥ ಶ್ರೀಪಾದಂಗಳವರು ಈ ಪಂಚಾಂಗ ಪರಿಷ್ಕಾರಕ್ಕಾಗಿ ಬಹಳ ಪರಿಶ್ರಮಪಟ್ಟರು. ಅವರ ಕಾರ್ಯವು ಅಪೂರ್ಣವಾಗಿರುವದು. ಎಲ್ಲ ಮಠಾಧಿಪತಿಗಳು ಕಮ್ಯುನಿಝಂ ಬರುವದರ ಮೊದಲೇ ಜಾಗೃತರಾಗಿ ಇಡೀ ಭರತ ಖಂಡದ ತುಂಬ ಒಂದೇ ವಿಧದ ಪಂಚಾಂಗ ಹುಟ್ಟುವಂತೆ, ಪ್ರಚಾರವಾಗುವಂತೆ ಮಾಡಬೇಕು. ಅವರ ಸಾಧನೀ ನಿರ್ಣಯ, ಏಕಾದಶೀ ನಿರ್ಣಯ ಏಕಮತದಿಂದ ಆಗಲಿ.

ಬರೀ ಮಠಾಧಿಪತಿಗಳಲ್ಲಿ ಜ್ಯೋತಿಷ್ಯವು ಪೇದಾಂಶವಾಗಿದೆ. ಭಾರತದ ಸಂಸ್ಕೃತಿಯ ಅಭಿಮಾನಿಗಳೆಲ್ಲರೂ ಕೂಡಿ ಈ ಪಂಚಾಂಗವಾದವನ್ನು ಪರಿಹರಿಸಲು ಯತ್ನಿಸಬೇಕು. ಅಂದರೆ ಸಾಮಾನ್ಯರ ಭ್ರಮನಿವಾಗುವದು.

ಕಾಲಾನುಕೂಲ್ಯವು ಕಾರ್ಯಸಿದ್ಧಿಗೆ ಸೌಧಕಕಾಲದ ಅನುಕೂಲತೆ ಪ್ರತಿಕೂಲತೆಗಳನ್ನು ತೋರಿಸುವದು. ನಮ್ಮ ಪೂರ್ವಜರು ಪರಿಶ್ರಮಪಟ್ಟು ಮುಹೂರ್ತ ಗ್ರಂಥಗಳನ್ನು ಬರೆದಿಟ್ಟಿರುವರು. ಮುಹೂರ್ತದ ಮುಖ್ಯಾಂಗ ನಕ್ಷತ್ರ. ನಕ್ಷತ್ರದ ಗಳಿಗೆ, ಪಳಗಳು ಭಿನ್ನ ಭಿನ್ನ ಪಂಚಾಂಗಗಳಲ್ಲಿ ಭಿನ್ನ

ಭಿನ್ನವಾಗಿ ಬರೆಯಲ್ಪಟ್ಟರೆ, ಪಾಪ ಸಾಮಾನ್ಯರು ಏನು ಮಾಡಬೇಕು ? ಯಾರ ಪಂಚಾಂಗಕ್ಕೆ ಶರಣಾಗತರಾಗಬೇಕು, ಅಥವಾ ಪಂಚಾಂಗವನ್ನೇ ನೋಡುವುದು ಬಿಡಬೇಕೋ? ಅದು ಅಧಾರ್ಮಿಕ ಸಾಮ್ಯವಾದ ಬಂದ ಬಳಿಕ.

ಇನ್ನೊಂದು ಮಾತೇ ಇಲ್ಲಿ ಹೇಳಬೇಕಾಗಿರುವದು. ನಮಗಿನ್ನು ಸಾಯನ ಪಂಚಾಂಗಗಳೂ ಬೇಕು. ಉಜ್ಜಯಿನಿಯಿಂದ ಈಗ ಇಂಗ್ಲೀಷ ಸಾಯನ ಪಂಚಾಂಗ ಹೊರಡುತ್ತಿರುವದು. ಸಾಯನ ಪಂಚಾಂಗ ಪಾಶ್ಚಾತ್ಯರದೆಂದು ತಪ್ಪು ತಿಳಿವಳಿಕೆಯಿರುವದು. ಆ ಪಕ್ಷವೂ ನಮ್ಮದೇ. ನಮ್ಮ ಗ್ರಂಥಗಳಲ್ಲಿ ಸಾಯನವಾದಕ್ಕೆ ಆಧಾರಗಳಿರುವವು. ಅದು ಕಮ್ಯುನಿಝಂ ದಂತೆ ಅಧಾರ್ಮಿಕವಲ್ಲ, ಪರಕೀಯವೂ ಅಲ್ಲ. ಇದಕ್ಕೆ ಆಧಾರಗಳು :

ಚಲಸಂಸ್ಕೃತಿತಿಗ್ಮಾಂಶೋಃ ಸಂಕ್ರಮೋಯಃ ಸ ಸಂಕ್ರಮಃ ।
ಅಚಾಗಲಸ್ತನಸ್ಯೈವರಾಶಿಸಂಕ್ರಾಂತಿರುಚ್ಯತೇ ।

—ವಸಿಷ್ಠ

ಮೇಷಾದೌ ಚ ತುಲಾದೌ ಚ ಮೈತ್ರೇಯ ವಿಷುವತ್‌ಸ್ಥಿತಃ ।
ತದಾತುಲ್ಯಮಹೋರಾತ್ರಂ ಕರೋತಿ ತಿಮಿರಾಪಹಃ ।

—ವಿಷ್ಣುಪುರಾಣ

ಅಯನಾಂಶಸಂಸ್ಕೃತಾರ್ಕಸ್ಯ ಮುಖ್ಯ ಸಂಕ್ರಾಂತಿರುಚ್ಯತೇ-
ಅಮುಖ್ಯಾರಾಶಿ ಸಂಕ್ರಾಂತಿಃ ತುಲ್ಯಾಃಕಾಲವಿಧಿಸ್ತಯೋಃ ।

—ರೋಮಶಸಿದ್ಧಾಂತ

ಸ್ನಾನದಾನ ಜಪಶ್ರಾದ್ಧ ವ್ರತಹೋಮಾದಿ ಕರ್ಮಭಿಃ ।
ಸಂಸ್ಕೃತಂ ಚಲಸಂಕ್ರಾಂತಾವಕ್ಷಯಂ ಫಲಂ ಪ್ರೋಚ್ಯತೇ ॥

—ಪುಲಸ್ತ್ಯ

ಆದ್ದರಿಂದ ಸಾಯನ ಪಂಚಾಂಗ ಪರಕೀಯವದು, ಅಧಾರ್ಮಿಕವದು ಎಂದು ಭ್ರಮಿಸಕೂಡದು.

ಸಾಯನ-ನಿರಯನ ವಾದಗಳಲ್ಲಿ, ಫಲನಿರ್ಣಯದ ರೀತಿನೀತಿಗಳು ಕೂಡ ಭಿನ್ನವಾಗಿರುವವು ಇಷ್ಟೇ.

* * *

ಎನ್. ಕೆ. ಜೋಗಳೇಕರ

ಇವರ

ಜ್ಯೋತಿಷ್ಯ ಗ್ರಂಥಗಳು

೧. ವಧೂವರರ ಜೋತಿಷ್ಯ

ಬೆಲೆ : ರೂ. ೧೦-೦೦ (ಪಂಚಮಾವೃತ್ತಿ)

ಈ ಗ್ರಂಥದಲ್ಲಿ ವಧೂ-ವರರ ಜನ್ಮ ಟಿಪ್ಪಣಿ (ಕುಂಡಲಿ) ಗಳನ್ನು ಏಕೆ ಹಾಗೂ ಹೇಗೆ ನೋಡಬೇಕು ? ನಾಡಿ, ಯೋನಿ, ಗಣ, ಕೂಟಗಳೆಂದರೇನು ? ಇವನ್ನು ಏಕೆ, ಹೇಗೆ ನೋಡಬೇಕು ? ಮಂಗಳ (ಕುಜ) ದೋಷವೆಂದರೇನು ? ಕುಜ (ಮಂಗಳ) ದೋಷವನ್ನು ಏಕೆ ಹಾಗೂ ಹೇಗೆ ನೋಡಬೇಕು ? ಅಪವಾದ ಕುಜ ದೋಷವೆಂದರೇನು ? ಇದಲ್ಲದೆ ವಧೂ-ವರರ ವಿವಾಹ ಕಾಲ ಯಾವುದು ? ಅದು ಯಾವ ವಯಸ್ಸಿನಲ್ಲಿ, ಯಾವ ವರುಷ, ಯಾವ ತಿಂಗಳು ಎಂಬುದನ್ನು ಹೇಗೆ ಕಂಡುಹಿಡಿಯಬೇಕು ? ಇವೇ ಮೊದಲಾದ ವಿಷಯಗಳನ್ನು ವಿವೇಚಿಸಲಾಗಿದೆ.

೨ ಆಕಸ್ಮಿಕ ಧನಯೋಗ

ಬೆಲೆ : ರೂ ೬-೦೦ (ಚತುರ್ಥ ಮುದ್ರಣ)

ಈ ಗ್ರಂಥದಲ್ಲಿ ಆಕಸ್ಮಿಕ ಧನಯೋಗ ಎಂದರೇನು ? ಅದನ್ನು ಹೇಗೆ ಪರಿಶೀಲಿಸಬೇಕು? ಇದಲ್ಲದೆ ಸಟ್ಟಾ, ಲಾಟರಿ, ರೇಸು, ಭೂಗತ, ಪ್ರಾಯಿಜ ಬಾಂಡ, ಸ್ತ್ರೀಧನ (ಸ್ವಸ್ತ್ರೀ ಹಾಗೂ ಪರಸ್ತ್ರೀ), ವಾರಸಾ, ದತ್ತಕ, ಕಾಣಿಕೆ, ಲಂಚ, ಕಾಲಾ ಬಜಾರ ಇವುಗಳಿಂದ ಆಕಸ್ಮಿಕ ಧನಲಾಭವನ್ನು ಹೇಗೆ ಗುರುತಿಸಬೇಕೆಂಬುದನ್ನು ಮಾದರೀ ಕುಂಡಲಿಗಳಿಂದ ವಿವರಿಸಲಾಗಿದೆ.

೩. ಸ್ತ್ರೀ ಜ್ಯೋತಿಷ್ಯ

ಬೆಲೆ : ರೂ. ೧೦-೦೦ (ತೃತೀಯಾವೃತ್ತಿ)

ಸ್ತ್ರೀಯರ ಜೀವನದ ಅನೇಕ ಮುಖಗಳನ್ನು ಆಧರಿಸಿ ಬರೆದ ವಿಸ್ತಾರ ವಾದ ಗ್ರಂಥ. ಇದರಲ್ಲಿ ಸ್ತ್ರೀಯರ ಸ್ವಭಾವ, ಸೌಂದರ್ಯ, ವಿವಾಹಕಾಲ, ಪ್ರೇಮವಿವಾಹ, ಪುನರ್ವಿವಾಹ, ಅಂತರ್ಜಾತೀಯ ವಿವಾಹ, ಅಜನ್ಮ ಕುಮಾರಿ ಯೋಗ, ಘಟಸ್ಫೋಟ, ವೈಧವ್ಯಯೋಗ, ಗರ್ಭಧಾರಣ, ಸಂತತಿ, ಸಂತತಿ ಸುಖ ಹಾಗೂ ಗರ್ಭಪಾತನಯೋಗಗಳು, ಗರ್ಭ ಪ್ರತಿಬಂಧವನ್ನು ಯಾರು ಮಾಡಿಕೊಳ್ಳಬೇಕು, ವಂಧ್ಯಾಯೋಗ, ವಿದ್ಯೆ, ಭಾಗ್ಯ, ಮನೋವಾಸನೆ, ಆರ್ಥಿಕ ಸ್ವಾತಂತ್ರ್ಯ, ಸ್ವಾವಲಂಬನ, ರಾಜಕಾರಣ ಪಟುತ್ವ, ಸಮಾಜ ಧುರೀಣತ್ವ ಮುಂತಾದ ವಿಷಯಗಳನ್ನು ಆಧುನಿಕ ಸಮಾಜಕ್ಕನುಸರಿಸಿ, ಫಲ ಜ್ಯೋತಿಷ್ಯ ಶಾಸ್ತ್ರದ ಆಧಾರದ ಮೇಲಿಂದ ಹೇಗೆ ನೋಡಬೇಕೆಂಬುದನ್ನು ವಿವೇಚಿಸಿದೆ.

೪. ಅಜ್ಞಾತ ಜಾತಕ ದರ್ಶನ

ಬೆಲೆ: ರೂ. ೭-೨೦ (ದ್ವಿತೀಯಾವೃತ್ತಿ)

ಈ ಗ್ರಂಥದಲ್ಲಿ ಜನ್ಮವೇಳೆ-ಜನ್ಮಮಿತಿ ಸರಿಯಾಗಿ ಗೊತ್ತಿಲ್ಲದ ವ್ಯಕ್ತಿಯ ಜಾತಕವನ್ನು ಅವನ ನೇತ್ರ-ಕರ್ಣಾವಲೋಕನ ಗದ್ದ-ಗಲ್ಲಗಳ ಪರೀಕ್ಷೆ ಮೊದಲಾದ ಮುಖ ಲಕ್ಷಣಗಳ ಮೇಲಿಂದಲೂ ನಡೆ-ನುಡಿ, ನಿದ್ರಾಭಂಗಿ, ಅಭಿರುಚಿ ವಾಕ್ಚಾತುರ್ಯ ಮುಂತಾದ ಲಕ್ಷಣಗಳಿಂದಲೂ ಕಂಡು ಹಿಡಿಯಬಹುದು. ಅದರಂತೆ ವ್ಯಕ್ತಿಯ ಜೀವನದಲ್ಲಿಯ ನಡೆದುಹೋದ ಘಟನೆಗಳ ಮೇಲಿಂದ ಜಾತಕವನ್ನು ಒರೆಗೆಹಚ್ಚಿ ನೋಡಬಹುದು. ಈ ಮೊದಲಾದ ಸಂಗತಿಗಳಿಂದ ಯೋಗ್ಯ ಜನ್ಮಪತ್ರಿಕೆ ಇಲ್ಲದವನ ಭವಿಷ್ಯ ಹೇಗೆ ಹೇಳಬೇಕೆಂಬುದನ್ನು ಕುರಿತು ಈ ಗ್ರಂಥದಲ್ಲಿ ವಿವರಿಸಲಾಗಿದೆ.

೫. ಸಾಡೇಸಾತಿ

ಬೆಲೆ : ರೂ. ೧೦-೦೦ (ಚತುರ್ಥಾವೃತ್ತಿ)

ಈ ಗ್ರಂಥದಲ್ಲಿ ಸಾಡೇಸಾತಿ ಎಂದರೇನು? ಸಾಡೇಸಾತಿಯನ್ನು ಹೇಗೆ ಪರಿಶೀಲಿಸಬೇಕು? ಅನುಕೂಲ-ಪ್ರತಿಕೂಲ ಸಾಡೇಸಾತಿ ಎಂದರೇನು? ರಾಶಿ

ಸ್ಥಾನ, ಗ್ರಹಗಳು, ಭಾವ, ಭಾವೇಶ ಇವುಗಳ ಮೇಲಿಂದ ಶನಿಯು ಭ್ರಮಿಸುವಾಗ ಆಗುವ ಪರಿಣಾಮ. ದಶಾ-ಅಂತರ್ದಶೆಯ ಸಾಡೇಸಾತಿಯ ಪರಿಣಾಮ. ಅಷ್ಟಕವರ್ಗ ಪದ್ಧತಿಯಿಂದ ಸಾಡೇಸಾತಿಯ ವಿಚಾರ, ಇವೇ ಮೊದಲಾದ ಸಾಡೇಸಾತಿಯ ವಿಷಯವಾಗಿ ಮಾದರಿ ಕುಂಡಲಿಯೊಂದಿಗೆ ವಿವೇಚಿಸಲಾಗಿದೆ.

೬. ಉದ್ಯೋಗ ಜ್ಯೋತಿಷ್ಯ ಭಾಗ—೧ (ನೌಕರಿ ಮಾರ್ಗದರ್ಶಿ)

ಬೆಲೆ: ರೂ. ೨೦-೦೦ (ದ್ವಿತೀಯಾವೃತ್ತಿ)

ಈ ಗ್ರಂಥದಲ್ಲಿ ನೌಕರಿಗಳಲ್ಲಿಯ ಪ್ರಕಾರಗಳು, ಕಾರಕಗ್ರಹ ಲಗ್ನ, ಸ್ಥಾನ, ರಾಶ್ಯಾದಿಗಳನ್ನು ಕುರಿತು ಸುದೀರ್ಘವಾಗಿ ವಿವೇಚಿಸಲಾಗಿದ್ದು, ಜ್ಯೋತಿಷ್ಯ ಶಾಸ್ತ್ರದಲ್ಲಿಯೇ ಇದೊಂದು ನೂತನ ಸಂಶೋಧನಾ ಗ್ರಂಥವು.

ಜೀವನರಂಗ ಪ್ರವೇಶಿಸುವ ನೌಕರಿ ಉದ್ಯೋಗಾರ್ಥಿಗಳಿಗೆ ಸಹಾಯವಾಗುವ, ಜ್ಯೋತಿಷ್ಯ ಶಾಸ್ತ್ರದ ಆಧಾರದ ಮೇಲೆ ರಚಿತವಾದಂತಹ ಸರಿಯಾದ ಗ್ರಂಥವು ಯಾವುದೊಂದೂ ಈ ವರೆಗೆ ಇರಲಿಲ್ಲ. ಈಗ ಈ 'ಉದ್ಯೋಗ ಜ್ಯೋತಿಷ್ಯ'ವು ಅಂತಹ ನೌಕರಿ ಉದ್ಯೋಗಾರ್ಥಿಗಳಿಗೊಂದು ಕೈದೀವಿಗೆಯಾಗಿದೆ.

ಕಾರಕೂನರು, ಟೈಪಿಸ್ಟರು, ಶೀಘ್ರಲಿಪಿಗಾರರು, ಜವಾನರು, ಇನ್ಸಪೆಕ್ಟರರು, ಸ್ಟೋರ್‌ಕೀಪರರು, ವೈಜ್ಞಾನಿಕ ವಿಭಾಗದ ನೌಕರರು, ಅಗ್ನಿಶಾಮಕ ದಳದ ಸಿಬ್ಬಂದಿ, ಅರ್ಥಶಾಸ್ತ್ರಜ್ಞರು, ಅಂಕಿಸಂಖ್ಯಾ ತಜ್ಞರು, ಇಂಜನಿಯರುಗಳಲ್ಲಿಯ ಪ್ರಕಾರ ಹಾಗೂ ತಾಂತ್ರಿಕ ಸಿಬ್ಬಂದಿ ಎಂದು ಮುಂತಾಗಿ ವಿವಿಧ ಖಾತೆಗಳಲ್ಲಿ ಇರುವ ಸಾಮಾನ್ಯ ಹುದ್ದೆಗಳೂ ಹಾಗೂ ಸಿವ್ಹಿಲ್ ಸರ್ವಿಸ್, ಮಿಲಿಟರಿ ಸರ್ವಿಸ್, ಆಕಾಶವಾಣಿ, ರೇಲ್ವೆ, ಅಂಚೆ ಮತ್ತು ತಂತಿ, ಸಂಕ ಕೇಂದ್ರ ಅಬಕಾರಿ, ವರಮಾನ ತೆರಿಗೆ, ವಾಯುಯಾನೋದ್ಯೋಗ, ವಿಮಾನದಳ, ಸೈನ್ಯ, ಟಂಕಸಾಲೆ, ಆಡಿಟ ಹಾಗೂ ಅಕೌಂಟ, ಗಣಿ ಹಾಗೂ ಭೂಗರ್ಭ, ಸಚಿವಾಲಯ, ರೆವಿನ್ಯೂ, ಒಕ್ಕಲುತನ, ಸಾರ್ವಜನಿಕ ಶಿಕ್ಷಣ, ವೈದ್ಯಕ ಹಾಗೂ ಆರೋಗ್ಯ, ನ್ಯಾಯ, ಪೋಲೀಸ, ಸ್ಟೇಟ ಅಕೌಂಟ್ಸ್, ಅರಣ್ಯ, ಪಶುಸಂಗೋಪನ ಹಾಗೂ ಪಶುಸಂಪತ್ತು, ಕೋಟಗಾರಿಕೆ, ಕಮರ್ಶಿಯಲ್ ಟ್ಯಾಕ್ಸ್, ಸಹಕಾರ

ಹಾಗೂ ಮಾರ್ಕೆಟಿಂಗ್, ಕೂಲಿಕಾರ, ಸಮಾಜ ವಿಕಾಸ ಹಾಗೂ ಕಲ್ಯಾಣ, ವಿಮಾನಗಾರಿಕೆ, ಚಾರಿಟಿ ಕಮೀಶನರ, ಪಾನನಿರೋಧ ಹಾಗೂ ಲಂಚ ನಿರ್ಮೂಲನ, ಜೇಲು, ರೀಜನಲ್ ಟ್ರಾನ್ಸಪೋರ್ಟ, ರಾಷ್ಟ್ರೀಯ ಉದ್ಯೋಗಿಕ, ಬಂದರಗಾಹ, ಆಹಾರ ಪೂರೈಕೆ ಹಾಗೂ ಉತ್ಪಾದನೆ, ಪ್ರಾಚ್ಯವಸ್ತು ಸಂಶೋಧನೆ, ಬ್ಯಾಂಕ್ಸ, ಜೀವವಿಮಾ, ಸ್ಟೇಟ್ ಟ್ರಾನ್ಸಪೋರ್ಟ, ವಿಶ್ವವಿದ್ಯಾಲಯ, ಖಾದಿ ಗ್ರಾಮೋದ್ಯೋಗ, ಪತ್ರಿಕೋದ್ಯಮ ಹಾಗೂ ಕಾರಖಾನೆ, ಗಿರಣಿಗಳು ಮೊದಲಾದ ಭಿನ್ನ ಭಿನ್ನ ಖಾತೆಗಳು ಹುದ್ದೆಗಳನ್ನು ಪಡೆಯುವವನ ಜಾತಕ ಎಂತಿರಬೇಕು?

ಇದಲ್ಲದೆ ಈ ಗ್ರಂಥದಲ್ಲಿ ನೌಕರಿಗೆ ಸಂಬಂಧಿಸಿದಂತೆ, ನೌಕರಿ ಹತ್ತುವ ಕಾಲ, ಬದಲಿ, ಬಡತಿ, ರಜೆ, ಖಾಯಂ ಆಗುವದು, ಎಕ್ಸಟೆನ್ಶನ್ ಮೇಲಿನ ಅಧಿಕಾರಿಗಳ ಕೃಪಾವಕೃಪೆ ಇವುಗಳನ್ನು ಕುರಿತು ಸಹ ವಿವೇಚಿಸಲಾಗಿದೆ.

೭. ಉದ್ಯೋಗ ಜ್ಯೋತಿಷ್ಯ ಭಾಗ—೨

(ವೃತ್ತಿ ಮಾರ್ಗದರ್ಶಿ)

ಬೆಲೆ : ರೂ. ೨೫-೦೦

ಈ ಗ್ರಂಥದಲ್ಲಿ ಸ್ವತಂತ್ರ ಉದ್ಯೋಗಸ್ಥರ ವೃತ್ತಿಗಳನ್ನು ೧೨ ಅಧ್ಯಾಯಗಳಲ್ಲಿ ವಿವೇಚಿಸಲಾಗಿದೆ. ಮೊಟ್ಟಮೊದಲು ಯಾವದೇ ಸ್ವತಂತ್ರ ಉದ್ಯೋಗಸ್ಥರ ಜಾತಕ ಹೇಗೆ ಇರುತ್ತದೆ ಎಂಬುದನ್ನು ವಿವರಿಸಲಾಗಿದೆ. ಆ ಬಳಿಕ ಕೃಷಿ ವೃತ್ತಿ, ಕೃಷಿ ಆಧಾರಿತ ವೃತ್ತಿಗಳಾದ ಕೋಳಿ ಸಾಕಾಣಿಕೆ, ಹೈನುಗಾರಿಕೆ, ರೇಶ್ಮೆಯ ವ್ಯವಸಾಯ, ಜೇನು ಸಾಕಾಣಿಕೆ, ಮತ್ಸ್ಯೋದ್ಯಮ ಮೊದಲಾದವುಗಳ ವಿವರಣೆಯಿದೆ. ಆ ಬಳಿಕ ಹಲವು ವಿಧದ ಸಾರಿಗೆ ವೃತ್ತಿ, ಉದ್ಯಮ ವೃತ್ತಿ, ನಾನಾ ಬಗೆಯ ವ್ಯಾಪಾರಸ್ಥರ ವೃತ್ತಿ, ಎಲ್ಲ ಪ್ರಕಾರದ ಯಂತ್ರಗಳ (ರಿಪೇರರ್ಸ) ದುರಸ್ತಿಗಾರರ ವೃತ್ತಿ, ಫಾರೆಸ್ಟ ಅಬಕಾರಿ ಕಟ್ಟಡ ಮೊದಲಾದ ವಿಮೆ ನ್ಯೂಜಪೇಪರ ಮೊದಲಾದ ಎಲ್ಲ ಪ್ರಕಾರದ ಕಾಂಟ್ರಾಕ್ಟರರ ವಿದನ್ನಯವರ ವಿಭಿನ್ನ ವೃತ್ತಿ ಹೇಗೆ ಇರುತ್ತವೆ ಎಂಬುದರ ಸವಿಸ್ತಾರ ವಿವರಣೆಯಿದೆ. ಬುದ್ಧಿಜೀವಿಗಳಾದ ಎಲ್ಲ ಪ್ರಕಾರದ ಡಾಕ್ಟರರು, ಅಲೋಪತಿ, ಹೋಮಿಯೋಪತಿ, ಆಯುರ್ವೇದ, ಯುನಾನಿ, ನಿಸರ್ಗಚಿಕಿತ್ಸಾ ತಜ್ಞರು, ವಿಶ ಮೂಲಿಕಾ

ಪ್ರಯೋಗದ ವೈದ್ಯರು, ಚುಂಬಕ ಚಿಕಿತ್ಸಾ ತಜ್ಞರು, ಸೂಜಿ ಚಿಕಿತ್ಸರು, ದಂತ ವೈದ್ಯರು, ನೇತ್ರ ತಜ್ಞರು, ಮಾನಸಿಕ ರೋಗ ತಜ್ಞರು, ಶಸ್ತ್ರಚಿಕಿತ್ಸಾ ತಜ್ಞರು ಸಲಹೆಗಾರಿಕೆಯ ವೈದ್ಯರು, ಪೆಥಾಲಾಜಿಸ್ಟರು, ಕಿವಿ-ಮೂಗು-ಗಂಟಲು ತಜ್ಞರು, ಪ್ರಸೂತಿ ತಜ್ಞರು, ಚರ್ಮರೋಗ ತಜ್ಞರು, ಚಿಕ್ಕ ಮಕ್ಕಳ ರೋಗ ತಜ್ಞರು ಫಿಜಿಯೊ ಥೆರಪಿಸ್ಟರು, ದಾದಿಯರು, ಸೂಲಗಿತ್ತಿಯರು, ವಿವಿಧ ತಂತ್ರಜ್ಞರು, ಔಷಧಿ ವ್ಯಾಪಾರಸ್ಥರು, ವಾಸ್ತುಶಿಲ್ಪಿಗಳು (ಆರ್ಕಿಟೆಕ್ಟರು), ಚಾರ್ಟರ್ಡ್ ಅಕೌಂಟೆಂಟರು, ತೆರಿಗೆ ಸಲಹೆಗಾರರು, ಟ್ಯುಟೋರಿಯಲ್ ಕ್ಲಾಸುಗಳು ಹಾಗೂ ವಿಶಿಷ್ಟ ಪರೀಕ್ಷಾ ವಿಷಯಗಳ ತರಬೇತಿ ತಜ್ಞರು, ದಸ್ತು ಬರಹಗಾರರದ (ಬಾಂಡರಾಯಟರ್ಸ್), ಲೇಖಕರು, ಗ್ರಂಥಕರ್ತರು, ಸಂಪಾದಕರು, ಕವಿಗಳು, ಕಾದಂಬರಿಕಾರರು, ನಾಟಕಕಾರರು, ಸಂವಹನಮಾಧ್ಯಮ ಸಾಹಿತ್ಯ ಲೇಖಕರು, ವೈಚಾರಿಕ ಸಾಹಿತ್ಯದ ಲೇಖಕರು, ಶಾಸ್ತ್ರೀಯ ಸಾಹಿತ್ಯದ ಲೇಖಕರು, ಪತ್ರಕರ್ತರು, ಸೈದ್ಧಾಂತಿಕ ಸಾಹಿತ್ಯದ ಲೇಖಕರು, ಫಲಜ್ಯೋತಿಷ್ಯರುಗಳು, ಪುರೋಹಿತರು, ಮಾಂತ್ರಿಕರು, ಪಂಚಾಂಗಕರ್ತರು— ಇವರೇ ಮೊದಲಾದ ಬುದ್ಧಿಜೀವಿ ವೃತ್ತಿಯವರು, ಅಲ್ಲದೆ ಎಲ್ಲ ಪ್ರಕಾರದ ಕಲಾಕಾರರು ಹಾಗೂ ಕುಶಲಕರ್ಮಿಗಳಾದ ಚಿತ್ರಕಲಾಕಾರರು ಹಾಗೂ ಬಣ್ಣದ (ವರ್ಣ) ಕಲಾಕಾರರು, ಫೋಟೋಗ್ರಾಫರರು, ನೃತ್ಯಕಾರರು, ಸಂಗೀತಕಾರರು, ವಾದ್ಯಕಾರರು, ಸೌಂದರ್ಯ ವರ್ಧನಾ ತಜ್ಞರು (ಬ್ಯೂಟಿಪಾರ್ಲರ್), ಜೆರಾಕ್ಸ ಪ್ರಿಂಟರರು, ಬ್ಲಾಕ್ ಮೇಕರ್ಸ್, ಶಿಲ್ಪಕಲಾ ತಜ್ಞರು, ಕಸೂತಿ ತಜ್ಞರು, ನೇಕಾರರು, ಪತ್ತಾರರು, ಬಡಿಗರು, ಶಿಂಪಿಗರು, ಬಣ್ಣಗಾರರು, ಜಿನಗಾರರು, ನೀಲಗಾರರು, ಗೌಂಡಿಗಳು ಅಲ್ಲದೆ ಎಲ್ಲ ಪ್ರಕಾರದ ಮಾಲಕರು ಮನೆ, ಚಾಳ, ಟಾಕೀಜು ಗಿರಣಿ, ಕಾರಖಾನೆ, ವಾಹನಗಳ, ಮಶಿನಗಳ ಮಾಲಕ ವೃತ್ತಿಯವರ ವಿಷಯವಾಗಿ, ನಗರಸಭೆ, ಜಿಲ್ಲಾ ಪರಿಷತ್ತು, ಮಂಡಲಗಳು, ವಿಶ್ವವಿದ್ಯಾಲಯ, ವಿಧಾನಮಂಡಳ, ಸಂಸತ್ತುಗಳ ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕರ್ತರ ರಾಜಕಾರಣಿಗಳ ಜಾತಕ ಹೇಗೆ ಇರುತ್ತವೆ ಎಂಬುದರ ವಿವರಣೆಯೊಂದಿಗೆ ವೃತ್ತಿಗೆ ಸಂಬಂಧಿಸಿದ ಸಮಸ್ಯೆಗಳ ವಿವೇಚನೆಯೂ ಇದೆ. ಒಟ್ಟಿನಲ್ಲಿ ಎಲ್ಲ ಪ್ರಕಾರದ ಸ್ವತಂತ್ರ ವೃತ್ತಿಯವರ ವಿಷಯವಾಗಿ ಸುದೀರ್ಘವಾಗಿ ಸಂಶೋಧನಾತ್ಮಕವಾಗಿ ವಿವರಿಸಿದ ಗ್ರಂಥವು.

೮ ಅಧಿಕಾರೀ ಜ್ಯೋತಿಷ್ಯ

ಬೆಲೆ : ರೂ. ೪-೦೦ (ದ್ವಿತೀಯಾವೃತ್ತಿ)

ಈ ಗ್ರಂಥದಲ್ಲಿ ವೃಶ್ಚಿಕರಲ್ಲಿಯ ಪ್ರಕಾರಗಳು ಹಾಗೂ ಅವರ ಸ್ವಭಾವ ನಡೆ-ನುಡಿಗಳು ಹೇರಿರುವವು ಫಲ ಜ್ಯೋತಿಷ್ಯ ಶಾಸ್ತ್ರದ ಮೇಲಿರುವ ಆಕ್ಷೇಪಣೆಗಳಿಗೆ ಉತ್ತರ......ಆಧುನಿಕ ಸಮಾಜದಲ್ಲಿ ಬರುವ ಕ್ಲಿಷ್ಟ ಹಾಗೂ ಸೂಕ್ಷ್ಮ ಪ್ರಶ್ನೆಗಳನ್ನು ಜ್ಯೋತಿಷಿಗಳು ಪ್ರತಿನಿತ್ಯವೂ ಹೇಗೆ ಎದುರಿಸಬೇಕಾಗುತ್ತದೆ ಎಂಬುದರ ನೋಟ......

ಜ್ಯೋತಿಷಿಯು ತನ್ನ ವೃತ್ತಿಯಲ್ಲಿ ಯಶಸ್ವಿಯಾಗಲು ಯಾವ ಆದರ್ಶಗಳನ್ನು ಪಾಲಿಸಬೇಕು, ಎಂತಹ ವ್ಯಕ್ತಿತ್ವವನ್ನು ಹೊಂದಿರಬೇಕು, ಇರಬೇಕಾದ ಗುಣಗಳು, ಪಾಲಿಸಬೇಕಾದ ನಿಯಮಗಳು ಯಾವವು ಈ ಮೊದಲಾದ ವಿಷಯಗಳನ್ನು ಕುರಿತು ಸುದೀರ್ಘವಾಗಿ ವಿವರಿಸಲಾಗಿದೆ.

೯. ಆರೋಗ್ಯ ಜ್ಯೋತಿಷ್ಯ

ಬೆಲೆ : ರೂ. ೧೨-೦೦ (ದ್ವಿತೀಯಾವೃತ್ತಿ)

ಈ ಗ್ರಂಥದಲ್ಲಿ ಜಾತಕ ನೋಡಿ, ಜಾತಕನಿಗೆ ಯಾವ ಯಾವ ರೋಗಗಳು ಯಾವ ಯಾವಾಗ ಬರುವವು? ಹಾಗು ಬಂದ ರೋಗಗಳು ಗುಣಮುಖವಾಗುವುದು ಯಾವಾಗ ? ರೋಗ ನಿದಾನದ ವಿಧಿ ವಿಧಾನಗಳೇನು ? ಔಷಧ ಸೇವಿಸುವ ಕಾಲ, ಶಸ್ತ್ರಚಿಕಿತ್ಸೆಗಳಿಗಾಗಿ ಉತ್ತಮ ಮುಹೂರ್ತಗಳು ಇವೇ ಮುಂತಾಗಿ ರೋಗಿ-ರೋಗ-ಆಯುಷ್ಯ, ದುರ್ಮರಣಾದಿಗಳನ್ನು ಕುರಿತು ಸುದೀರ್ಘವಾಗಿ ಸವಿವರವಾಗಿ ಬರೆಯಲ್ಪಟ್ಟ ಕನ್ನಡದಲ್ಲಿಯೇ ಪ್ರಪ್ರಥಮವಾದ ಸಂಶೋಧನಾ ಗ್ರಂಥವಿದು. ಆರವತ್ತು ರೋಗಗಳ ವಿಷಯವಾಗಿ ಸವಿಸ್ತಾರ ಜ್ಯೋತಿಷ ಶಾಸ್ತ್ರ ಪ್ರಕಾರ ವಿವೇಚನೆ ನಡೆಸಿದುದು ಈ ಗ್ರಂಥದ ವೈಶಿಷ್ಟ್ಯ.

೧೦. ಶಿಕ್ಷಣ ಜ್ಯೋತಿಷ್ಯ

ಬೆಲೆ : ರೂ. ೧೫-೦೦ (ದ್ವಿತೀಯ ಆವೃತ್ತಿ)

ಜಾತಕಗಳ ಮೇಲಿಂದ ಶಿಕ್ಷಣದ ವಿಚಾರ, ಶಿಕ್ಷಣದಲ್ಲಿಯ ಅಡೆ-ತಡೆಗಳ ಸುದೀರ್ಘ ವಿಶ್ಲೇಷಣೆ, ಭಾರತದಲ್ಲಿರುವ ಸುಮಾರು ಎಂಬತ್ತು ವಿಧದ ಶಿಕ್ಷಣ

ಕೋರ್ಸುಗಳ ಸವಿಸ್ತಾರ ವಿವರಣೆ, ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸು ಮುಂತಾದವನ್ನು ಎಂಥ ಜಾತಕನು ಅಳವಡಿಸಿಕೊಳ್ಳಬಹುದು? ಥೇರಿ, ಪ್ರಾತ್ಯಕ್ಷಿಕೆ, ಮೌಖಿಕ ಬೋರ್ಡ ಹಾಗೂ ವಿಶ್ವವಿದ್ಯಾಲಯ, ಸ್ಪರ್ಧಾತ್ಮಕ ಮುಂತಾದ ವಿವಿಧ ಪರೀಕ್ಷೆಗಳಲ್ಲಿ ತೇರ್ಗಡೆ ಯಾಗಲು ಜಾತಕ ಹೇಗಿರಬೇಕು? ಇತ್ಯಾದಿಯಾಗಿ ವಿದ್ಯಾರ್ಥಿಗಳ ಅಗು ಹೋಗಿನ ಮೇಲೆ ಬೆಳಕು ಬೀರುವ ಪ್ರಪ್ರಥಮ ಸಂಶೋಧನಾತ್ಮಕ ಗ್ರಂಥ.

೧೧. ಶಕುನ ಜ್ಯೋತಿಷ್ಯ

ಬೆಲೆ : ರೂ. ೧೫-೦೦

ಈ ಗ್ರಂಥದಲ್ಲಿ ಶಕುನ ಶಾಸ್ತ್ರದ ಉತ್ಪತ್ತಿ, ಪ್ರಾಣಿಗಳಿಂದ ಶಕುನಗಳ ವಿಚಾರ, ಸಾಕುಪ್ರಾಣಿಗಳ ಕಾರ್ಯಗುಣ ಹಾಗೂ ಲಕ್ಷಣಗಳ ವಿಚಾರ, ಪಕ್ಷಿಗ ಳಿಂದ ಶಕುನಗಳ ವಿಚಾರ, ಕೀಟಗಳಿಂದ ಶಕುನಗಳ ವಿಚಾರ, ಶೀನಿನ ಶಕುನ ಗಳು, ಜನನ-ಮರಣಗಳ ಶಕುನಗಳು, ಮಳೆ ಹಾಗೂ ಜಲಶಿಲ್ಪಿಯು ಶಕುನಗಳ ಉಪ್ಪಿನ ಶಕುನಗಳು, ಅಂಗಾಂಗಗಳ ಶಕುನಗಳ ವಿಚಾರ, ಪಾಶ್ಚಿಮಾತ್ಯರಲ್ಲಿಯ ಶಕುನಗಳ ವಿಚಾರ, ಪ್ರವಾಸ ಕೈಕೊಳ್ಳುವ ಸಮಯದಲ್ಲಿಯ ಶಕುನಗಳು, ರೂಢಿ, ನಂಬಿಕೆ, ಪ್ರವಾಸ ಸಂಪ್ರದಾಯಗಳ ವಿಚಾರ, ಸ್ವಪ್ನಗಳ ಶಕುನಗಳು ಹೀಗೆ ಶಕುನ ವಿಷಯವಾಗಿ ಸುದೀರ್ಘವಾಗಿ ಸವಿವರವಾಗಿ ಬರೆಯಲ್ಪಟ್ಟ ಕನ್ನಡದಲ್ಲಿಯೇ ಪ್ರಪ್ರಥಮವಾದ ಸಂಶೋಧನಾತ್ಮಕ ಗ್ರಂಥವಿದು.

೧೨. ಚುನಾವಣೆಯ ಜ್ಯೋತಿಷ್ಯ

ಬೆಲೆ : ರೂ. ೧೫-೦೦

ಈ ಗ್ರಂಥದಲ್ಲಿ ಚುನಾವಣೆಯಲ್ಲಿಯ ಸೋಲು-ಗೆಲವುಗಳನ್ನು ವಿಶ್ಲೇಷಿ ಸುವಾಗ ಅಭ್ಯರ್ಥಿಗಳ ಪ್ರಭಾವ, ಆರ್ಥಿಕ ಬಲ, ಓಡಿದಿನ ಸಾಧನೆ, ಸ್ಥಳೀಯ- ರಾಷ್ಟ್ರೀಯ ಸಮಸ್ಯೆಗಳ ಪ್ರಭಾವ ಮೊದಲಾದ ಚುನಾವಣೆಯ ಸಮಯದಲ್ಲಿ ಇರುವ ಸಮಸ್ಯೆಗಳನ್ನು ಜ್ಯೋತಿಷ್ಯ ದೃಷ್ಟಿಯಿಂದ ವಿವೇಚಿಸಲಾಗಿದೆಯಲ್ಲದೆ, ರಾಜಕೀಯ, ಸ್ಥಾನಿಕ, ಶೈಕ್ಷಣಿಕ, ಸಹಕಾರ, ಸಾಂಸ್ಕೃತಿಕ, ಧಾರ್ಮಿಕ, ಕಾರ್ಮಿಕ ವೃತ್ತಿ ಸೇವಾ ಸಂಘ-ಸಂಸ್ಥೆ ಮೊದಲಾದ ಎಲ್ಲ ಬಗೆಯ ಚುನಾವಣೆಯ ಪ್ರಕಾ ರಗಳನ್ನು ವಿವೇಚಿಸಿ, ಚುನಾವಣೆಯ ಪೂರ್ವ ಹಾಗೂ ನಂತರದ ಸಮಸ್ಯೆಗ ಳಾದ— ಯಾವ ಪಕ್ಷದಿಂದ ಸ್ಪರ್ಧಿಸಬೇಕು? ಇಚ್ಛಾನುಸಾರದ ಪಕ್ಷದ ಟಿಕೇಟು

ಲಭಿಸಬಹುದೇ? ಸ್ಪರ್ಧೆಯಲ್ಲಿಯ ಬಗೆ, ಆಯ್ಕೆಯಲ್ಲಿಯ ಪ್ರಕಾರ, ಚುನಾವಣಾ ಕಂಟಿ, ಪಕ್ಷಾಂತರದ ಅವಾಂತರ, ಅಧಿಕಾರ, ಸ್ಥಾನ ಯಾರಿಗೆ ಲಭಿಸುವದು — ಇವೇ ಮೊದಲಾದ ವಿಷಯಗಳನ್ನು ವಿವೇಚಿಸಿರುವುದಲ್ಲದೆ ೧೮೯೫ರಿಂದ ೧೯೫೫ರೊಳಗೆ ಜನಿಸಿದ ವ್ಯಕ್ತಿಗಳ ಚುನಾವಣೆ ಹೇಗಾಗುತ್ತದೆ ಹಾಗೂ ಮುಂಬರುವ ಇಪ್ಪತ್ತು ವರ್ಷಗಳ ಕಾಲ ಯಾವ ರಾಶಿಯವರಿಗೆ ಹೇಗಿದೆ? ಇತ್ಯಾದಿ ಚುನಾವಣೆಗೆ ಸಂಬಂಧಿಸಿದ ವಿಷಯಗಳ ಮಾದರಿ ಜಾತಕದೊಂದಿಗೆ ಸುದೀರ್ಘ ವಿಶ್ಲೇಷಣೆಯ ಪ್ರಪ್ರಥಮ ಸಂಶೋಧನಾತ್ಮಕ ಗ್ರಂಥವಿದು.

೧೩. ಪಂಚಾಂಗ ಪ್ರದೀಪ

ಬೆಲೆ : ೧೦-೦೦ (ಚತುರ್ಥ ಆವೃತ್ತಿ)

ಹಿಂದೂ ಜೀವನದ ಅವಿಭಾಜ್ಯ ಅಂಗವಾದ ಪಂಚಾಂಗದ ಕೈಪಿಡಿ ಇದು. ಈ ಪುಸ್ತಕದಲ್ಲಿ ಪಂಚಾಂಗವನ್ನು ಹೇಗೆ ನೋಡಬೇಕು? ತಿಥಿಗಳನ್ನು ನಿರ್ಣಯಿಸುವದು ಹೇಗೆ? ನಿತ್ಯನಕ್ಷತ್ರ ಹೇಗೆ ಕಂಡುಹಿಡಿಯಬೇಕು? ಮೊದಲಾದ ವಿಷಯಗಳನ್ನು ವಿವೇಚಿಸಲಾಗಿದೆ.

೧೪. ಗ್ರಹಗತಿ

ಬೆಲೆ : ರೂ. ೫-೦೦ (ದ್ವಿತೀಯಾವೃತ್ತಿ)

ಈ ಗ್ರಂಥದಲ್ಲಿ ಗ್ರಹಗಳ ಗೋಚರೀ ಫಲಗಳಾವವು? ಗ್ರಹಗತಿಯನ್ನು ಹೇಗೆ ನೋಡಬೇಕು? ವೃತ್ತಪತ್ರಿಕೆಯಲ್ಲಿಯ ನಿಯತಕಾಲಿಕ ರಾಶಿ ಭವಿಷ್ಯವನ್ನು ಹೇಗೆ ಬರೆಯುವರು? ಹೇಗೆ ಬರೆಯಬೇಕು? ವೃತ್ತಪತ್ರಿಕೆಗಳಲ್ಲಿಯ ಭವಿಷ್ಯಗಳ ವಿಭಿನ್ನತೆಗೆ ಕಾರಣಗಳೇನು? ಆಯಾ ರಾಶಿಯವರಿಗೆ ಶುಭಾಶುಭ ಅವಧಿಗಳು ಪ್ರತಿ ವರ್ಷ ಯಾವವು? ಈ ಮೊದಲಾದ ಗ್ರಹಗಳ ಗೋಚರೀ ಫಲಗಳ ವಿಷಯವಾಗಿ ವಿವೇಚಿಸಿದ ಪುಸ್ತಕ.

ತೀವ್ರ ಪ್ರಕಟವಾಗಲಿರುವ ನಕ್ಷತ್ರಗಳು

ಪರಿಹಾರ ಜ್ಯೋತಿಷ್ಯ (ಅಚ್ಚಿನಲ್ಲಿ) ಗ್ರಹದರ್ಶನ
ಗ್ರಹಯೋಗ ದಶಾದರ್ಪಣ ಕುಂಡಲೀ ಸಂಗ್ರಹ
ಶರೀರ ಲಕ್ಷಣ ಜ್ಯೋತಿಷ್ಯ ಪ್ರಸೂತಿ ಜ್ಯೋತಿಷ್ಯ
ಕುಂಡಲಿ ಗುಣನಿರ್ಣಯ (ಅಚ್ಚಿನಲ್ಲಿ)